ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

## ಅಕ್ಟೋಬರ್

2013

# ರಾಜ್ಯ

## ರಾಜ್ಯಾದ್ಯಂತ ಜಾನುವಾರುಗಳನ್ನು ಕಾಡುತ್ತಿರುವ ಕಾಲುಬಾಯಿ ಜ್ವರ

ರಾಜ್ಯಾದ್ಯಂತ ಕಾಲು ಬಾಯಿ ಜ್ವರ ಉಲ್ಬಣಿಸಿದ್ದರಿಂದ ಪರಿಸ್ಥಿತಿ ಬಿಗಡಾಯಿಸಿದ್ದು, ಮೂಕ ಪ್ರಾಣಿಗಳು ಜ್ವರದಿಂದ ಬಳಲಿ ಚಿಕಿತ್ಸೆ ಕೊಡಿಸಿ ಎಂದು ಮೌನವಾಗಿ ರೋದಿಸುತ್ತಿವೆ. ಪಶು ವೈದ್ಯರು ಗುರುತಿಸಿರುವಂತೆ ಸುಮಾರು 7 ವಿಧದ ವೈರಸ್‌ಗಳಿಂದ ಕಾಣಿಸಿಕೊಳ್ಳುವ ಈ ಬಾಧೆಗೆ ಈಗಾಗಲೇ ರಾಜ್ಯಾದ್ಯಂತ 875 ಜಾನುವಾರುಗಳು ಬಲಿಯಾಗಿವೆ.

**ಕಾಲು ಬಾಯಿ ಜ್ವರದ ಲಕ್ಷಣಗಳೇನು?**

ಕಾಲು ಬಾಯಿ ಜ್ವರ ಕಾಣಿಸಿಕೊಂಡ ಜಾನುವಾರುಗಳ ಬಾಯಿ, ನಾಲಿಗೆ, ವಸಡು ಹಾಗೂ ಕೆಚ್ಚಲಿನ ಮೇಲೆ ಸಣ್ಣ ಸಣ್ಣ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ದನಗಳ ಕಾಲಿನ ಗೊರಸಿನ ಮಧ್ಯೆ ಅಂದರೆ ಪಾದದ ಸೀಳಿನ ನಡುವೆ ಹುಣ್ಣುಗಳಾಗುತ್ತವೆ. 104 ರಿಂದ 107 ಡಿಗ್ರಿ ಸೆಲ್ಸಿಯಸ್‌ವರೆಗೂ ಜ್ವರ ಕಾಣಿಸಿಕೊಳ್ಳುತ್ತದೆ. ಹೀಗೆ ಜ್ವರ ಕಾಣಿಸಿಕೊಂಡ ಜಾನುವಾರುಗಳು ಮೇವು ತಿನ್ನುವುದನ್ನೇ ನಿಲ್ಲಿಸುತ್ತವೆ, ಕುಂಟುತ್ತಾ ನಡೆಯುತ್ತವೆ. ಸಂಪೂರ್ಣವಾಗಿ ನಿತ್ರಾಣಗೊಂಡು ಮೇಲೆಳೆದಂತಾಗುತ್ತವೆ.

**ಈ ಜ್ವರಕ್ಕೆ ಕಾರಣವೇನು?**

ಫುಟ್ ಆ್ಯಂಡ್ ಮೌತ್ ಎಂಬ ವೈರಸ್‌ನಿಂದ ಹರಡುತ್ತದೆ. ಪಶುವೈದ್ಯಕೀಯ ಭಾಷೆಯಲ್ಲಿ ಒ, ಎ. ಸಿ, ಏಷ್ಯಾ 1, ಏಷ್ಯಾ 22, ಎಸ್ ಐಟಿ ಸೇರಿದಂತೆ ಏಳು ವಿಧದ ವೈರಾಣುಗಳನ್ನು ಗುರುತಿಸಲಾಗಿದೆ. ವಾತಾವರಣದ ಉಷ್ಣಾಂಶ 17 ರಿಂದ 27 ಡಿಗ್ರಿ ಸೆಲ್ಸಿಯಸ್ ಇದ್ದಾಗ ಮಳೆ ಬೀಳುತ್ತಿದ್ದರೆ ಈ ರೋಗಕ್ಕೆ ಕಾರಣವಾಗುವ ವೈರಾಣುಗಳು ಸೃಷ್ಟಿಯಾಗುತ್ತವೆ. ಇತ್ತೀಚೆಗೆ ಮಳೆ ಬಿದ್ದಾಗ ಇಂಥದ್ದೇ ವಾತಾವರಣ ಇದ್ದಿದ್ದರಿಂದ ಈ ವೈರಸ್‌ಗಳು ವ್ಯಾಪಕವಾಗಿ ಹರಡಿದ್ದು, ಜಾನುವಾರುಗಳಲ್ಲಿ ರೋಗ ಕಾಣಿಸಿಕೊಳ್ಳುತ್ತಿದೆ. ಈ ವೈರಾಣುಗಳು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಲೇ ಇರುವುದರಿಂದ ಈ ರೋಗಕ್ಕೆ ನಿಖರವಾದ ರೋಗನಿರೋಧಕ ಮದ್ದು ಇಲ್ಲ. ಹೀಗಾಗಿ ರೋಗ ಕಾಣಿಸಿಕೊಂಡಾಗ ಯಾವ ವೈರಾಣು ಕಾರಣವೆಂದು ಪತ್ತೆ ಹಚ್ಚಿ ಲಸಿಕೆ ಮೂಲಕವೇ ಜ್ವರವನ್ನು ನಿಯಂತ್ರಿಸಬೇಕು.

**ಹೇಗೆ ಹರಡುತ್ತದೆ?**

ಸಾಂಕ್ರಾಮಿಕ ರೋಗವಾದ ಇದು ಒಂದು ಜಾನುವಾರುವಿನಿಂದ ಇನ್ನೊಂದು ಜಾನುವಾರಿಗೆ ಬಹುಬೇಗ ಹರಡುತ್ತದೆ. ಗಾಳಿ ಮೂಲಕ ಸುಮಾರು 60 ಕಿ.ಮೀ. ದೂರದವರೆಗೂ ಇದು ಹರಡಬಲ್ಲದು. ಕಾಲು ಬಾಯಿ ಜ್ವರ ಕಾಣಿಸಿಕೊಂಡ ಜಾನುವಾರಿಗೆ ಕುಡಿಸಿದ ನೀರನ್ನು ಇನ್ನೊಂದು ದನಕ್ಕೆ ಕುಡಿಸುವುದು, ರೋಗಬಾಧಿತ ಜಾನುವಾರು ತಿಂದು ಬಿಟ್ಟ ಮೇವು ಇನ್ನೊಂದು ದನಕ್ಕೆ ಹಾಕುವುದರಿಂದ ಈ ರೋಗ ಬಹುಬೇಗ ಹರಡುತ್ತದೆ.

**ತಡೆಗಟ್ಟುವುದು ಹೇಗೆ?**

- ಕಾಲು ಬಾಯಿ ಜ್ವರ ಕಾಣಿಸಿಕೊಂಡಾಗ ಇತರೆ ಜಾನುವಾರುಗಳೊಂದಿಗೆ ಕೊಟ್ಟಿಗೆಯಲ್ಲಿಯೇ ಕಟ್ಟುವ ಬದಲು, ಬೇರೆಡೆ ವ್ಯವಸ್ಥೆ ಮಾಡುವುದು ಒಳ್ಳೆಯದು.

- ಕೊಟ್ಟಿಗೆಯನ್ನು ಆಗಾಗ ಸ್ವಚ್ಛಗೊಳಿಸಿ. ರೋಗ ಬಾಧಿತ ಜಾನುವಾರಿಗೆ ಕುಡಿಸಿದ ನೀರು, ಮೇವು ಆರೋಗ್ಯವಾಗಿರುವ ದನಗಳಿಗೆ ನೀಡಬಾರದು.
- ಜ್ವರ ಕಾಣಿಸಿಕೊಂಡವುಗಳನ್ನು ಯಾವುದೇ ರೀತಿಯಾಗಿ ಇತರೆ ದನಗಳ ಸಂಪರ್ಕಕ್ಕೆ ಬರದಂತೆ ನೋಡಿಕೊಳ್ಳಬೇಕು.
- ವರ್ಷಕ್ಕೆ ಎರಡು ಬಾರಿ ತಪ್ಪದೇ ಲಸಿಕೆ ಹಾಕಿಸಬೇಕು.
- ರೋಗಪೀಡಿತ ರಾಸುಗಳಿಗೆ ಶೇ.0.5 ರಷ್ಟು ಅಡುಗೆ ಸೋಡಾ ದ್ರಾವಣದಿಂದ ಶುದ್ಧಗೊಳಿಸಿ. ಮೃದು ಆಹಾರ, ಗಂಜಿ, ಬಾಳೆ ಹಣ್ಣು, ರಾಗಿ ಅಂಬಲಿ ನೀಡಬೇಕು.

**ಪರಿಣಾಮ ಏನು?**

- ಕಾಲು ಬಾಯಿ ಜ್ವರದಿಂದ ಬಳಲಿ ಚೇತರಿಸಿಕೊಂಡ ಜಾನುವಾರು ನೀಡುವ ಹಾಲಿನ ಪ್ರಮಾಣ ಕಡಿಮೆಯಾಗುತ್ತದೆ.
- ದೊರೆಯುವ ಹಾಲಿನಲ್ಲಿಯೂ ಸತ್ವ ಕಡಿಮೆ ಇರುತ್ತದೆ.
- ಎತ್ತುಗಳ ಶಕ್ತಿ ಕುಂದಿ ಉಳುಮೆ ಮಾಡುವಾಗ ತೇಗಲು ಆರಂಭಿಸುತ್ತವೆ.
- ಜಾನುವಾರುಗಳ ಮೈಮೇಲಿನ ಕೂದಲು ಬಿರುಸಾಗುತ್ತದೆ. ಬಿಸಿಲಿನಲ್ಲಿ ನಡೆಯಲಾಗದಷ್ಟು ನಿತ್ರಾಣಗೊಳ್ಳುತ್ತವೆ. ದೈಹಿಕವಾಗಿ ಬಳಲಿ ಆಯುಷ್ಯ ಕ್ಷೀಣಿಸುತ್ತದೆ.

**ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾತ್ರಿ ಸಂಚಾರ ನಿಷೇಧ ತೆರವಿಗೆ ಹೆಚ್ಚಿದ ಒತ್ತಡ: ವರದಿ**

ರಾಷ್ಟ್ರೀಯ ಹೆದ್ದಾರಿ 212 ರಲ್ಲಿ ಸುಲ್ತಾನ್ ಬತ್ತೇರಿ-ಗುಂಡಾಲಪೆಟ್ಟು ಮಧ್ಯೆ ರಾತ್ರಿ ವಾಹನ ಸಂಚಾರ (ಬಂಡೀಪುರ ಹುಲಿ ರಕ್ಷಿತಾರಣ್ಯದ ಮೂಲಕ ಹಾದುಹೋಗುವ ರಸ್ತೆ) ಹಾಗೂ ನೀಲಂಬೂರು-ನಂಚನ್‌ಕೊಡೆ ರೇಲ್ವೆ ಮಾರ್ಗ ಕುರಿತಂತೆ ಕರ್ನಾಟಕ-ಕೇರಳ ರಾಜ್ಯಗಳ ಮುಖ್ಯಮಂತ್ರಿಗಳು ಸಮಾಲೋಚನೆ ನಡೆಸಲಿದ್ದಾರೆ. ಒಂದು ವೇಳೆ ಕೇರಳ ಸರ್ಕಾರದ ಒತ್ತಡಕ್ಕೆ ಸರ್ಕಾರ ಮಣಿದಲ್ಲಿ ರಾತ್ರಿ ವೇಳೆ ವಾಹನ ಸಂಚಾರ ಮತ್ತೆ ಆರಂಭವಾಗಲಿದ್ದು, ವನ್ಯಜೀವಿಗಳ ಪಾಲಿಗೆ ಇದು ಕಂಟಕವಾಗಲಿದೆ.

**ಏನಿದು ವಿವಾದ?**

ಬಂಡೀಪುರ ರಕ್ಷಿತಾರಣ್ಯದಲ್ಲಿ ಹಾದು ಹೋಗುವ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ೯ ರಿಂದ ಬೆಳಗಿನ ಜಾವ ೬ ಗಂಟೆವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ರಾತ್ರಿ ವೇಳೆ ವನ್ಯಜೀವಿಗಳು ವಾಹನಗಳಿಗೆ ಸಿಲುಕಿ ಮೃತಪಡುತ್ತವೆ ಎಂಬ ಕಾರಣಕ್ಕೆ ಹೈಕೋರ್ಟ್ ಆದೇಶದಂತೆ ಹಿಂದಿನ ಸರ್ಕಾರ ಆದೇಶಿಸಿತ್ತು. ಪ್ರಸ್ತುತ ಪ್ರಕರಣ ಸುಪ್ರೀಂ ಕೋರ್ಟ್ ಮುಂದಿದೆ. ಇನ್ನೊಂದೆಡೆ ರಾ.ಹೆ. 212 ರ ಬದಲಾಗಿ ಹುಣಸೂರು-ಗೋಣಿಕೊಪ್ಪ-ಕುಟ್ಟ-ಕಾರ್ಟಿಕುಳಂ ಮೂಲಕ ಇರುವ ಬದಲಿ ರಸ್ತೆ ಅಭಿವೃದ್ಧಿಗೆ ರಾಜ್ಯ ಸರ್ಕಾರ 48 ಕೋಟಿ ಬಿಡುಗಡೆ ಮಾಡಿದ್ದು, ರಸ್ತೆ ಅಭಿವೃದ್ಧಿ ಕಾರ್ಯ ಮುಕ್ತಾಯದ ಹಂತದಲ್ಲಿದೆ. ಆದರೆ, ಈ ಮಾರ್ಗ 30 ಕಿ.ಮೀ. ಹೆಚ್ಚು ದೂರ ಕ್ರಮಿಸಬೇಕಿರುವುದರಿಂದ ರಾ.ಹೆ. 212 ರಲ್ಲೇ ರಾತ್ರಿ ವಾಹನ ಸಂಚಾರ ಆರಂಭಿಸಬೇಕು ಎಂಬುದು ಕೇರಳ ಸರ್ಕಾರದ ಒತ್ತಾಯ.

**ರೇಲ್ವೆ ಮಾರ್ಗ ನಿರ್ಮಾಣ:**

ಇನ್ನು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೃದಯ ಭಾಗದಲ್ಲಿ ಹಾದು ಹೋಗುವ ನಂಜನಗೂಡು- ನೀಲಂಬೂರ್ ರೇಲ್ವೆ ಮಾರ್ಗ ಸಮೀಕರಣ ಆಗ್ರಹಿಸಿ ವೈನಾಡ್ ಮೂಲಕ ನೀಲಗಿರೀಸ್ ವೈನಾಡ್ ರಾಷ್ಟ್ರೀ ಹೆದ್ದಾರಿ ಮತ್ತು ರೇಲ್ವೆ ಕಾರ್ಯಕಾರಿ ಸಮಿತಿ ಚೆನ್ನೈನಲ್ಲಿರುವ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದಲ್ಲಿ ಅರ್ಜಿ ದಾಖಲಿಸಿದೆ. ಈ ಅರ್ಜಿಯಲ್ಲೂ ರಾತ್ರಿ ಸಂಚಾರ ನಿರ್ಬಂಧ ತೆರವಿಗೆ ಕೋರಲಾಗಿದೆ. ಆದರೆ, ನಂಜನಗೂಡು-ನೀಲಂಬೂರು ರೇಲ್ವೆ ಮಾರ್ಗ ಆರ್ಥಿಕವಾಗಿ ಕಾರ್ಯಸಾಧುವಲ್ಲ ಮತ್ತು ಈ ಪ್ರಸ್ತಾಪ ಕೈಗೊಳ್ಳಲು ಇಲಾಖೆಯಲ್ಲಿ ಮೂಲ ಸೌಕರ್ಯ ಇಲ್ಲ ಎಂದು ರೇಲ್ವೆ ಮಂಡಳಿ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದೆ.

**ಆತಂಕವೇನು?**

ಸಾಮಾನ್ಯವಾಗಿ ರಾಷ್ಟ್ರೀಯ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಒಂದು ರಾಜ್ಯದ ಹಿತಾಸಕ್ತಿಗಿಂತ ಪಕ್ಷದ ಹಿತಕ್ಕೆ ಹೆಚ್ಚು ಬೆಲೆ ಎಂಬುದು ಅನೇಕ ಪ್ರಕರಣಗಳಲ್ಲಿ ಸಾಬೀತಾಗಿದೆ. ಪ್ರಸ್ತುತ ರಾಜ್ಯ ಮತ್ತು ಕೇರಳದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಅದೇ ರೀತಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದಲ್ಲಿದೆ. ಹೀಗಿರುವಾಗ ಈ ಪಕ್ಷದ ಜನಪ್ರತಿನಿಧಿಗಳು ಪಕ್ಷನಿಷ್ಠೆಗೆ ಆದ್ಯತೆ ನೀಡಿದರೆ ಬಂಡೀಪುರ ರಕ್ಷಿತಾರಣ್ಯದ ರಸ್ತೆಯಲ್ಲಿ ರಾತ್ರಿ ವಾಹನ ಸಂಚಾರ ನಿಷೇಧ ತೆರವಾಗುವುದೇ? ವನ್ಯ ಜೀವಿಗಳಿಗೆ ಮತ್ತೆ ಆತಂಕ ಕಾಡುವುದೇ? ನ್ಯಾಯಾಲಯದ ಆದೇಶ ಮೀರಿ ಸರ್ಕಾರಗಳು ನಿರ್ಧಾರ ಕೈಗೊಳ್ಳುವವೇ ಎಂಬ ಆತಂಕ ಸೃಷ್ಟಿಯಾಗಿದೆ.

<u>ರಾಜ್ಯ ಸರ್ಕಾರದ 'ಸಕಾಲ' ಯೋಜನಾ ಅನುಷ್ಠಾನಕ್ಕೆ  ಕೇಂದ್ರದ ಪ್ರಶಂಸಾ ಪತ್ರ</u>

ನಿಗದಿತ ಅವಧಿಯೊಳಗೆ ಸರ್ಕಾರಿ ಸೇವೆ ಒದಗಿಸುವ ರಾಜ್ಯ ಸರ್ಕಾರದ ಸಕಾಲ ಯಶಸ್ಸಿಗೆ ಮತ್ತೊಂದು ಗರಿ. ಯೋಜನೆ ಅನುಷ್ಠಾನ ಕುರಿತಂತೆ ಪ್ರಶಂಸಾ ಪತ್ರ ನೀಡಿರುವ ಕೇಂದ್ರ ಸರ್ಕಾರ ತಾನು ಜಾರಿಗೆ ತರಲು ಉದ್ದೇಶಿಸಿರುವ ನಾಗರಿಕ ಸೇವೆಗಳ ಖಾತರಿ ಕಾಯ್ದೆಗೆ ಸಕಾಲ ಅನುಷ್ಠಾನದ ಬಹುತೇಕ ಅಂಶಗಳನ್ನು ಪರಿಗಣಿಸಲು ಮುಂದಾಗಿದೆ. ನಾಗರಿಕ ಸೇವೆಗಳ ಖಾತರಿ ಕಾಯ್ದೆ ರೂಪಿಸಲು ಮುಂದಾಗಿರುವ ಕೇಂದ್ರ ಸರ್ಕಾರ, ಈ ನಿಟ್ಟಿನಲ್ಲಿ ಈಗಾಗಲೇ ಸಕಾಲ ಸೇರಿದಂತೆ ಇತರೆ ರಾಜ್ಯಗಳಲ್ಲಿ ಜಾರಿಯಲ್ಲಿರುವ ನಾಗರಿಕ ಸೇವೆಗಳ ಖಾತರಿ ಕಾಯ್ದೆಗಳನ್ನು ಕೂಡ ಪರಿಶೀಲಿಸುತ್ತಿದೆ.

**ಮೊದಲ ಆದ್ಯತೆ:**

ಆದರೆ, ಈ ಪೈಕಿ ಮೊದಲ ಆದ್ಯತೆ ರಾಜ್ಯದ ಸಕಾಲಕ್ಕೆ. ಇದಕ್ಕೆ ಕಾರಣ ಯೋಜನೆಯ ಪರಿಣಾಮಕಾರಿ ಜಾರಿಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು. ದೇಶದ 14 ರಾಜ್ಯಗಳಲ್ಲಿ ನಾಗರಿಕ ಸೇವೆಗಳ ಖಾತರಿ ಕಾಯ್ದೆ ಜಾರಿಯಲ್ಲಿದೆಯಾದರೂ ಅದರ ಅಡಿಯಲ್ಲಿ ಅತಿ ಹೆಚ್ಚು ಸೇವೆಗಳನ್ನು ನೀಡುತ್ತಿರುವುದು ಮತ್ತು ಈ ಯೋಜನೆಯನ್ನು ಪಾರದರ್ಶಕವಾಗಿ ಜಾರಿಗೆ ತಂದಿರುವುದು ರಾಜ್ಯ ಮಾತ್ರ. ಇತರೆ 13 ರಾಜ್ಯಗಳಿಗಿಂತ ತಡವಾಗಿ ಕರ್ನಾಟಕ ಈ ಯೋಜನೆ ಜಾರಿಗೆ ತಂದಿದ್ದರೂ ಹೆಚ್ಚು ಪರಿಣಾಮಕಾರಿಯಾಗಿ ಜಾರಿಮಾಡಿದೆ. ಈ ಕಾರಣದಿಂದಲೇ ಕೇಂದ್ರ ಸರ್ಕಾರ ಸಕಾಲ ಯೋಜನೆಯನ್ನು ತನ್ನ ಕಾಯ್ದೆಗೆ ಹೆಚ್ಚಿನ ಪ್ರಮಾಣದಲ್ಲಿ ಪರಿಗಣಿಸುತ್ತಿದೆ.

**ಹೆಚ್ಚಿನ ಸೇವೆಗಳು:**

- ಕೇರಳ ಹೊರತುಪಡಿಸಿ ಇತರೆ ರಾಜ್ಯಗಳು ಕರ್ನಾಟಕಕ್ಕಿಂತ ಮೊದಲೇ ನಾಗರಿಕ ಸೇವೆಗಳ ಖಾತರಿ ಕಾಯ್ದೆ ಜಾರಿಗೆ ತಂದಿದ್ದರೂ ಅತಿ ಹೆಚ್ಚು ಸೇವೆಗಳನ್ನು ಒದಗಿಸುತ್ತಿರುವುದು ಕರ್ನಾಟಕ ರಾಜ್ಯ.
- 20 ಇಲಾಖೆಗಳ 375 ಸೇವೆಗಳನ್ನು ಸಕಾಲ ಯೋಜನೆಯಲ್ಲಿ ನೀಡಲಾಗುತ್ತಿದ್ದು, ಇನ್ನೂ 200 ಸೇವೆಗಳನ್ನು ಈ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದೆ.
- ಇತರೆ ರಾಜ್ಯಗಳಲ್ಲಿ ಛತ್ತೀಸ್‌ಗಢದಲ್ಲಿ 251 ಸೇವೆಗಳಿದ್ದರೆ, ರಾಜಸ್ಥಾನದಲ್ಲಿ 108 ಸೇವೆಗಳನ್ನು ಈ ಕಾಯ್ದೆ ವ್ಯಾಪ್ತಿಗೆ ತರಲಾಗಿದೆ. ಉಳಿದ ರಾಜ್ಯಗಳಲ್ಲಿ ಸೇವೆಗಳ ಸಂಖ್ಯೆ 100ಕ್ಕಿಂತ ಕಡಿಮೆ ಇದೆ.

**ಸಕಾಲದ ಪರಿಗಣನೆ:**

ಕೇಂದ್ರ ಸರ್ಕಾರ ಸಕಾಲ ಯೋಜನೆಯನ್ನು ಹೆಚ್ಚಾಗಿ ಅವಲಂಬಿಸಲು ಇದೊಂದೇ ಕಾರಣವಲ್ಲ. ಬದಲಾಗಿ ಅದರ ಜಾರಿಗೆ ಸರ್ಕಾರ ಕೈಗೊಂಡಿರುವ ಕ್ರಮ. ಈ ಕ್ರಮದಿಂದಾಗಿ ಅರ್ಜಿಗಳು ಇತ್ಯರ್ಥವಾಗುವ ಪ್ರಮಾಣ. 2011ರ ಮಾರ್ಚ್‌ನಲ್ಲಿ ಸಕಾಲ ಯೋಜನೆ ಜಾರಿಯಾಗಿದ್ದು, ಇದುವರೆಗೆ ಸಕಾಲದಲ್ಲಿ 3.57 ಕೋಟಿ ಅರ್ಜಿಗಳು ಸ್ವೀಕೃತವಾಗಿವೆ. ಈ ಪೈಕಿ 3.48 ಕೋಟಿಗೂ ಹೆಚ್ಚು ಅರ್ಜಿಗಳು ಇತ್ಯರ್ಥವಾಗಿವೆ. ಯೋಜನೆಯ ಒಟ್ಟಾರೆ ಪ್ರಗತಿ ಶೇ. 98ಕ್ಕಿಂತಲೂ ಹೆಚ್ಚಾಗಿದೆ.

**ಯಶಸ್ಸಿನ ಕಾರಣಗಳು:**

- ಈ ಯೋಜನೆಯ ಯಶಸ್ಸಿಗೆ ಮುಖ್ಯ ಕಾರಣ ಸಕಾಲ ಯೋಜನೆಯ ಗಣಕೀಕರಣ. ಇದರಿಂದ ಯೋಜನೆ ಜಾರಿಯಲ್ಲಿ ಪಾರದರ್ಶಕತೆ ಕಾಣಿಸಿಕೊಂಡಿದೆ. ಯಾರು ಬೇಕಾದರೂ ತಮ್ಮ ಅರ್ಜಿಯ ಸ್ಥಿತಿಗತಿಗಳನ್ನು ವೆಬ್‌ಸೈಟ್ ಮೂಲಕ ತಿಳಿದುಕೊಳ್ಳಬಹುದು.
- ಅಷ್ಟೇ ಅಲ್ಲ, ಅರ್ಜಿಗಳ ಸ್ಥಿತಿಗತಿ ಬಗ್ಗೆ ನಾಗರಿಕರಿಗೆ ಎಸ್‌ಎಂಎಸ್ ಕಳುಹಿಸುವ ಸೌಲಭ್ಯವೂ ಇದೆ.
- ಜತೆಗೆ ವೆಬ್‌ಸೈಟ್ ಮೂಲಕ ಯೋಜನೆ ಅನುಷ್ಠಾನದ ಪ್ರಮಾಣವನ್ನು ತಿಳಿದುಕೊಳ್ಳುವ ವ್ಯವಸ್ಥೆ ಇದೆ.
- ನಾಗರಿಕರಿಗೆ ಕಂಪ್ಯೂಟರ್ ಜ್ಞಾನ ಇಲ್ಲದೇ ಇದ್ದರೆ ಕಾಲ್‌ಸೆಂಟರ್‌ಗೆ ಕರೆ ಮಾಡಿಯೂ ತಮ್ಮ ಅರ್ಜಿಯ ಬಗ್ಗೆ ತಿಳಿದುಕೊಳ್ಳಬಹುದು.
- ಜತೆಗೆ ಸಕಾಲ ಜಾರಿಯಾಗುವ ಮುನ್ನ ಮತ್ತು ನಂತರದಲ್ಲಿ ಅದರಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಗೆ ಸರ್ಕಾರ ನೀಡಿದ ಅವಕಾಶ, ಜಾಹೀರಾತುಗಳು ಕೂಡ ಸಕಾಲ ಯಶಸ್ವಿಗೆ ಕಾರಣವಾಗಿದೆ.
- ಇದಲ್ಲದೆ, ಸಕಾಲ ಕುರಿತಂತೆ ಜಾಗೃತಿ ಮೂಡಿಸಲು ಫೇಸ್‌ಬುಕ್, ಟ್ವಿಟರ್ ಮತ್ತಿತರ ಸಾಮಾಜಿಕ ತಾಣಗಳ ನೆರವನ್ನೂ ಪಡೆದುಕೊಳ್ಳಲಾಗುತ್ತಿದೆ. ಸರ್ಕಾರದ ಯೋಜನೆಯೊಂದರ ಬಗ್ಗೆ ಈ ರೀತಿ ಸಾಮಾಜಿಕ ತಾಣಗಳನ್ನು ಬಳಸಿಕೊಂಡಿದ್ದು ಇದೇ ಪ್ರಥಮ.
- ಸಕಾಲ ಯೋಜನೆ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರ ಮಾಡಿರುವ ಆಂದೋಲನ ವಿಶ್ವಬ್ಯಾಂಕ್ ಪ್ರಶಂಸೆಗೂ ಪಾತ್ರವಾಗಿದೆ.
- ಈಗಾಗಲೇ ಸಕಾಲ ಯೋಜನೆ ಕುರಿತಂತೆ ರಾಜ್ಯಕ್ಕೆ ಪ್ರಶಂಸಾ ಪತ್ರ ನೀಡಿರುವ ಕೇಂದ್ರ ಸರ್ಕಾರ ತನ್ನ ಉದ್ದೇಶಿತ ನಾಗರಿಕ ಸೇವೆಗಳ ಖಾತರಿ ಕಾಯ್ದೆ ರೂಪಿಸಲು ಸಕಾಲದ ಬಹುತೇಕ ಅನುಷ್ಠಾನ ಕ್ರಮಗಳನ್ನು ಬಳಸಿಕೊಳ್ಳಲು ತೀರ್ಮಾನಿಸಿದೆ.

## ಪಶ್ಚಿಮ ಘಟ್ಟ ಪ್ರದೇಶವನ್ನು 'ಪರಿಸರ ಸೂಕ್ಷ್ಮ ಪ್ರದೇಶ' ಎಂದು ಘೋಷಿಸಲು ಕೇಂದ್ರ ಸರ್ಕಾರ ನಿರ್ಧಾರ

ಕರ್ನಾಟಕ ಸೇರಿದಂತೆ 6 ರಾಜ್ಯಗಳಲ್ಲಿ ಚಾಚಿಕೊಂಡಿರುವ ಪಶ್ಚಿಮ ಘಟ್ಟದ 60 ಸಾವಿರ ಚದರ ಕಿ.ಮೀ. ವ್ಯಾಪ್ತಿಯನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಕೇಂದ್ರ ಸರ್ಕಾರ ನಿರ್ಧರಿಸಿ, ಕರಡು ಅಧಿಸೂಚನೆ ಸಿದ್ಧಪಡಿಸಿದೆ. ಈ ಮೂಲಕ ಈ ಪ್ರದೇಶದಲ್ಲಿ ಗಣಿಗಾರಿಕೆ, ಕ್ವಾರಿ, ಉಷ್ಣ ವಿದ್ಯುತ್ ಯೋಜನೆಗಳು, ಮಾಲಿನ್ಯಕಾರಕ ಉದ್ದಿಮೆಗಳನ್ನು ಸ್ಥಾಪಿಸುವುದನ್ನು ನಿಷೇಧಿಸಲಾಗಿದೆ. ಇನ್ನು ಇತರ ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು ಎಂದರೆ ಗ್ರಾಮ ಪಂಚಾಯ್ತಿಗಳ ಅನುಮತಿ ಕಡ್ಡಾಯವಾಗಿರುತ್ತದೆ. ಕೇಂದ್ರದ ಈ ನಿರ್ಣಯವು ಕರ್ನಾಟಕ ಪಶ್ಚಿಮ ಘಟ್ಟದ ಹಲವಾರು ಯೋಜನೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

**ವರದಿ ಆಧರಿಸಿ ಕ್ರಮ:**

ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಯೋಜನಾ ಆಯೋಗದ ಸದಸ್ಯ ಕೆ. ಕಸ್ತೂರಿರಂಗನ್ ಮತ್ತು ಖ್ಯಾತ ಪರಿಸರ ತಜ್ಞ ಮಾಧವ ಗಾಡ್ಗಿಳ್ ಸಮಿತಿ ನೀಡಿರುವ ಎರಡು ಪ್ರತ್ಯೇಕ ವರದಿಗಳನ್ನು ಪರಿಗಣಿಸಿ ಈ ನಿರ್ಧಾರ ಕೈಗೊಂಡಿದೆ. ಇದರ ಅನುಸಾರ ಸುಮಾರು ಶೇ.37ರಷ್ಟು ಪಶ್ಚಿಮ ಘಟ್ಟ ಅರಣ್ಯವು ಸಂರಕ್ಷಿತ ವ್ಯಾಪ್ತಿಗೆ ಒಳಪಡಲಿದೆ. ಪಶ್ಚಿಮ ಘಟ್ಟಗಳು ಉತ್ತರದ ತಪತಿ ನದಿಯಿಂದ ದಕ್ಷಿಣದ ಕನ್ಯಾಕುಮಾರಿವರೆಗೆ 1500 ಕಿ.ಮೀ. ಪ್ರದೇಶದಲ್ಲಿ ವ್ಯಾಪಿಸಿವೆ. ಕಸ್ತೂರಿರಂಗನ್ ಸಮಿತಿಯು, ಪಶ್ಚಿಮ ಘಟ್ಟದ ಜೀವವೈವಿಧ್ಯ ಶ್ರೀಮಂತಿಕೆ, ಅರಣ್ಯ ಭಾಗಗಳು ಮತ್ತು ಮನುಷ್ಯ ವಾಸದ ದಟ್ಟಣೆ ಎಂಬ ಮೂರು ಮಾನದಂಡಗಳನ್ನು ಇಟ್ಟುಕೊಂಡು ಈ ಪ್ರದೇಶಗಳಲ್ಲಿ ಗಣಿಗಾರಿಕೆ, ಕಲ್ಲಿದ್ದಲು ವಿದ್ಯುತ್ ಯೋಜನೆ ಮತ್ತು ಮಾಲಿನ್ಯಕಾರಕ ಕಾರ್ಖಾನೆ ಸ್ಥಾಪನೆ ನಿಷೇಧಕ್ಕೆ ಶಿಫಾರಸು ಮಾಡಿತ್ತು.

**ಯೋಜನೆಗಳಿಗೆ ಅನುಮತಿ ಕಡ್ಡಾಯ:**

- ಇನ್ನು ಗಣಿಗಾರಿಕೆ, ವಿದ್ಯುತ್ ಯೋಜನೆ, ಕಾರ್ಖಾನೆ ಸ್ಥಾಪನೆ ಹೊರತುಪಡಿಸಿದಂತೆ ಋಣಾತ್ಮಕ ಪಟ್ಟಿಯಲ್ಲಿಲ್ಲದ ಇತರ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಗ್ರಾಮ ಪಂಚಾಯಿತಿ ಅನುಮತಿಯನ್ನು ಕಡ್ಡಾಯಗೊಳಿಸಲಾಗಿದೆ.
- ಇದೇ ವೇಳೆ 20 ಸಾವಿರ ಚದರ ಮೀಟರ್‌ಗಿಂತ ಹೆಚ್ಚು ವ್ಯಾಪ್ತಿಯಲ್ಲಿ ಟೌನ್‌ಶಿಪ್ ಮತ್ತು ಕಟ್ಟಡ ನಿರ್ಮಾಣ ನಿಷೇಧಿಸಲಾಗಿದೆ. ಆದರೆ ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯಾವುದೇ ಅಡ್ಡಿ ಇಲ್ಲ. ಹೊಸ ಯೋಜನೆಗಳ ಯಾವುದೇ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.
- ಆದರೆ ಪವನಶಕ್ತಿ ಉತ್ಪಾದನೆಗಾಗಿ ವಿಂಡ್‌ಮಿಲ್‌ಗಳನ್ನು ಅಳವಡಿಸಲು ಸಚಿವಾಲಯ ಅನುಮತಿ ನೀಡಿದೆ. ಈ ಮೂಲಕ ಪರಿಸರ ಸೂಕ್ಷ್ಮ ವಲಯದಲ್ಲಿ ವಿಂಡ್‌ಮಿಲ್ ಅಳವಡಿಕೆ ನಿಷೇಧಿಸಲು ಸಮಿತಿ ಮಾಡಿದ್ದ ಶಿಫಾರಸನ್ನು ಸಚಿವಾಲಯ ತಿರಸ್ಕರಿಸಿದೆ.
- ಇದೇ ವೇಳೆ, ಜಲವಿದ್ಯುತ್ ಯೋಜನೆಗಳಿಗೆ ಕಠಿಣ ಷರತ್ತುಗಳನ್ನು ಹಾಕಿ ಅನುಮತಿ ನೀಡುವಂತೆ ಕಸ್ತೂರಿರಂಗನ್ ಸಮಿತಿ ಮಾಡಿದ್ದ ಶಿಫಾರಸನ್ನು ಸರ್ಕಾರ ಅಂಗೀಕರಿಸಿದೆ.

**‘ಕರ್ನಾಟಕ ಐ4’ ನೀತಿಯನ್ನು ಬಿಡುಗಡೆಗೊಳಿಸಿದ ಮುಖ್ಯಮಂತ್ರಿ ಸಿದ್ಧರಾಮಯ್ಯ**

ಉದ್ಯಮಿಗಳಿಗೆ ರಾಜ್ಯದಲ್ಲಿ ಇನ್ನು ಮುಂದೆ ಒಂದು ಎಕರೆ ಭೂಮಿ ಬೇಕಾದರೆ ಒಂದು ಸಾವಿರ ಉದ್ಯೋಗ ಅವಕಾಶ ಸೃಷ್ಟಿಸಬೇಕು! ಬೆಂಗಳೂರನ್ನು 2020ರೊಳಗೆ ಜಾಗತಿಕ ಮಾಹಿತಿ ತಂತ್ರಜ್ಞಾನದ ರಾಜಧಾನಿಯನ್ನಾಗಿಸುವ ಕನಸನ್ನು ಹೊತ್ತಿರುವ 'ಕರ್ನಾಟಕ ಐ4' ನೀತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದ್ದಾರೆ. ಈ ನೀತಿಯಲ್ಲಿ ಭೂಮಿ ಹಂಚಿಕೆ ಹಾಗೂ ಉದ್ಯೋಗ ಸೃಷ್ಟಿಗೆ ನೇರ ಸಂಬಂಧ ಕಲ್ಪಿಸಲಾಗಿದೆ. ಬೆಂಗಳೂರನ್ನು ಜಾಗತಿಕ ಮಟ್ಟದಲ್ಲಿ ಸಿಲಿಕಾನ್ ವ್ಯಾಲಿಯನ್ನಾಗಿ ಪರಿವರ್ತಿಸುವ ಹಾಗೂ ರಾಜ್ಯದ ಇತರೇ ನಗರಗಳಲ್ಲಿ ಐಟಿ ಕಂಪನಿಗಳ ಸ್ಥಾಪನೆಗೆ ಆದ್ಯತೆ ನೀಡುವ ದೃಷ್ಟಿಯಿಂದ ಹೊಸ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದೆ.

**ಉದ್ದೇಶಗಳೇನು?**

ಐಟಿ, ಐಟೀಸ್, ಇನೊವೇಷನ್ ಹಾಗೂ ಇನ್ಸೆಂಟೀವ್ಸ್‌ಗಳನ್ನು ಗಮನದಲ್ಲಿಟ್ಟುಕೊಂಡಿರುವ 'ಕರ್ನಾಟಕ ಐ4' ನೀತಿಯನ್ನು ನಗರದಲ್ಲಿ ನಡೆದ ಬೆಂಗಳೂರು ‘ಐಟಿಇ-ಬಿಝ್’ ಸಮಾವೇಶದಲ್ಲಿ ಸಿಎಂ ಅನಾವರಣಗೊಳಿಸಿದರು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಿಂದ ಬೆಂಗಳೂರಿನಲ್ಲಿ ಈಗಾಗಲೇ ೯ ಲಕ್ಷ ಉದ್ಯೋಗ ಸೃಷ್ಟಿಯಾಗಿದೆ. ದೇಶದ ಐಟಿ ಕ್ಷೇತ್ರದ ಶೇ.25ರಷ್ಟು ಆದಾಯವನ್ನು ರಾಜ್ಯ ನೀಡುತ್ತಿದೆ. 2020 ರೊಳಗೆ 20 ಲಕ್ಷ ನೇರ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ. ಇದಲ್ಲದೇ ಆಯನಿಮೇಷನ್ ಹಾಗೂ ಗೇಮಿಂಗ್ ತಂತ್ರಜ್ಞಾನದಿಂದ ಮುಂದಿನ ಆರ್ಥಿಕ ವರ್ಷದಲ್ಲಿ 10 ಸಾವಿರ ಕೋಟಿ ಆದಾಯ ಬರುವ ನಿರೀಕ್ಷೆಯಿದೆ. ಈ ನೂತನ ನೀತಿಯಿಂದ ಬೆಂಗಳೂರು ಹೊರತುಪಡಿಸಿ ರಾಜ್ಯದ ಇತರ ನಗರಗಳಲ್ಲಿಯೂ ಕಂಪನಿ ಪ್ರಾರಂಭಿಸಲು ಅವಕಾಶ ಹಾಗೂ ಆದ್ಯತೆ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಸಂದರ್ಭದಲ್ಲಿ ಹೇಳಿದರು.

**ಕರ್ನಾಟಕ ಐ4 ನೀತಿಯಲ್ಲೇನಿದೆ?**

- ಕೈಗಾರಿಕೆ ಸ್ಥಾಪಿಸುವ ನಿಟ್ಟಿನಲ್ಲಿ ರಿಯಲ್ ಎಸ್ಟೇಟ್ ಕಂಪನಿಗಳು ಭೂಮಿ ಪಡೆಯುವುದಕ್ಕೆ ಕಡಿವಾಣ ಹಾಕಲಾಗುವುದು.
- ಭೂಮಿ ಪಡೆಯುವ ಪ್ರತಿ ಕಂಪನಿಯು ಒಂದು ಎಕರೆಗೆ ಒಂದು ಸಾವಿರ ಉದ್ಯೋಗ ಸೃಷ್ಟಿಸುವ ಮುಚ್ಚಳಿಕೆಯನ್ನು ಸಂಸ್ಥೆಗಳು ಬರೆದುಕೊಡಬೇಕು. ಇದಲ್ಲದೇ ಉದ್ಯೋಗಿಗಳಿಗೆ ಕನಿಷ್ಠ 10 ಸಾವಿರ ವೇತನವನ್ನು ನೀಡಲೇಬೇಕು.
- ಸರ್ಕಾರ ನೀಡುವ ಸಬ್ಸಿಡಿ ಕೂಡ ಸಂಸ್ಥೆಯ ಉದ್ಯೋಗ ಸೃಷ್ಟಿ ಮೇಲೆ ಅವಲಂಬಿತವಾಗಿರುತ್ತದೆ ಎಂದು ನೂತನ ನೀತಿಯಲ್ಲಿ ಹೇಳಲಾಗಿದೆ.
- ರಾಜ್ಯದಲ್ಲಿ ಬಂಡವಾಳ ಹೂಡಲು ಬಯಸುವ ಕಂಪನಿಗಳಿಗೆ ಅನುಮತಿ ನೀಡುವ ನಿಟ್ಟಿನಲ್ಲಿ ಏಕಗವಾಕ್ಷಿ ವ್ಯವಸ್ಥೆಯನ್ನು ಪರಿಣಾಮಕಾರಿಗೊಳಿಸಲು ನೀತಿಯಲ್ಲಿ ಆದ್ಯತೆ ನೀಡಲಾಗಿದೆ.
- ಐಟಿ ಕಂಪನಿಗಳಲ್ಲಿ ಉದ್ಯೋಗ ಪಡೆದವರಿಗೆ ಪ್ರಾರಂಭಿಕ 2 ವರ್ಷಗಳಲ್ಲಿ ತಿಂಗಳಿಗೆ 2 ಸಾವಿರ ಭವಿಷ್ಯ ನಿಧಿಯನ್ನು ರಾಜ್ಯ ಸರ್ಕಾರವೇ ಭರಿಸಿಕೊಡಲಿದೆ. ಮುದ್ರಾಂಕ ಶುಲ್ಕ ಶೇ.75ರಷ್ಟು ವಿನಾಯಿತಿ ನೀಡಲಾಗುವುದು ಎಂದು ನೀತಿಯಲ್ಲಿ ಪ್ರಕಟಿಸಲಾಗಿದೆ.

## ಕರ್ನಾಟಕದಲ್ಲಿ ಆತಂಕಕಾರಿಯಾಗಿ ಹೆಚ್ಚುತ್ತಿರುವ ತಾಯಿ ಮರಣ ಪ್ರಮಾಣ

ವಿಶ್ವಸಂಸ್ಥೆ ಸಹಕಾರದೊಂದಿಗೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಸೇರಿದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಾಯಿ ಮರಣ ಪ್ರಮಾಣ ತಗ್ಗಿಸಲು ಅನೇಕ ಯೋಜನೆಗಳನ್ನೂ ಜಾರಿಗೊಳಿಸಿದರೂ ಕರ್ನಾಟಕ ರಾಜ್ಯವೂ ಸೇರಿದಂತೆ ದೇಶಾದ್ಯಂತ ತಾಯಿ ಮರಣ ಪ್ರಮಾಣ ಹೆಚ್ಚುತ್ತಲೇ ಇದೆ. ದೇಶದಲ್ಲಿ ಮೃತಪಡುವ ತಾಯಿ ಮರಣ ಪ್ರಮಾಣಕ್ಕೆ ಹೋಲಿಸಿದಲ್ಲಿ ರಾಜ್ಯದಲ್ಲಿ ಈ ಸಂಖ್ಯೆ ಕಡಿಮೆ ಇದ್ದರೂ, ಗುಲ್ಬರ್ಗ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಇದರ ಸರಾಸರಿ ಪ್ರಮಾಣ ದೇಶದ ಸರಾಸರಿ ಸಾವಿನ ಪ್ರಮಾಣಕ್ಕಿಂತಲೂ ದುಪ್ಪಟ್ಟಾಗಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ.

**ಅಂಕಿ-ಅಂಶ:**

ಆರೋಗ್ಯ ಇಲಾಖೆಯೇ ನೀಡಿರುವ ಮಾಹಿತಿಯಂತೆ ದೇಶದಲ್ಲಿ 2012-13ರಲ್ಲಿ ತಾಯಿಯ ಮರಣ ಪ್ರಮಾಣ ಲಕ್ಷಕ್ಕೆ ತಾಯಿ ಮರಣ ಸರಾಸರಿ ದರ 212 ಇದ್ದರೆ, ರಾಜ್ಯದಲ್ಲಿ 147. ಇದು ಮೇಲ್ನೋಟಕ್ಕೆ ಸಮಾಧಾನಕರವಾಗಿದ್ದರೂ ಜಿಲ್ಲಾವಾರು ಲೆಕ್ಕಾಚಾರವನ್ನು ಗಣನೆಗೆ ತೆಗೆದುಕೊಂಡರೆ ಬೆಚ್ಚಿ ಬೀಳುವಂಥ ಅಂಶಗಳು ಬೆಳಕಿಗೆ ಬರುತ್ತವೆ. ಗುಲ್ಬರ್ಗ ಜಿಲ್ಲೆಯಲ್ಲಿ ಈ ಮರಣ ದರ ವರ್ಷಕ್ಕೆ 484.13 ಇದ್ದರೆ, ಬೆಳಗಾವಿ ಜಿಲ್ಲೆಯಲ್ಲಿ 386.80. ಹಾಗೆಯೇ ಬಾಗಲಕೋಟೆ ಜಿಲ್ಲೆಯಲ್ಲಿ 381.53 ಇದ್ದರೆ, ಧಾರವಾಡ ಜಿಲ್ಲೆಯಲ್ಲಿ ಈ ದರ 317.91. ಹೀಗೆ ರಾಜ್ಯದ ಸುಮಾರು ಅರ್ಧದಷ್ಟು ಜಿಲ್ಲೆಗಳಲ್ಲಿ ತಾಯಿ ಮರಣ ದರ ರಾಜ್ಯ ಮತ್ತು ರಾಷ್ಟ್ರೀಯ ಸರಾಸರಿಗಿಂತಲೂ ದುಪ್ಪಟ್ಟಿದೆ. ರಾಮನಗರ ಜಿಲ್ಲೆಯಲ್ಲಿ ಮಾತ್ರ ಈ ಪ್ರಮಾಣ ಕೇವಲ 3.19 ರಷ್ಟಿದೆ.

**ತಾಯಿಯ ಮರಣ ಎಂದರೇನು?**

ಹೆರಿಗೆ ಸಮಯದಲ್ಲಿ ಮಹಿಳೆ ಮರಣ ಹೊಂದುವುದನ್ನು ತಾಯಿ ಮರಣ ಎನ್ನಲಾಗುತ್ತದೆ. ಹೆರಿಗೆಯಾಗುವ ಹಾಗೂ ನಂತರ 42 ದಿನಗಳ ಅವಧಿಯಲ್ಲಿ ಹೆರಿಗೆಗೆ ಸಂಬಂಧಿಸಿದ ಸಮಸ್ಯೆಗಳಿಂದ ಮಹಿಳೆ ಮರಣ ಹೊಂದಿರುವ ಪ್ರಕರಣವನ್ನು ತಾಯಿ ಸಾವು ಎಂದು ಪರಿಗಣಿಸಲಾಗುತ್ತದೆ. ಇದೇ ಅವಧಿಯಲ್ಲಿ ತಾಯಿ ಹೃದಯಾಘಾತವಾಗಿ ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳುವುದು ಸೇರಿದಂತೆ ಇನ್ನಿತರೆ ಕಾರಣಗಳಿಗೆ ಮೃತಪಟ್ಟರೆ ಅಂಥ ಸಾವನ್ನು ಈ ವ್ಯಾಪ್ತಿಯೊಳಗೆ ಸೇರಿಸುವುದಿಲ್ಲ.

**ಕಾರಣವೇನು?**

ಗರ್ಭಿಣಿಯಾಗಿರುವಾಗ ಸೂಕ್ತ ಪೌಷ್ಟಿಕಾಂಶಗಳು ದೊರೆಯದಿರುವುದು, ಸರಿಯಾದ ಚಿಕಿತ್ಸೆ ಸಿಗದೆ ಇರುವುದು ತಾಯಿ ಸಾವಿಗೆ ಪ್ರಮುಖ ಕಾರಣ. ಇನ್ನು ವಿಶೇಷವಾಗಿ ಅಶಕ್ತ ಮಹಿಳೆಯರು ಇಂಥ ಸಾವಿಗೆ ತುತ್ತಾಗುತ್ತಾರೆ. ಹೀಗಾಗಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಾಯಿಯ ಮರಣ ತಡೆಯಲು ವಿಶೇಷ ಒತ್ತು ನೀಡುತ್ತವೆ. ಇದನ್ನು ವಿಶ್ವಸಂಸ್ಥೆಯೂ ಗಮನಿಸುತ್ತದೆ.

**ಮರಣ ದರ ಲೆಕ್ಕಾಚಾರ?**

ಹೆರಿಗೆಯ ವೇಳೆಯ ಸಮಸ್ಯೆಗಳಿಂದ ಮೃತಳಾಗುವ ಮಹಿಳೆಯ ಸಾವಿನ ಪ್ರಮಾಣವನ್ನು ಕಂಡು ಹಿಡಿಯಲು ವಿಶ್ವಸಂಸ್ಥೆ ಸೂತ್ರವೊಂದನ್ನು ರೂಪಿಸಿದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮರಣ ಹೊಂದುವ ತಾಯಿಯರ ಮರಣ ಸಂಖ್ಯೆಯನ್ನು, ಅದೇ ಪ್ರದೇಶದಲ್ಲಿ ಹೆರಿಗೆಯಾಗುವ ಸಂಖ್ಯೆಯಿಂದ ಭಾಗಿಸಿ, ನಂತರ ಲಕ್ಷದಿಂದ ಗುಣಿಸಿದರೆ ಬರುವ ಸಂಖ್ಯೆಯನ್ನು ತಾಯಿಯ ಮರಣ ದರ ಎಂದು ಪರಿಗಣಿಸಲಾಗುತ್ತದೆ.

**ಅಭಿಯಾನ:**

ನಗರ ಯೋಜನೆ ವಿಸ್ತರಣೆ ತಾಯಿ ಮರಣವನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ವಿಶ್ವ ಸಂಸ್ಥೆಯ ಸಹಯೋಗದಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು 2005ರಲ್ಲಿ ಪ್ರಾರಂಭಿಸಿತು. ಈ ಯೋಜನೆಯ ಗುರಿ 2012ರ ವೇಳೆ ತಾಯಿ ಮರಣ ದರವನ್ನು ನೂರಕ್ಕೂ ಕಡಿಮೆ ಮಾಡುವ ಗುರಿ ಹೊಂದಿತ್ತು. ಆದರೆ, ಗುರಿ ತಲುಪದ ಕಾರಣ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಲಾಗಿದೆ.

**ಹಿಂದುಳಿದ ಜಿಲ್ಲೆಗಳ ಮಾನದಂಡವನ್ನು ಪರಿಷ್ಕರಿಸಲು ಯೋಜನಾ ಆಯೋಗ ಶಿಫಾರಸು**

ಹಿಂದುಳಿದಿರುವ ಜಿಲ್ಲೆಗಳನ್ನು ಗುರುತಿಸಲು ನಿಗದಿಪಡಿಸಿರುವ ಮಾನದಂಡಗಳನ್ನು ಪರಿಷ್ಕರಿಸಲು ಯೋಜನಾ ಆಯೋಗ ಮುಂದಾಗಿರುವುದರಿಂದ ಹೈದರಾಬಾದ್- ಕರ್ನಾಟಕದ 6 ಜಿಲ್ಲೆಗಳು ಸೇರಿದಂತೆ ರಾಜ್ಯದ ಕೆಲವು ಜಿಲ್ಲೆಗಳಿಗೆ ಹಿಂದುಳಿದ ಪ್ರದೇಶ ಅಭಿವೃದ್ಧಿ ಅನುದಾನ ದಡಿ ಹೆಚ್ಚಿನ ಹಣಕಾಸು ನೆರವು ಸಿಗುವ ಸಾಧ್ಯತೆಯಿದೆ.

**ಆಯೋಗದ ಬಗ್ಗೆ:**

- ಯೋಜನಾ ಆಯೋಗದ ಸದಸ್ಯರಾದ ಪ್ರೊ. ಅಭಿಜಿತ್ ಸೇನ್ ಹಾಗೂ ಡಾ. ಮಿಹಿರ್ ಷಾ ಅವರನ್ನೊಳಗೊಂಡ ಸಮಿತಿಯು, ಹಿಂದುಳಿದ ಜಿಲ್ಲೆಗಳನ್ನು ಗುರುತಿಸಲು ನಿಗದಿ ಮಾಡಿರುವ ಮಾನದಂಡಗಳನ್ನು ಬದಲಾವಣೆ ಮಾಡಲು ಶಿಫಾರಸು ಮಾಡಿದೆ.
- ಹೊಸ ಮಾನದಂಡ ಮುಂದಿನ ಹಣಕಾಸು ವರ್ಷದಿಂದ ಜಾರಿಗೆ ಬರಲಿದೆ. ಹಿಂದುಳಿದ ಜಿಲ್ಲೆಗಳನ್ನು ಗುರುತಿಸಲು ಸದ್ಯ ಒಟ್ಟಾರೆ ಒಣ ಭೂಮಿ, ಗುಡ್ಡಗಾಡು ಪ್ರದೇಶ, ಮಳೆ ಪ್ರಮಾಣ ಮೊದಲಾದ ಮಾನದಂಡ ಅನುಸರಿಸಲಾಗುತ್ತಿದೆ.
- ಇನ್ನು ಮುಂದೆ ಅಕ್ಷರಸ್ಥರ ಪ್ರಮಾಣ, ಮಾನವ ಅಭಿವೃದ್ಧಿ ಸೂಚ್ಯಂಕ ಹಾಗೂ ತಲಾ ಆದಾಯದಂಥ ಅಂಶಗಳನ್ನು ಆಯೋಗ ಪರಿಗಣನೆಗೆ ತೆಗೆದುಕೊಳ್ಳಲಿದೆ. ಕೇಂದ್ರ ಸರ್ಕಾರ 10ನೇ ಹಣಕಾಸು ಯೋಜನೆಯಿಂದ ಹಿಂದುಳಿದ ಪ್ರದೇಶ ಅಭಿವೃದ್ಧಿ ಅನುದಾನ ನೀಡುತ್ತಿದೆ.
- ಈ ಹಣಕಾಸು ವರ್ಷದಲ್ಲಿ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ರೂ. 11,500 ಕೋಟಿ ಕೊಡಲಾಗಿದೆ. ಜೀವನಮಟ್ಟ ಸುಧಾರಣೆ, ಅಭಿವೃದ್ಧಿ ಯೋಜನೆ, ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಈ ಹಣ ಬಳಕೆ ಮಾಡಬೇಕಾಗಿದೆ.
- ಬೀದರ್, ಗುಲ್ಬರ್ಗ, ರಾಯಚೂರು, ಯಾದಗಿರಿ, ಚಿತ್ರದುರ್ಗ, ದಾವಣಗೆರೆ ಹಿಂದುಳಿದ ಜಿಲ್ಲೆಗಳ ಸಾಲಿಗೆ ಸೇರಿದ್ದು, ಹಿಂದುಳಿದ ಪ್ರದೇಶ ಅಭಿವೃದ್ಧಿ ಅನುದಾನದ ಅಡಿ ರೂ. 150 ಕೋಟಿ ಬಿಡುಗಡೆ ಮಾಡಲಾಗಿದೆ.

**ವಿಶೇಷ ಅನುದಾನ ಸೌಲಭ್ಯ:**

ಯೋಜನಾ ಆಯೋಗ ಹೊಸ ಮಾನ ದಂಡಗಳನ್ನು ಅನುಷ್ಠಾನಗೊಳಿಸಿದರೆ ರಾಜ್ಯದ ಇನ್ನೂ ಕೆಲವು ಜಿಲ್ಲೆಗಳು ವಿಶೇಷ ಅನುದಾನದ ಸೌಲಭ್ಯ ಪಡೆಯಲಿವೆ. ಈಚೆಗೆ ಸಂವಿಧಾನ ಕಲಂ 371 (ಜೆ) ಅಡಿ ವಿಶೇಷ ಸ್ಥಾನಮಾನ ಪಡೆದ 6 ಜಿಲ್ಲೆಗಳಲ್ಲಿ ಸೇರಿರುವ ಕೊಪ್ಪಳ ಮತ್ತು ಬಳ್ಳಾರಿಯೇ ಈಗ ಹಿಂದುಳಿದ ಜಿಲ್ಲೆಗಳ ವ್ಯಾಪ್ತಿಗೆ ಸೇರಿಲ್ಲ. ಕೇಂದ್ರ ಹೈದರಾಬಾದ್- ಕರ್ನಾ ಟಕದ 6 ಜಿಲ್ಲೆಗಳನ್ನು ಹಿಂದುಳಿದ ಪ್ರದೇಶವೆಂದು ಒಪ್ಪಿ ವಿಶೇಷ ಸ್ಥಾನ ಮಾನ ನೀಡಿರುವುದರಿಂದ ಉಳಿದೆರಡು ಜಿಲ್ಲೆಗಳು ಸಹಜವಾಗೇ

ಹಿಂದುಳಿದ ಪ್ರದೇಶ ಅಭಿವೃದ್ಧಿ ಅನುದಾನದ ವ್ಯಾಪ್ತಿಗೆ ಒಳಪಡಲಿವೆ. ಈ ಪಟ್ಟಿಗೆ ಇನ್ನೂ 125 ಜಿಲ್ಲೆಗಳು ಹೊಸದಾಗಿ ಸೇರ್ಪಡೆಗೊಳ್ಳುವ ಸಾಧ್ಯತೆ ಎಂದು ಯೋಜನಾ ಆಯೋಗದ ಮೂಲಗಳು ತಿಳಿಸಿವೆ.

**2010-11 ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟ: ಪುನೀತ್-ರಮ್ಯಾ ಉತ್ತಮ ನಟ-ನಟಿ ಪ್ರಶಸ್ತಿ**

ಜಾಕಿ ಚಿತ್ರದಲ್ಲಿನ ಉತ್ತಮ ಅಭಿನಯಕ್ಕಾಗಿ ನಾಯಕ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮತ್ತು ಸಂಜು ವೆಡ್ಸ್ ಗೀತಾ ಚಿತ್ರದಲ್ಲಿನ ಮನೋಜ್ಞ ಅಭಿನಯಕ್ಕಾಗಿ ನಾಯಕಿ ಹಾಗೂ ಲೋಕಸಭೆ ಸದಸ್ಯೆ ರಮ್ಯಾ ಅವರಿಗೆ ರಾಜ್ಯ ಪ್ರಶಸ್ತಿ ಲಭಿಸಿದೆ. 2010-11ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪಟ್ಟಿಯನ್ನು ವಾರ್ತಾ ಸಚಿವ ಸಂತೋಷ್‌ಲಾಡ್ ಬಿಡುಗಡೆ ಮಾಡಿದರು.

**ವಾರ್ಷಿಕ ಪ್ರಶಸ್ತಿಗಳ ಪಟ್ಟಿ:**

- ಹಿರಿಯ ನಿರ್ದೇಶಕ ಭಗವಾನ್ ಅಧ್ಯಕ್ಷತೆಯಲ್ಲಿನ ಸಮಿತಿ ಪಟ್ಟಿ ಅಂತಿಮಗೊಳಿಸಿ ಸಚಿವರಿಗೆ ಸಲ್ಲಿಸಿತು.
- ಕನ್ನಡ ಚಿತ್ರರಂಗಕ್ಕೆ ಅಪೂರ್ವ ಕೊಡುಗೆ ನೀಡಿದ ನಿರ್ದೇಶಕರಿಗೆ ನೀಡುವ ದಿ.ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಹಿರಿಯ ನಿರ್ದೇಶಕ ಭಾರ್ಗವ ಅವರಿಗೆ,
- ಚಿತ್ರರಂಗದ ಸಮಗ್ರ ಬೆಳವಣಿಗೆಗೆ ನೀಡುವ ಡಾ.ರಾಜ್‌ಕುಮಾರ್ ಪ್ರಶಸ್ತಿ ಎಸ್.ಶಿವರಾಂಗೆ,
- ವಿವಿಧ ವಲಯಗಳಲ್ಲಿ ಮಾಡಿದ ಸಾಧನೆಗೆ ನೀಡುವ ಡಾ.ವಿಷ್ಣುವರ್ಧನ್ ಪ್ರಶಸ್ತಿ ಹಿರಿಯ ನಟ, ಸಚಿವ ಅಂಬರೀಷ್‌ಗೆ ನೀಡಲಾಗಿದೆ. ಈ ಪ್ರಶಸ್ತಿ ರು. 2ಲಕ್ಷ ನಗದು ಹಾಗೂ ಚಿನ್ನಲೇಪಿತ ಫಲಕವನ್ನು ಒಳಗೊಂಡಿದ್ದು, ನವೆಂಬರ್ ತಿಂಗಳಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಾರ್ತಾ ಸಚಿವ ಸಂತೋಷ್ ಲಾಡ್ ಸುದ್ದಿಗಾರರಿಗೆ ತಿಳಿಸಿದ್ದಾರೆ.
- ಜಾಕಿ ಚಿತ್ರದಲ್ಲಿನ ಅತ್ಯುತ್ತಮ ಅಭಿನಯಕ್ಕಾಗಿ ಪುನಿತ್ ರಾಜ್‌ಕುಮಾರ್ ಅವರಿಗೆ ಉತ್ತಮ ನಟ ಹಾಗೂ ಸಂಜು ವೆಡ್ಸ್ ಗೀತಾ ಚಿತ್ರದಲ್ಲಿನ ಮನೋಜ್ಞ ಅಭಿನಯಕ್ಕಾಗಿ ನಟಿ, ಸಂಸದೆ ರವಮ್ಯ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ನೀಡಲಾಗಿದೆ.
- ವಿಶೇಷ ತಾಂತ್ರಿಕತೆ, ವೇಷಭೂಷಣ ಮತ್ತು ಇತರೆ ವಿಷಯಗಳಿಗೆ ನೀಡುವ ವಿಶೇಷ ಪ್ರಶಸ್ತಿ ಸೂಪರ್ ಚಿತ್ರದ ಪಾಲಾಗಿದೆ.
- ಈ ಹಿಂದೆ ಪ್ರಕಟಿಸಲಾದ ವಿವಾದಾತ್ಮಕ ಪಟ್ಟಿಯಲ್ಲಿ ನೀಡಲಾದ ಮೂರು ಜೀವಮಾನದ ಸಾಧನೆ ಪ್ರಶಸ್ತಿ ಹಾಗೂ ವಿಶೇಷ ಪ್ರಶಸ್ತಿಯನ್ನು ಹೊರತುಪಡಿಸಿ ಉಳಿದೆಲ್ಲ ಪಟ್ಟಿಯನ್ನು ಬದಲಾಯಿಸಲಾಗಿದೆ.

**ಉಳಿದ ಪ್ರಶಸ್ತಿಗಳ ವಿವರ:**

- ಮೊದಲನೇ ಅತ್ಯುತ್ತಮ ಚಿತ್ರ ಕೆ.ಶಿವರುದ್ರಯ್ಯ ನಿರ್ದೇಶನದ ಮಾಗಿಯ ಕಾಲ, ಎರಡನೇ ಅತ್ಯುತ್ತಮ ಚಿತ್ರ ಅಗ್ನಿ ಶ್ರೀಧರ್ ನಿರ್ದೇಶನದ ತಮಸ್ಸು, ಮೂರನೇ ಅತ್ಯುತ್ತಮ ಚಿತ್ರ ಕೋಡ್ಲು ರಾಮಕೃಷ್ಣ ನಿರ್ದೇಶನದ ಮಾನಸ.
- ವಿಶೇಷ ಸಾಮಾಜಿಕ ಪರಿಸರ ಚಿತ್ರ ಸುವೀರನ್ ನಿರ್ದೇಶನದ ಬ್ಯಾರಿ.
- ಅತ್ಯುತ್ತಮ ಪ್ರಾದೇಶಿಕ ಚಿತ್ರ ನಾನ್ ಪುಟ್ಟೆನ್ ಮಣ್ ( ಕೊಡವ ಭಾಷೆ ಚಿತ್ರ)
- ಅತ್ಯುತ್ತಮ ಮಕ್ಕಳ ಚಿತ್ರ ನಿಖಿಲ್ ಮಂಜು ನಿರ್ದೇಶನದ ಒಂದೂರಲ್ಲಿ.
- ಅತ್ಯುತ್ತಮ ಪೋಷಕ ನಟ ಹೆಜ್ಜೆ ಚಿತ್ರಕ್ಕಾಗಿ ಅಚ್ಯುತ್‌ಕುಮಾರ್. ಅತ್ಯುತ್ತಮ ಪೋಷಕ ನಟಿ ತಮಸ್ಸು ಚಿತ್ರಕ್ಕಾಗಿ ಹರ್ಷಿಕಾ ಪೂಣಚ್ಚ.

- ಅತ್ಯುತ್ತಮ ಕಂಠದಾನ ಕಲಾವಿದೆ ಅನುಶ್ರೀ ( ಮುರಳಿ ಮೀಟ್ಸ್ ಮೀರಾ ಚಿತ್ರ )
- ಅತ್ಯುತ್ತಮ ಕಥೆ ಬರಹಗಾರ ಈಶ್ವರಚಂದ್ರ ( ಮಾಗಿಯ ಕಾಲ ) , ಅತ್ಯುತ್ತಮ ಚಿತ್ರಕಥೆ ಬರಹಗಾರ ಅಗ್ನಿಶ್ರೀಧರ್ (ತಮಸ್ಸು )
- ಅತ್ಯುತ್ತಮ ಸಂಭಾಷಣೆಗಾರ ಲಕ್ಷ್ಮಿಪತಿ ಕೋಲಾರ ( ಭಗವತಿ ಕಾಡು ) , ಅತ್ಯುತ್ತಮ ಸಂಗೀತ ನಿರ್ದೇಶನ ಜಯಶ್ರೀ ಅರವಿಂದ (ಒಂದೂರಲ್ಲಿ ) , ಅತ್ಯುತ್ತಮ ಧ್ವನಿ ಗ್ರಾಹಕ ಪಳನಿ ಡಿ.ಸೇನಾಪತಿ ( ಕಾಲ್ಗೆಜ್ಜೆ ) , ಅತ್ಯುತ್ತಮ ಸಂಕಲನಕಾರ ಸುರೇಶ್ ಅರಸ್ (ಐದೊಂದ್ಲ ಐದ )
- ಅತ್ಯುತ್ತಮ ಬಾಲನಟ ಮಾಸ್ಟರ್ ಚನ್ನಕುಮಾರ್ ( ಒಂದೂರಲ್ಲಿ ) , ಅತ್ಯುತ್ತಮ ಬಾಲನಟಿ ಬೇಬಿ ಪ್ರಕೃತಿ (ಹೆಜ್ಜೆಗಳು )
- ಅತ್ಯುತ್ತಮ ಕಲಾ ನಿರ್ದೇಶಕ ಇಸ್ಮಾಯಿಲ್ (ಸಂಜು ವೆಡ್ಸ್ ಗೀತಾ ), ಅತ್ಯುತ್ತಮ ಗೀತರಚನಾಕಾರ ಎ.ಬಂಗಾರು (ಕಾಲ್ಗೆಜ್ಜೆ ) , ಅತ್ಯುತ್ತಮ ಹಿನ್ನೆಲೆ ಗಾಯಕ ರವೀಂದ್ರ ಸೊರಗಾವಿ (ಪುಟ್ಟಕ್ಕನ ಹೈವೆ ) , ಅತ್ಯುತ್ತಮ ಹಿನ್ನೆಲೆ ಗಾಯಕಿ ರಕ್ಷಾ ಪ್ರಿಯರಾಮ್ ( ಒಂದೂರಲ್ಲಿ )
- ಡಾ.ಬಾಣಂದೂರು ಕೆಂಪಯ್ಯ, ಆರ್.ಮಂಜುನಾಥ್, ಜಿ.ಎನ್.ಮೋಹನ್, ಅಬ್ದುಲ್ ರೆಹಮಾನ್ ಪಾಷಾ, ಪದ್ಮಾ ಕುಮಟಾ, ರಾಧಾಕೃಷ್ಣ ಪಲ್ಲಕಿ, ಪರಮೇಶ್ವರ, ಗುರುಸ್ವಾಮಿ ಅವರನ್ನು ಒಳಗೊಂಡ ಆಯ್ಕೆ ಸಮಿತಿ ಸುಮಾರು 50 ಚಿತ್ರಗಳನ್ನು ವೀಕ್ಷಿಸಿ ಪ್ರಶಸ್ತಿಯನ್ನು ಅಂತಿಮಗೊಳಿಸಿದೆ ಎಂದು ಸಮಿತಿ ಅಧ್ಯಕ್ಷ ಹಿರಿಯ ನಿರ್ದೇಶಕ ಭಗವಾನ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

## ರಾಜ್ಯ ಸರ್ಕಾರದಿಂದ ಬಡ ಮುಸ್ಲಿಂ ಹೆಣ್ಣು ಮಕ್ಕಳಿಗೆ "ಶಾದಿ ಭಾಗ್ಯ" ಯೋಜನೆ

ಮುಸ್ಲಿಂ ಕುಟುಂಬದ ಆರ್ಥಿಕವಾಗಿ ಹಿಂದುಳಿದವರು ಮತ್ತು ವಿಚ್ಛೇದಿತ ಅಥವಾ ವಿಧವೆಯರ ಹೆಣ್ಣು ಮಕ್ಕಳ ಮದುವೆಗೆ ಸರ್ಕಾರದಿಂದ 50 ಸಾವಿರ ಮೌಲ್ಯದ ಮಂಚ, ಹಾಸಿಗೆ, ಅಡುಗೆಪಾತ್ರೆ, ಅಲ್ಮೆರಾ ಸೇರಿದಂತೆ ಜೀವನಾವಶ್ಯಕ ಸಾಮಗ್ರಿಗಳು ಇಲ್ಲವೇ ನಗದು ನೀಡಲಿದೆ. ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ ಮುಸ್ಲಿಂ ಹೆಣ್ಣು ಮಕ್ಕಳ ಮದುವೆಗೆ ನೆರವು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಬಜೆಟ್ ಭಾಷಣದಲ್ಲಿ ಹೊಸ ಯೋಜನೆ ಘೋಷಣೆ ಮಾಡಿದ್ದು, ಅದರಂತೆ ಸರ್ಕಾರ ಆದೇಶ ಹೊರಡಿಸಿದೆ.

**ಒಮ್ಮೆ ಮಾತ್ರ ಈ ಸೌಲಭ್ಯ:**

- ಹೆಣ್ಣು ಮಕ್ಕಳಿಗೆ ನೀಡುವ ಜೀವನಾವಶ್ಯಕ ಸಾಮಗ್ರಿಗಳು ಅಥವಾ ನಗದು ಒಟ್ಟು 50 ಸಾವಿರ ಮೀರುವಂತಿಲ್ಲ. ಜತೆಗೆ ಜೀವಮಾನದಲ್ಲಿ ಒಮ್ಮೆ ಮಾತ್ರ ಈ ಸೌಲಭ್ಯ ಸಿಗುತ್ತದೆ.
- ಮದುವೆ ಜೋಡಿಗಳ ಪೈಕಿ ಹೆಣ್ಣು ಮಕ್ಕಳಿಗೆ 18 ವರ್ಷ ಮತ್ತು ಗಂಡು ಮಕ್ಕಳಿಗೆ 21 ವರ್ಷ ವಯಸ್ಸಾಗಿದ್ದರೆ ಮಾತ್ರ ಹೆಣ್ಣು ಮಕ್ಕಳಿಗೆ ನೆರವು ದೊರೆಯಲಿದೆ. ವೈಯಕ್ತಿಕ ಮಾತ್ರವಲ್ಲದೆ ಸಾಮೂಹಿಕ ವಿವಾಹವಾದವರಿಗೂ ಯೋಜನೆ ಅನ್ವಯವಾಗುತ್ತದೆ.
- ಈ ಆದೇಶದಂತೆ ರಾಜ್ಯ ಸರ್ಕಾರ ಮದುವೆ ಸಂದರ್ಭದಲ್ಲಿ ವಧುವಿನ ಹೆಸರಿಗೆ 50 ಸಾವಿರದ ಚೆಕ್ ಅಥವಾ 50 ಸಾವಿರ ಬೆಲೆಬಾಳುವ ಅಡುಗೆ ಪಾತ್ರೆಗಳು, ಮಂಚ, ಹಾಸಿಗೆ, ಅಲ್ಮೆರಾ ಮತ್ತಿತರೆ ಜೀವನಾವಶ್ಯಕ ಸಾಮಗ್ರಿಗಳನ್ನು ನೀಡುತ್ತದೆ.

- ಇಲ್ಲದೇ ಇದ್ದರೆ 35 ಸಾವಿರ ಮೌಲ್ಯದ ಹಾಸಿಗೆ, ಮಂಚ ಮತ್ತಿತರೆ ಜೀವನಾವಶ್ಯಕ ಸಾಮಗ್ರಿಗಳು ಹಾಗೂ 15 ಸಾವಿರ ಮೊತ್ತದ ಚೆಕ್ ಒದಗಿಸಲಾಗುತ್ತದೆ.

**ಎನ್.ಜಿ.ಓ. ಮೂಲಕವೂ ಲಭ್ಯ:**

ಈ ಹೆಣ್ಣು ಮಕ್ಕಳು ಮದುವೆ ಸಂದರ್ಭದಲ್ಲಿ ಸರ್ಕಾರದ ಸೌಲಭ್ಯ ಪಡೆಯಲು ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ನೆರವನ್ನೂ ಪಡೆಯಬಹುದು. ಹೆಣ್ಣು ಮಕ್ಕಳ ಸಹಾಯಕ್ಕೆ ಬರುವ ಇಂತಹ ಸಂಸ್ಥೆಗಳು ಯೋಜನೆಯಲ್ಲಿ ನಿಗದಿಪಡಿಸಲಾಗಿರುವ ದಾಖಲೆಗಳನ್ನು ನೀಡಿ ಅರ್ಹ ಫಲಾನುಭವಿಗಳಿಗೆ ನಗದು ಒದಗಿಸಿದರೆ ಅವರಿಗೆ ಅಕೌಂಟ್ ಪೇಯಿ ಚೆಕ್ ಮೂಲಕ ಹಣ ಪಾವತಿಸಲಾಗುತ್ತದೆ.

**ಷರತ್ತುಗಳೇನು?**

- ಸಹಾಯಧನ ಪಡೆಯುವ ಹೆಣ್ಣು ಮಕ್ಕಳು, ವಿಚ್ಛೇದಿತ ಅಥವಾ ವಿಧವೆಯ ಕುಟುಂಬದ ವರಮಾನ ವಾರ್ಷಿಕ 1.50 ಲಕ್ಷ ಮೀರುವಂತಿಲ್ಲ.
- ವಧು ರಾಜ್ಯದಲ್ಲಿ ಕನಿಷ್ಠ 3 ವರ್ಷ ವಾಸವಾಗಿರುವ ಬಗ್ಗೆ ದೃಢೀಕೃತ ದಾಖಲೆ ನೀಡಬೇಕು
- ಮದುವೆ ನಿಶ್ಚಯವಾಗಿರುವ ಬಗ್ಗೆ ಲಗ್ನಪತ್ರಿಕೆ (ಮಾಡಿಸಿದ್ದಲ್ಲಿ) ಇತರೆ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕು
- ಮದುವೆ ನಂತರ ವಧು-ವರರ ಭಾವಚಿತ್ರ, ಧಾರ್ಮಿಕ ಸಂಸ್ಥೆ ನೀಡಿರುವ ಮದುವೆ ಪ್ರಮಾಣಪತ್ರ ಅಥವಾ ಉಪ ನೋಂದಣಾಧಿಕಾರಿಗಳು ನೀಡಿರುವ ಮದುವೆ ನೋಂದಣಿ ಪತ್ರ ನೀಡಬೇಕು
- ನಿಗದಿಪಡಿಸಿರುವ ದಾಖಲಾತಿಗಳನ್ನು ಮದುವೆ ತರವಾಯ ನೀಡುವುದಾಗಿ ಪೂರ್ವಭಾವಿ ಘೋಷಣಾ ಪತ್ರ ನೀಡಬೇಕು
- ಅರ್ಜಿದಾರರು ಸಹಾಯಧನ ಮಂಜೂರಾತಿಗೆ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಯಿಂದ ನಿಗದಿತ ಅರ್ಜಿ ನಮೂನೆ ಪಡೆದು ಅದನ್ನು ಭರ್ತಿ ಮಾಡಿ ಮದುವೆಗೆ ಒಂದು ತಿಂಗಳು ಮುಂಚಿತವಾಗಿ ಸಲ್ಲಿಸಬೇಕು
- ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತ ಇಲಾಖೆ ಪರಿಶೀಲನೆ ನಂತರ ಜಿಲ್ಲೆಗೆ ನಿಗದಿಪಡಿಸಾಗುವ ಗುರಿಗೆ ತಕ್ಕಂತೆ ಹಾಗೂ ಅತಿ ಕಡಿಮೆ ಆದಾಯವಿರುವ ಅರ್ಹ ಫಲಾನುಭವಿಗಳಿಗೆ ಮೊದಲ ಆದ್ಯತೆ ಮೇಲೆ ಸಹಾಯಧನ ಅಥವಾ ಸಾಮಗ್ರಿ ಒದಗಿಸಲು ಮಂಜೂರು ನೀಡಬೇಕು
- ಪ್ರತಿ ಜಿಲ್ಲೆಯಲ್ಲಿರುವ ಮುಸ್ಲಿಂ ಜನಸಂಖ್ಯೆ ಆಧಾರದ ಮೇಲೆ ಗುರಿ ನಿಗದಿಪಡಿಸಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರು ಜಿಲ್ಲೆಗೆ ಅನುದಾನ ಬಿಡುಗಡೆ ಮಾಡಬೇಕು.
- ಗುತ್ತಿಗೆದಾರರ ನಿಯೋಜನೆ ಮದುವೆ ಸಂದರ್ಭದಲ್ಲಿ ವಧುವಿಗೆ ಗುಣಮಟ್ಟದ ಜೀವನಾವಶ್ಯ ಸಾಮಗ್ರಿಗಳನ್ನು ನೀಡುವ ಕುರಿತು ಟೆಂಡರ್ ಮೂಲಕ ಗುತ್ತಿಗೆದಾರರನ್ನು ನಿಯೋಜಿಸಲಾಗುತ್ತದೆ. ಈ ಸಂದರ್ಭದಲ್ಲಿ ಮದುವೆ ಕಾರ್ಯಕ್ರಮದ ಸ್ಥಳಕ್ಕೆ ಅವುಗಳನ್ನು ತಲುಪಿಸುವ ಷರತ್ತು ವಿಧಿಸಲಾಗುತ್ತದೆ. ಇದಕ್ಕಾಗಿ ಅಲ್ಪಸಂಖ್ಯಾತ ನಿರ್ದೇಶನಾಲಯದ ನಿರ್ದೇಶಕರು ನಾಲ್ಕು ಕಂದಾಯ ವಿಭಾಗಗಳಿಗೆ ಪಾರದರ್ಶಕ ಕಾಯ್ದೆಯನ್ವಯವೇ ಟೆಂಡರ್ ಕರೆಯಬೇಕು ಎಂದು ಸೂಚಿಸಲಾಗಿದೆ. ಆದರೆ, ಈ ಯೋಜನೆ ದುರುಪಯೋಗವಾಗದಂತೆ ನೋಡಿಕೊಳ್ಳಲು ಸರ್ಕಾರ ಹಲವು ಷರತ್ತುಗಳನ್ನು ವಿಧಿಸಿದೆ.

## ರಾಜ್ಯದ 197 ಸ್ಥಳೀಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೆ ಅಸ್ತು

ರಾಜ್ಯದಲ್ಲಿ 2011 ರ ಜನಗಣತಿ ಆಧರಿಸಿ ಹೊಸದಾಗಿ 164 ಪಟ್ಟಣ ಪಂಚಾಯತಿ, 18 ಪುರಸಭೆ ಹಾಗೂ 15 ನಗರಸಭೆಗಳು ಅಸ್ತಿತ್ವಕ್ಕೆ ಬರಲಿವೆ ನಗರಾಭಿವೃದ್ಧಿ ಸಚಿವ ವಿನಯ್‌ಕುಮಾರ್ ಸೊರಕೆ ಹೇಳಿದರು. ಜನಸಂಖ್ಯೆ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳನ್ನು ಪರಿವರ್ತಿಸವ ಕಾರ್ಯ ಆರಂಭವಾಗಿದೆ. ಜಿಲ್ಲಾಧಿಕಾರಿಗಳಿಂದ ವರದಿ ಬಂದ ಕೂಡಲೇ ಸೂಕ್ತ ಆದೇಶ ಹೊರಡಿಸಲಾಗುವುದು ಎಂದು ತಿಳಿಸಿದ್ದಾರೆ.

**ಮೇಲ್ದರ್ಜೆಗೆ:**

5 ಲಕ್ಷ ಜನಸಂಖ್ಯೆ ಇರುವ ತುಮಕೂರು, ಶಿವಮೊಗ್ಗ ಹಾಗೂ ವಿಜಾಪುರ ನಗರಸಭೆ ಗಳನ್ನು ಮಹಾನಗರ ಪಾಲಿಕೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವವನ್ನು ಅನುಮೋದನೆಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿದೆ. ನಗರೋತ್ಥಾನ ಯೋಜನೆಯ 3ನೇ ಹಂತದಡಿ ಹತ್ತು ಪಾಲಿಕೆಗಳಿಗೆ ತಲಾ ರೂ. 100 ಕೋಟಿ ಅನುದಾನ ನೀಡಲಾಗುವುದು. ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮೈಸೂರು ಮಹಾನಗರ ಪಾಲಿಕೆಗೆ ಹೆಚ್ಚುವರಿಯಾಗಿ ರೂ. 100 ಕೋಟಿ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿದ್ದಾರೆ ಎಂದರು. ಇದಲ್ಲದೆ ರೂ.3250 ಕೋಟಿ ಆವರ್ತನಿಧಿ ಸ್ಥಾಪಿಸಲಾಗಿದ್ದು, ಶೇ 6ರ ಬಡ್ಡಿದರದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಲ ನೀಡಲಾಗುವುದು. ಇದಕ್ಕೆ ಸಚಿವ ಸಂಪುಟದ ಒಪ್ಪಿಗೆ ದೊರೆತಿದ್ದು, ಪ್ರಸ್ತಾವನೆಗಳು ಬಂದರೆ ಸಾಲ ಮಂಜೂರು ಮಾಡಲಾಗುತ್ತದೆ ಎಂದು ತಿಳಿಸಿದರು.

**'ಜೆ-ನರ್ಮ್' ಯೋಜನೆ:**

ಬೆಂಗಳೂರು ಮತ್ತು ಮೈಸೂರಿನಲ್ಲಿ ಜೆ-ನರ್ಮ್‌ನ ಮುಂದುವರಿದ ಯೋಜನೆಗಳಿಗೆ ರೂ.5200 ಕೋಟಿಯ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಲಾಗಿದೆ. ಇದರಡಿ ಈಗಾಗಲೇ 2100 ಬಸ್‌ಗಳು ರಾಜ್ಯಕ್ಕೆ ಮಂಜೂರಾಗಿವೆ ಎಂದರು. ಇದಲ್ಲದೆ ಬೇರೆ ನಗರ - ಪಟ್ಟಣ ಪ್ರದೇಶಗಳಲ್ಲೂ ಈ ಕಾರ್ಯಕ್ರಮದಡಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರೂ.10,400 ಕೋಟಿ ವೆಚ್ಚದ ಪ್ರಸ್ತಾವ ಸಲ್ಲಿಸಲಾಗಿದೆ. ಕುಡಿಯುವ ನೀರಿನ 87, ಒಳಚರಂಡಿ ಯೋಜನೆಯ 47 ಯೋಜನೆಗಳು ಇದರಲ್ಲಿ ಸೇರಿವೆ ಎಂದು ತಿಳಿಸಿದರು.

**ಉದ್ದೇಶಗಳೇನು?**

- 10 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ 164 ಗ್ರಾಮ ಪಂಚಾಯತಿಗಳು ಪಟ್ಟಣ ಪಂಚಾಯತಿಗಳಾಗಲಿವೆ
- 20 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯ 18 ಪಟ್ಟಣ ಪಂಚಾಯತಿಗಳು ಇನ್ನು ಮುಂದೆ ಪುರಸಭೆಗಳಾಗುತ್ತವೆ
- 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ 15 ಪುರಸಭೆಗಳು ನಗರಸಭೆಗಳಾಗುತ್ತವೆ
- ಸ್ಥಳೀಯ ಸಂಸ್ಥೆಗಳಿಗೆ ಶೇ 6 ಬಡ್ಡಿಯಲ್ಲಿ ಸಾಲ ಸಿಗಲಿದೆ ರಾಜಧಾನಿ ಬೆಂಗಳೂರು ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ರಾಮನಗರ - ಚನ್ನಪಟ್ಟಣ - ಬಿಡದಿಯನ್ನು ಸೇರಿಸಿ ಮಹಾನಗರ ಪಾಲಿಕೆ ರಚಿಸಲು ಸರ್ಕಾರ ಚಿಂತನೆ ನಡೆಸಿದೆ. ಅದೇ ರೀತಿ ಮಂಡ್ಯ - ಮದ್ದೂರು ಸೇರಿಸಿ ಮತ್ತೊಂದು ಮಹಾನಗರ ಪಾಲಿಕೆ ರಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆ ಎಂದು ನಗರಾಭಿವೃದ್ಧಿ ಸಚಿವ ವಿನಯ್ ಕುಮಾರ್ ಸೊರಕೆ ತಿಳಿಸಿದರು

**ರಾಜ್ಯದ 58 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟ**

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟಗೊಂಡಿದ್ದು, 58ನೇ ರಾಜ್ಯೋತ್ಸವ ಪ್ರಯುಕ್ತ 58 ಸಾಧಕರನ್ನು ಆಯ್ಕೆ ಮಾಡಲಾಗಿದೆ. ಸಾಹಿತಿಗಳಾದ ಕೋ. ಚನ್ನಬಸಪ್ಪ, ಕೆ.ಬಿ.ಸಿದ್ದಯ್ಯ, ಸೂಲಗಿತ್ತಿ ನರಸಮ್ಮ, ನಟಿ ಗಿರಿಜಾ ಲೋಕೇಶ್, ವ್ಯಂಗ್ಯ ಚಿತ್ರಕಾರ ಪಿ.ಮಹಮ್ಮದ್, ರಂಗಕರ್ಮಿ ಶಶಿಧರ ಅಡಪ, ಕನ್ನಡ ತಂತ್ರಾಂಶ ತಜ್ಞ ಡಾ.ಕೆ.ಪಿ.ರಾವ್ ಪ್ರಶಸ್ತಿಗೆ ಆಯ್ಕೆಯಾದ ಪ್ರಮುಖರು.

**ಇತರೆ ವಿಭಾಗಗಳು:**

- **ಸಾಹಿತ್ಯ:** ಕೋ.ಚನ್ನಬಸಪ್ಪ, ಪ್ರೊ.ಚಂದ್ರಕಾಂತ ಕುಸನೂರು, ಡಾ.ಮಲ್ಲಿಕಾಘಂಟಿ, ಪ್ರೊ. ಕೆ.ಬಿ.ಸಿದ್ದಯ್ಯ, ಡಾ.ಶ್ರೀಕಂಠ ಕೂಡಿಗೆ.
- **ರಂಗಭೂಮಿ:** ಗಜಾನನ ಹರಿ ಮಹಾಲೆ, ಎಚ್.ವಿ.ವೆಂಕಟಸುಬ್ಬಯ್ಯ, ನ.ರತ್ನ, ಫ್ಲೋರಿನಾ ಬಾಯಿ, ಶಶಿಧರ ಅಡಪ.
- **ಸಂಗೀತ:** ಸೋಹನ್‌ಕುಮಾರಿ, ಫಯಾಜ್ ಖಾನ್, ಬಸವರಾಜ ತಿರುಕಪ್ಪ ಭಜಂತ್ರಿ, ಹನುಮಂತರಾಯ ಗೋನವಾರ.
- **ನೃತ್ಯ:** ಎಂ.ಶಕುಂತಲ ಹನುಮಂತಪ್ಪ.
- **ಜಾನಪದ:** ಡಾ. ಶಾಂತಿನಾಯಕ, ಎಲಿಸವ್ವ ಮಾದರ, ಬನ್ನೂರು ಕೆಂಪಮ್ಮ, ಮಹದೇವಪ್ಪ ಮೋನಪ್ಪ ಬಡಿಗೇರ, ಶರಣಪ್ಪ ವಡಗೇರಿ.
- **ಯಕ್ಷಗಾನ-ಬಯಲಾಟ:** ಡಾ.ಕೆ.ಎಂ.ರಾಘವ ನಂಬಿಯಾರ್, ನಾರಾಯಣ ಹಾಸ್ಯಗಾರ ನೆಲ್ಲಿಕಟ್ಟೆ, ರಾಯಪ್ಪ ಸಂಗಪ್ಪ ಕುಂಬಾರ, ಲಕ್ಷ್ಮಿಬಾಯಿ ಸಾಲಹಳ್ಳಿ.
- **ಸಮಾಜಸೇವೆ:** ಸೂಲಗಿತ್ತಿ ನರಸಮ್ಮ, ಕೊಂಡಜ್ಜಿ ಬಿ.ಷಣ್ಮುಕಪ್ಪ, ಮೈನಾ ಗೋಪಾಲಕೃಷ್ಣ, ಟಿ.ರಾಜ, ಬಸವಲಿಂಗಪ್ಪ ಎಸ್.ಜಮಖಂಡಿ.
- **ಹೊರನಾಡ ಕನ್ನಡಿಗ:** ಡಾ.ಆರತಿ ಕೃಷ್ಣ (ಅಮೆರಿಕ)
- **ಸಂಕೀರ್ಣ:** ಹರೇಕಳ ಹಾಜಬ್ಬ, ಈಶ್ವರಚಂದ್ರ ಚಿಂತಾಮಣಿ, ಸೂಗಯ್ಯ ಹಿರೇಮಠ
- **ಸಂಘ-ಸಂಸ್ಥೆ:** ಶಾಹೀನ್ ಶಿಕ್ಷಣ ಸಂಸ್ಥೆ, ಬೀದರ್. ಬಿ.ಬಿ.ಬಣ್ಣದ ಜಾನಪದ ಕಲಾಮೇಳ, ಗದಗ.
- **ವಿಜ್ಞಾನ-ತಂತ್ರಜ್ಞಾನ:** ಡಾ.ಕೆ.ಪಿ.ರಾವ್, ಡಾ.ಎಸ್.ಅಯ್ಯಪ್ಪನ್.
- **ಪರಿಸರ-ಕೃಷಿ:** ಕೆ.ನಾರಾಯಣಸ್ವಾಮಿ, ಡಾ.ಎಂ.ಡಿ.ಸುಭಾಷ್‌ಚಂದ್ರ, ಅನಸೂಯಮ್ಮ, ವಸಂತಕುಮಾರ್ ತಿಮಕಾಪುರ.
- **ಕ್ರೀಡೆ:** ಡಾ.ಸಿ.ಎಂ.ಮುತ್ತಯ್ಯ, ಜಿ.ಎಸ್.ತುಳಸೀಧರ, ಸದಾಶಿವ ಸಾಲಿಯಾನ.
- **ಲಲಿತ ಕಲೆ:** ಶೀಲಾಗೌಡ, ಅಲ್ಲಿಸಾಬ ಸೈ ನದಾಫ, ಟಿ.ಎಂ.ಮಾಯಾಚಾರ್, ವಿಜಯ ಹಾಗರಗುಂಡಗಿ.
- **ವೈದ್ಯಕೀಯ:** ಡಾ.ವಿ.ಲಕ್ಷ್ಮಿನಾರಾಯಣ
- **ಚಲನಚಿತ್ರ:** ಸುಂದರನಾಥ ಸುವರ್ಣ, ಆರ್.ರತ್ನ, ಲೋಕನಾಥ್, ಗಿರಿಜಾ ಲೋಕೇಶ್
- **ಮಾಧ್ಯಮ:** ಗುಡಿಹಳ್ಳಿ ನಾಗರಾಜ, ಸಿ.ಜಿ.ಮಂಜುಳ, ಆರ್.ಪಿ.ವೆಂಕಟೇಶಮೂರ್ತಿ, ಪಿ.ಮಹಮ್ಮದ್, ಎಸ್.ಆರ್ .ವೆಂಕಟೇಶಪ್ರಸಾದ್.

**ರಾಜೀವ್ ಗಾಂಧಿ ಪಂಚಾಯಿತಿ ಸಶಕ್ತೀಕರಣ ಅಭಿಯಾನ್ (ಆರ್.ಜಿ.ಪಿ.ಎಸ್.ಎ.) ರಾಜ್ಯದಲ್ಲೂ ಅನುಷ್ಠಾನ**

ಕೇಂದ್ರ ಪುರಸ್ಕೃತ ರಾಜೀವ್ ಗಾಂಧಿ ಪಂಚಾಯಿತಿ ಸಶಕ್ತೀಕರಣ ಅಭಿಯಾನ್ (ಆರ್.ಜಿ.ಪಿ.ಎಸ್.ಎ.) ಅನುಷ್ಠಾನಕ್ಕೆ ರಾಜ್ಯದಲ್ಲೂ ಕ್ರಮಕೈಗೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಸಚಿವಾಲಯದ ಸೂಚನೆ ಮೇರೆಗೆ ರಾಜ್ಯ ಸರ್ಕಾರವು ಯೋಜನೆಯ ಅನುದಾನ ಹಂಚಿಕೆಯಲ್ಲಿ ವಿನೂತನ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲು ಅನುವಾಗುವಂತೆ, ಕಾರ್ಯಕ್ರಮ ಅನುಷ್ಠಾನಕ್ಕೆ ಅನುಸರಿಸಬೇಕಾದ ವಿಧಿ-ವಿಧಾನಗಳನ್ನು ರೂಪಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ.

**ಸಮಿತಿಯ ಸದಸ್ಯರು:**

ಈ ಸಮಿತಿಯಲ್ಲಿ ಪಂಚಾಯತ್ ರಾಜ್ ಕಾರ್ಯದರ್ಶಿ, ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಆಯುಕ್ತರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ- ಸಂಜೀವಿನಿ ನಿರ್ದೇಶಕರು, ಆರ್.ಡಿ.ಪಿ.ಆರ್. ಆಂತರಿಕ ಆರ್ಥಿಕ ಸಲಹೆಗಾರರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗದ ನಿರ್ದೇಶಕರು ಸದಸ್ಯರಾಗಿದ್ದಾರೆ. ಪಂಚಾಯತ್ ರಾಜ್ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

**ಕಾರ್ಯವೈಖರಿ ಅನುಷ್ಠಾನ:**

ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಸಚಿವಾಲಯವು ದೇಶಾದ್ಯಂತ ಜಾರಿಗೊಳಿಸುತ್ತಿರುವ ಇ- ಪಂಚಾಯತ್, ಪಂಚಾಯತ್ ಎಂಪವರ್ಮೆಂಟ್ ಆ್ಯಂಡ್ ಅಕೌಂಟಬಿಲಿಟಿ ಇನ್ಸೆಂಟೀವ್ ಸ್ಕೀಮ್(ಪಿಇಎಐಎಸ್), ಪಂಚಾಯತ್ ಮಹಿಳಾ ಏವಂ ಯುವಶಕ್ತಿ ಅಭಿಯಾನ(ಪಿಎಂಇವೈಎಸ್ಎ) ಹಾಗೂ ಹಿಂದುಳಿದ ಪ್ರದೇಶಾಭಿವೃದ್ಧಿ ನಿಧಿ(ಬಿಆರ್ಜಿಎಫ್) ಯೋಜನೆಗಳಲ್ಲಿ ಅಳವಡಿಸಿಕೊಳ್ಳಲಾದ ಸಾಮರ್ಥ್ಯಾಭಿವೃದ್ಧಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಸಮ್ಮಿಲನಗೊಳಿಸಿ, ಪಂಚಾಯತ್ ರಾಜ್ ಸಂಸ್ಥೆಗಳು, ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಸಾಮರ್ಥ್ಯಭಿವೃದ್ಧಿ ಬಲಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ 2012-13ನೇ ಸಾಲಿನಿಂದ ಆರ್.ಜಿ.ಪಿ.ಎಸ್.ಎ., ಯೋಜನೆ ಜಾರಿಗೊಳಿಸಿದೆ.

**ಯೋಜನೆಯ ಚಟುವಟಿಕೆಗಳು:**

- ಈ ಯೋಜನೆಯಲ್ಲಿ ಪಂಚಾಯ್ತಿಗಳ ಸಬಲೀಕರಣ, ಮಹಿಳೆಯರಿಗೆ ಮೀಸಲಾತಿ, ಆಡಳಿತ ವಿಕೇಂದ್ರೀಕರಣ, ರಾಜ್ಯ ಹಣಕಾಸು ಆಯೋಗದ ರಚನೆ, ಜಿಲ್ಲಾ ಯೋಜನಾ ಸಮಿತಿಗಳ ರಚನೆ, ಅವುಗಳ ಕಾರ್ಯವೈಖರಿ ಅನುಷ್ಠಾನ ಮಾಡಲಾಗುವುದು.
- ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಗ್ರಾಪಂ, ತಾಪಂ ಮಟ್ಟದಲ್ಲಿ ಆಡಳಿತ ಮತ್ತು ತಾಂತ್ರಿಕ ಸಹಕಾರ ಅಗತ್ಯ.
- ಸಾಮರ್ಥ್ಯಾಭಿವೃದ್ಧಿ ಮತ್ತು ತರಬೇತಿ, ಸಾಂಸ್ಥಿಕ ರಚನೆ, ಪಂಚಾಯ್ತಿಗಳಲ್ಲಿ ಇ- ಆಡಳಿತ, ಮಾಹಿತಿ, ಶಿಕ್ಷಣ ಮತ್ತು ಸಂವಹನ, ರಾಜ್ಯ ಚುನಾವಣಾ ಆಯೋಗ ಬಲವರ್ಧನೆ ಮತ್ತು ವಿನೂತನ ಚಟುವಟಿಕೆಗಳನ್ನು ಈ ಯೋಜನೆ ಒಳಗೊಂಡಿದೆ.

**ದೈಹಿಕ ಅಥವಾ ಮಾನಸಿಕವಾಗಿ ಅಸಮರ್ಥರಾದ ಸರ್ಕಾರಿ ನೌಕರರ ಅವಲಂಬಿತರಿಗೆ ನೇಮಕಾತಿ ಇಲ್ಲ**

ನಿವೃತ್ತಿ ಅಂಚಿನಲ್ಲಿರುವ ಸರ್ಕಾರಿ ನೌಕರರು ಕರ್ತವ್ಯ ನಿರ್ವಹಿಸಲು ದೈಹಿಕ ಅಥವಾ ಮಾನಸಿಕವಾಗಿ ಅಸಮರ್ಥರಾದಾಗ ಅಂತಹ ನೌಕರರ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ 'ಅನುಕಂಪದ ಆಧಾರದ ಮೇಲಿನ ನೇಮಕಾತಿ ತಿದ್ದುಪಡಿ ಕಾಯ್ದೆ'ಯನ್ನು ರಾಜ್ಯ ಸರ್ಕಾರ ಹಿಂಪಡೆದುಕೊಂಡಿದೆ. ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ಕಾಯ್ದೆಗೆ ತಿದ್ದುಪಡಿ ತರುವ ಮೂಲಕ 2011ರಲ್ಲಿ ಸರ್ಕಾರವು ಹೊಸ ನಿಯಮ ಜಾರಿಗೊಳಿಸಿತ್ತು. ಆದರೆ, ಈ ತಿದ್ದುಪಡಿ ಕಾಯ್ದೆಯನ್ನು ಕೆಲವು ಸರ್ಕಾರಿ ನೌಕರರು ದುರುಪಯೋಗಪಡಿಸಿಕೊಳ್ಳುತ್ತಿರುವ ಕಾರಣ ಸರ್ಕಾರ ಇದೀಗ ಆ ತಿದ್ದುಪಡಿ ಕಾಯ್ದೆಯನ್ನೇ ಹಿಂಪಡೆದು ಆದೇಶ ಹೊರಡಿಸಿದೆ.

**ಏನಿದು ಕಾಯ್ದೆ?**

ಸರ್ಕಾರಿ ಸೇವೆಯಲ್ಲಿರುವ ನೌಕರರು ಮೃತಪಟ್ಟರೆ ಅವರ ಅವಲಂಬಿತರಲ್ಲಿ ಒಬ್ಬರಿಗೆ ಅನುಕಂಪದ ಮೇಲೆ ನೌಕರಿ ನೀಡುವ ಕಾಯ್ದೆ ಈಗಾಗಲೇ ಜಾರಿಯಲ್ಲಿದೆ. ಆದರೆ, ಕೆಲವೊಮ್ಮೆ ಈ ಸರ್ಕಾರಿ ನೌಕರರು ನಿವೃತ್ತಿಗೆ ಕೆಲವೇ ವರ್ಷ ಬಾಕಿ ಇರಬೇಕಾದರೆ, ದೈಹಿಕವಾಗಿ ಅಥವಾ ಮಾನಸಿಕ ಕಾಯಿಲೆಯಿಂದ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅನಾರೋಗ್ಯಪೀಡಿತ ನೌಕರರ ಕುಟುಂಬದ ಸದಸ್ಯರೊಬ್ಬರಿಗೆ ಅನುಕಂಪದ ಮೇಲೆ ನೌಕರಿ ನೀಡಲು '1996ರ ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ಕಾಯ್ದೆ'ಗೆ ಹಿಂದಿನ ಸರ್ಕಾರ ತಿದ್ದುಪಡಿ ತಂದಿತ್ತು.

**ಉದ್ದೇಶ:**

ಸರ್ಕಾರಿ ನೌಕರರು ತಮ್ಮ ಹುದ್ದೆ ಸಂಬಂಧ ಕರ್ತವ್ಯ ನಿರ್ವಹಿಸುವಾಗ ಸಂಭವಿಸುವ ಅಪಘಾತದಿಂದ ಅಥವಾ ಕಾಯಿಲೆಯಿಂದ ದೈಹಿಕ-ಮಾನಸಿಕವಾಗಿ ಶಾಶ್ವತವಾಗಿ ಅಸಮರ್ಥರಾದರೆ ಅವರ ಕುಟುಂಬಕ್ಕೆ ನೆರವಾಗುವುದು ಈ ತಿದ್ದುಪಡಿ ಕಾಯ್ದೆ ಉದ್ದೇಶವಾಗಿತ್ತು. ದೈಹಿಕ ಅಥವಾ ಮಾನಸಿಕ ಅಸಮರ್ಥತೆಯು ಸರ್ಕಾರಿ ಸೇವೆ ವೇಳೆ ಅದರಲ್ಲಿಯೂ ಕರ್ತವ್ಯ ನಿರ್ವಹಿಸುವಾಗ ಸಂಭವಿಸುವ ಕಾರಣಗಳಿಂದ ಉಂಟಾಗಿರಬೇಕು. ಅದನ್ನು ಬಿಟ್ಟು, ವಯಸ್ಸಿಗೆ ಅನುಗುಣವಾಗಿ ಬರುವ ಕಾಯಿಲೆ ಅಥವಾ ಕರ್ತವ್ಯದ ಮೇಲಿಲ್ಲದ ಸಂದರ್ಭದಲ್ಲಿ ಉಂಟಾಗುವ ಅಪಘಾತದಿಂದ ಆಗುವ ಅಸಮರ್ಥತೆ ಕಾರಣಕ್ಕೆ ನೌಕರರ ಅವಲಂಬಿತರಿಗೆ ಕೆಲಸ ನೀಡುವುದು ಈ ಕಾಯ್ದೆ ತಿದ್ದುಪಡಿ ಉದ್ದೇಶವಾಗಿರಲಿಲ್ಲ.

**ಕಾಯ್ದೆ ದುರುಪಯೋಗ:**

ಅನೇಕ ಸರ್ಕಾರಿ ನೌಕರರು ನಿವೃತ್ತಿಗೆ ಕೆಲವೇ ವರ್ಷಗಳು ಬಾಕಿ ಇರುವಾಗ, ಸಾಮಾನ್ಯ ಕಾಯಿಲೆಗಳಾದ ಮಧುಮೇಹ, ರಕ್ತದೊತ್ತಡ ಇತ್ಯಾದಿ ನೆಪವೊಡ್ಡಿ ತಾವು ದೈಹಿಕವಾಗಿ ಅಥವಾ ಮಾನಸಿಕವಾಗಿ ಕೆಲಸ ಮುಂದುವರಿಸಲು ಅಸಮರ್ಥರು ಎನ್ನುವ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸುತ್ತಿದ್ದರು. ಆ ಮೂಲಕ, ತಮ್ಮ ಕುಟುಂಬದ ಸದಸ್ಯರೊಬ್ಬರಿಗೆ ಅನುಕಂಪದ ಆಧಾರದಲ್ಲಿ ನೌಕರಿ ನೀಡುವಂತೆ ಅರ್ಜಿ ಸಲ್ಲಿಸುತ್ತಿದ್ದರು. ತನ್ಮೂಲಕ ಅನರ್ಹರು ಸರ್ಕಾರಿ ನೌಕರಿಯನ್ನು ಅನುವಂಶಿಕ ಸ್ವರೂಪದಲ್ಲಿ ಪಡೆಯುವ ಯತ್ನ ನಡೆಸುತ್ತಿದ್ದರು. ಹೀಗಾಗಿ, ಈ ಅನುಕಂಪದ ಆಧಾರದ ಮೇಲೆ ನೌಕರಿ ನೀಡುವ 2011ರ ತಿದ್ದುಪಡಿ ಕಾಯ್ದೆ ವಾಪಸ್ ಪಡೆದಿರುವುದಾಗಿ ಸರ್ಕಾರ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

**ಸುಪ್ರೀಂ ಆದೇಶ:**

ಅನುಕಂಪದ ಆಧಾರದ ಮೇಲೆ ಸರ್ಕಾರಿ ನೌಕರಿ ಪಡೆಯುವುದನ್ನು ತನ್ನ ಹಕ್ಕು ಎಂದು ಪ್ರತಿಪಾದನೆ ಮಾಡುವಂತಿಲ್ಲ ಎಂಬುದನ್ನು 1996ರ ಅನುಕಂಪದ ಆಧಾರದ ಮೇಲಿನ ನೇಮಕಾತಿ ಕಾಯ್ದೆಯಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ, ಅನರ್ಹ ವ್ಯಕ್ತಿಗಳು ವಂಶಪಾರಂಪರ್ಯವಾಗಿ ಸರ್ಕಾರಿ ಸೇವೆಗೆ ಸೇರುವುದನ್ನು ತಪ್ಪಿಸಲು ಕಟ್ಟುನಿಟ್ಟಾಗಿ ನಿಯಮ ಪಾಲಿಸುವಂತೆ ಸುಪ್ರೀಂ ಕೋರ್ಟ್ ಕೂಡ ಉಮಾದೇವಿ ಪ್ರಕರಣದಲ್ಲಿ ತೀರ್ಪು ನೀಡಿದೆ. ಈ ಎಲ್ಲ ಅಂಶ ಪರಿಗಣಿಸಿ ರಾಜ್ಯ ಸರ್ಕಾರ ಈ ಕಾಯ್ದೆಯನ್ನು ಹಿಂಪಡೆದುಕೊಂಡಿದೆ.

# ರಾಷ್ಟ್ರೀಯ

## ತಂಬಾಕು ಕುರಿತಾದ ಜಾಹೀರಾತುಗಳ ಮೇಲೆ ನಿಷೇಧ ಹೇರಲಿರುವ ಕೇರಳ ಸರ್ಕಾರ

ತಂಬಾಕು ಸೇವನೆ ಪ್ರಚೋದಿತ ನೇರ ಮತ್ತು ಪರೋಕ್ಷ ರೀತಿಯ ಜಾಹೀರಾತುಗಳ ಮೇಲೆ ನಿರ್ಬಂಧ ಹೇರುವತ್ತ ಕೇರಳ ಸರ್ಕಾರ ಚಿಂತನೆ ನಡೆಸಿದೆ ಎಂದು ಕೇರಳ ಮುಖ್ಯಮಂತ್ರಿ ಓಮ್ಮನ್ ಚಾಂಡಿ ಅವರು ಹೇಳಿದ್ದಾರೆ. ಭಾರತೀಯ ತಂಬಾಕು ನಿಯಂತ್ರಣ ಕಾಯಿದೆ 2003 ನ್ನು ಎಲ್ಲಾ ರಾಜ್ಯಗಳು ಜಾರಿಗೆ ತರಬೇಕು ಎಂದು ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆಯ ಹಿನ್ನಲೆಯಲ್ಲಿ ಕೇರಳ ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿದೆ.

**ಭಾರತೀಯ ತಂಬಾಕು ನಿಯಂತ್ರಣ ಕಾಯಿದೆ 2003:**

- ಭಾರತೀಯ ತಂಬಾಕು ನಿಯಂತ್ರಣ ಕಾಯಿದೆ 2003 ರ ಸೆಕ್ಷನ್ 5 ತಂಬಾಕು ಸಂಬಂಧಿತ ಎಲ್ಲಾ ರೀತಿಯ ಜಾಹಿರಾತು ಬಿತ್ತರಣೆಯನ್ನು ನಿಷೇಧಿಸುತ್ತದೆ.
- ಈ ಕಾಯಿದೆಯ ಸೆಕ್ಷನ್ 6 ತಂಬಾಕು ಮತ್ತು ಅದರ ಉತ್ಪನ್ನವನ್ನು 18 ವರ್ಷದೊಳಗಿನವರಿಗೆ ಮಾರಾಟ ಮಾಡುವುದನ್ನು ನಿಷೇಧಿಸುತ್ತದೆ.
- ಕೇರಳ ಸರ್ಕಾರ ಈಗಾಗಲೇ ಪಾನ್ ಮಸಾಲ ಉತ್ಪಾದನೆ ಮತ್ತು ಮಾರಾಟವನ್ನು ರಾಜ್ಯದಾದ್ಯಂತ ನಿಷೇಧಿಸಿದೆ.

## "ಕನ್ಯಾಶ್ರೀ" ಯೋಜನೆ ಜಾರಿ ಮಾಡಿದ ಪಶ್ಚಿಮ ಬಂಗಾಳ

ಹೆಣ್ಣು ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸುವ ಮತ್ತು ಬಾಲ್ಯವಿವಾಹಕ್ಕೆ ಕಡಿವಾಣ ಹಾಕುವ ಸಲುವಾಗಿ "ಕನ್ಯಾಶ್ರೀ" ಎಂಬ ವಿನೂತನ ಯೋಜನೆಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಚಾಲನೆಗೊಳಿಸಿದರು. ಕನ್ಯಾಶ್ರೀ ಯೋಜನೆ ಒಂದು ಅತ್ಯುತ್ತಮ ಸಾಮಾಜಿಕ ಸುಧಾರಣೆ ತರುವ ಯೋಜನೆ ಎಂದು ಹೇಳಲಾಗಿದೆ.

**ಯೋಜನೆ ಬಗ್ಗೆ:**

- ಹೆಣ್ಣು ಮಕ್ಕಳ ಸಮಗ್ರ ಅಭಿವೃದ್ದಿಯನ್ನು ಗುರಿಯಿಟ್ಟುಕೊಂಡು ಕನ್ಯಾಶ್ರೀ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಬಾಲ್ಯವಿವಾಹ ಅತ್ಯಧಿಕವಾಗಿದ್ದು, ಅದನ್ನು ತಡೆಯುವುದರ ಜತೆಗೆ ಶಾಲೆಯಿಂದ ಹೆಣ್ಣುಮಕ್ಕಳು ಹೊರ ಉಳಿಯುವುದನ್ನು ನಿಯಂತ್ರಿಸುವುದು ಈ ಯೋಜನೆಯ ಮತ್ತೊಂದು ಉದ್ದೇಶ.
- ವಾರ್ಷಿಕ ಆದಾಯ 1,2 ಲಕ್ಷಕ್ಕಿಂತ ಕಡಿಮೆ ಇರುವ ಕುಟುಂಬವು ಈ ಯೋಜನೆಯಡಿ ಉಪಯೋಗ ಪಡೆಯಬಹುದು. ಹೆಣ್ಣು ಮಗುವಿನ ವ್ಯಾಸಂಗಕ್ಕಾಗಿ ವಾರ್ಷಿಕ 25,000 ರೂಗಳನ್ನು 18 ವರ್ಷದೊಳಗಿನ ಮದುವೆಯಾಗದ ಹೆಣ್ಣು ಮಕ್ಕಳಿಗೆ ಈ ಯೋಜನೆಯಡಿ ನೀಡಲಾಗುವುದು.

- ರಾಜಾರಾಂ ಮೋಹನ್ ರಾಯ್, ಈಶ್ವರ್ ಚಂದ್ರ ವಿದ್ಯಾ ಸಾಗರ್ ರವರು ಬಾಲ್ಯವಿವಾಹ ಪದ್ಧತಿಯನ್ನು ತೊಳೆದು ಹಾಕಲು ಶ್ರಮಿಸಿ ಸಮಾಜ ಸುಧಾರಣೆ ಒತ್ತು ನೀಡಿದ್ದರು. ಅವರ ಸ್ಪೂರ್ತಿಯಾಗಿ ಕನ್ಯಾಶ್ರೀ ಯೋಜನೆಯನ್ನು ಜಾರಿಗೊಳಿಸಿರುವುದಾಗಿ ಮಮತಾ ಬ್ಯಾನರ್ಜಿಯವರು ಹೇಳಿದ್ದಾರೆ. ಈ ಯೋಜನೆಯಡಿ ಸುಮಾರು 24 ಲಕ್ಷ ಹೆಣ್ಣು ಮಕ್ಕಳನ್ನು ಉಪಯೋಗವನ್ನು ಪಡೆದುಕೊಳ್ಳಲಿದ್ದಾರೆ.

**ಮೊಬೈಲ್ ಪೋರ್ಟಬಲಿಟಿ ನಂತರ ಈಗ 'ಎಲ್.ಪಿ.ಜಿ. ಪೋರ್ಟಬಲಿಟಿ': ಕೇಂದ್ರ ಸರ್ಕಾರ**

ಎಲ್‌ಪಿಜಿ ವಿತರಕರು ಸರಿಯಾದ ಸಮಯಕ್ಕೆ ಅಡುಗೆ ಅನಿಲ ಪೂರೈಸುತ್ತಿಲ್ಲ, ಹೆಚ್ಚಿನ ದರ ವಸೂಲಿ ಮಾಡುತ್ತಾರೆ. ಸೂಕ್ತ ಸೇವೆ ನೀಡುವುದಿಲ್ಲ ಎಂಬ ಗ್ರಾಹಕರ ದೂರಿಗೆ ಕೊನೆಗೂ ಪರಿಹಾರ ದೊರಕಿಸಿಕೊಟ್ಟಿರುವ ಕೇಂದ್ರ ಸರ್ಕಾರ, 'ಎಲ್‌ಪಿಜಿ ಪೋರ್ಟಬಲಿಟಿ' ಎಂಬ ಯೋಜನೆ ಜಾರಿಗೆ ತಂದಿದೆ. ಅಂದರೆ, ಇನ್ನು ಮುಂದೆ ಎಲ್‌ಪಿಜಿ ಗ್ರಾಹಕರು, ಸೂಕ್ತ ಸೇವೆ ಒದಗಿಸದ ಡೀಲರ್‌ಗಳನ್ನು ಅಥವಾ ಅನಿಲ ಕಂಪನಿಯನ್ನೇ ಬದಲಾಯಿಸಿ, ತಮಗೆ ಬೇಕಾದ ಡೀಲರ್‌ಗಳು ಅಥವಾ ಕಂಪನಿಗಳಿಂದ ಸಿಲಿಂಡರ್ ಪಡೆಯಬಹುದಾಗಿದೆ. ಪ್ರಾಯೋಗಿಕವಾಗಿ ಕರ್ನಾಟಕದ ಬೆಂಗಳೂರು ಮತ್ತು ಹುಬ್ಬಳ್ಳಿ ಸೇರಿದಂತೆ ದೇಶದ 30 ನಗರಗಳಲ್ಲಿ ಯೋಜನೆ ಜಾರಿಗೆ ತರಲು ಪೆಟ್ರೋಲಿಯಂ ಸಚಿವಾಲಯ ನಿರ್ಧರಿಸಿದೆ. ಇಲ್ಲಿ ಯೋಜನೆಗೆ ಸಿಗುವ ಪ್ರತಿಕ್ರಿಯೆ ಗಮನಿಸಿ ದೇಶದೆಲ್ಲೆಡೆ ಯೋಜನೆ ಜಾರಿ ಮಾಡಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಏನಿದು ಎಲ್‌ಪಿಜಿ ಪೋರ್ಟಬಲಿಟಿ?**

ಈ ಹಿಂದೆ ಮೊಬೈಲ್ ಗ್ರಾಹಕರು ಕಂಪನಿ ಬದಲಾಯಿಸುವ ಮೊಬೈಲ್ ಪೋರ್ಟಬಲಿಟಿ ಅವಕಾಶ ಕಲ್ಪಿಸಿದ್ದ ಕೇಂದ್ರ ಸರ್ಕಾರ ಇದೀಗ ಎಲ್‌ಪಿಜಿ ಪೋರ್ಟಬಲಿಟಿ ಯೋಜನೆ ಜಾರಿಗೆ ತಂದಿದೆ. ಇದರನ್ವಯ ಗ್ರಾಹಕರು ತಮ್ಮ ನಗರಗಳಲ್ಲಿ ಯಾರು ಉತ್ತಮ ರೀತಿಯಲ್ಲಿ ಸೇವೆ ನೀಡುತ್ತಾರೋ ಆ ವಿತರಕರನ್ನು ಆಯ್ಕೆ ಮಾಡಿಕೊಳ್ಳಬಹುದು. ಒಂದು ವೇಳೆ ತಾವು ಸಿಲಿಂಡರ್ ಖರೀದಿ ಮಾಡಿದ ಕಂಪನಿಯ ಸೇವೆಯೇ ಸರಿ ಇಲ್ಲ ಎಂದಾದಲ್ಲಿ ಆ ಊರಿನಲ್ಲಿರುವ ಅಥವಾ ತಾವು ವಾಸಿಸುವ ಪ್ರದೇಶದಲ್ಲಿರುವ ಬೇರೆ ಯಾವುದೇ ಕಂಪನಿಗೆ ತಮ್ಮ ಸಿಲಿಂಡರ್ ಅನ್ನು ಬದಲಾಯಿಸಿಕೊಳ್ಳಲೂ ಅವಕಾಶವನ್ನೂ ಕಲ್ಪಿಸಲಾಗಿದೆ.

**ಬದಲಾವಣೆ ಹೇಗೆ?**

- ವಿತರಕರು ಅಥವಾ ಕಂಪನಿ ಬದಲಾಯಿಸಲು ಬದಲಿಸುವ ಗ್ರಾಹಕರು ನೇರವಾಗಿ ವಿತರಕರ ಬಳಿ ತೆರಳಿ ಈ ಕುರಿತು ಅರ್ಜಿ ನೀಡಬಹುದು. ಇಲ್ಲದೇ ಹೋದಲ್ಲಿ ಆನ್‌ಲೈನ್ ಮೂಲಕವೇ ಈ ಬೇಡಿಕೆ ಸಲ್ಲಿಸಬಹುದು.
- ಇದಕ್ಕೆ ಅನುವಾಗುವಂತೆ ಆನ್‌ಲೈನ್‌ನಲ್ಲೂ ಡೀಲರ್ ಅಥವಾ ಕಂಪನಿ ಬದಲಿಸುವ ಆಯ್ಕೆಗಳನ್ನು ಒದಗಿಸಲಾಗುತ್ತದೆ.
- ಅಲ್ಲದೆ ಇಂತಹ ಬೇಡಿಕೆಗಳ ಕುರಿತು ಕಂಪನಿ ಅಥವಾ ಡೀಲರ್‌ಗಳು ಯಾವ ಕ್ರಮ ಕೈಗೊಂಡಿದ್ದಾರೆ ಎಂದು ಆನ್‌ಲೈನ್ ಮೂಲಕವೇ ಕಣ್ಣಿಡುವ ವ್ಯವಸ್ಥೆಯನ್ನೂ ಕೇಂದ್ರ ಸರ್ಕಾರ ಜಾರಿಗೊಳಿಸಿದೆ.
- ಹೀಗಾಗಿ ಗ್ರಾಹಕರಿಗೆ ಡೀಲರ್‌ಗಳು ಈ ಅವಕಾಶವನ್ನು ನಿರಾಕರಿಸದಂತಹ ವ್ಯವಸ್ಥೆ ಜಾರಿ ಮಾಡಲಾಗಿದೆ.

## ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಐದು ವಿ.ವಿಗಳು

ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಐದು ವಿ.ವಿಗಳು ಸೇರಿವೆ. ವಿಶ್ವದ 400 ವಿಶ್ವವಿದ್ಯಾಲಯಗಳನ್ನು ಅತ್ಯುತ್ತಮ ಎಂದು ಗುರುತಿಸಲಾಗಿದ್ದು, ಇದರಲ್ಲಿ ಭಾರತದ ಪಾಲು ಐದು. 2012 ರಲ್ಲಿ ಬರೀ ಮೂರು ವಿ.ವಿ.ಗಳಿಗೆ ಈ ಸ್ಥಾನ ಸಿಕ್ಕಿತ್ತು. ಪಂಜಾಬ್ ವಿಶ್ವವಿದ್ಯಾಲಯ, ಭಾರತೀಯ ತಾಂತ್ರಿಕ ಸಂಸ್ಥೆ (ಐಐಟಿ)ಯ ದೆಹಲಿ, ಕಾನ್ಪುರ, ಖರಗ್‌ಪುರ ಹಾಗೂ ರೂರ್ಕಿಯಲ್ಲಿರುವ ಕ್ಯಾಂಪಸ್‌ಗಳು ವಿಶ್ವಮಟ್ಟದಲ್ಲಿ ಅತ್ಯುತ್ತಮ ವಿ.ವಿ.ಗಳಾಗಿವೆ.

**ಮೊದಲ 200 ಶ್ರೇಷ್ಠ ವಿವಿಯಲ್ಲಿ ಸ್ಥಾನವಿಲ್ಲ:**

ಅಂತರರಾಷ್ಟ್ರೀಯ ಶ್ರೇಷ್ಠ ವಿ.ವಿಗಳ ಸಂಖ್ಯೆ ಮೂರರಿಂದ ಐದಕ್ಕೆ ಏರಿರುವುದು ಭಾರತಕ್ಕೆ ಪ್ರೋತ್ಸಾಹದಾಯಕ ಬೆಳವಣಿಗೆ ಎನ್ನಬಹುದಾದರೂ ಮೊದಲ 200 ಶ್ರೇಷ್ಠ ವಿ.ವಿಗಳಲ್ಲಿ ಭಾರತದ ಯಾವುದೇ ವಿ.ವಿ.ಗೆ ಸ್ಥಾನ ಸಿಕ್ಕಿಲ್ಲ ಎಂದು ವಿವಿಗಳ ಅಂತಾರಾಷ್ಟ್ರೀಯ ಶ್ರೇಣಿ ನೀಡುವ 'ಟೈಮ್ಸ್ ಹೈಯರ್ ಎಜುಕೇಶನ್ ವರ್ಲ್ಡ ಯೂನಿವರ್ಸಿಟಿ ರಾಯಂಕಿಂಗ್ಸ'ನ ಸಂಪಾದಕ ಫಿಲ್ ಬಾಯಟಿ ತಿಳಿಸಿದರು.

**ಮಾನದಂಡವೇನು?**

'ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಥಾನ ಪಡೆಯಲು ಶೈಕ್ಷಣಿಕ ಗುಣಮಟ್ಟ ಹೆಚ್ಚಳಕ್ಕೆ ಭಾರತ ಹೆಚ್ಚು ಶ್ರಮವಹಿಸುತ್ತಿದೆ. ಮೊದಲ 200 ಅತ್ಯುತ್ತಮ ವಿ.ವಿಗಳ ಪಟ್ಟಿಯಲ್ಲಿ ಸ್ಥಾನ ಪಡೆಯದೆ ಹೋದರೂ ಅತ್ಯುತ್ತಮ 400 ವಿ.ವಿಗಳಲ್ಲಿ ಐದು ಸಂಸ್ಥೆಗಳು ಸ್ಥಾನ ಪಡೆದದ್ದು ಸಾಮಾನ್ಯ ಸಾಧನೆಯೇನಲ್ಲ' ಎಂದು ಶ್ರೇಣಿ ನೀಡುವ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಎಲಿಜಬೆತ್ ಗಿಬ್ನೆ ತಿಳಿಸಿದರು. ಉಳಿದಂತೆ ಕ್ಯಾಲಿಫೋರ್ನಿಯಾ ತಾಂತ್ರಿಕ ಸಂಸ್ಥೆ ಸತತ ಮೂರನೆಯ ಬಾರಿಗೆ ಮೊದಲ ಸ್ಥಾನ ಉಳಿಸಿಕೊಂಡಿದ್ದರೆ ಹಾರ್ವರ್ಡ್ ವಿ.ವಿ ನಾಲ್ಕನೇ ಸ್ಥಾನದಿಂದ 2ನೇ ಸ್ಥಾನಕ್ಕೆ ಬಡ್ತಿ ಪಡೆದಿದೆ.

## ವೀಸಾ ಇಲ್ಲದೆ ಪ್ರಪಂಚದ 52 ರಾಷ್ಟ್ರಗಳಿಗೆ ಭಾರತೀಯರು ಪ್ರಯಣಿಯಸಬಹುದು

ವೀಸಾ ಇಲ್ಲದೆ ಅತ್ಯಧಿಕ ರಾಷ್ಟ್ರಗಳಿಗೆ ಪ್ರಯಾಣಿಸುವ ಅವಕಾಶ ಇರುವುದು ಬ್ರಿಟನ್ನರಿಗೆ ಮಾತ್ರ. ಅವರು 173 ರಾಷ್ಟ್ರಗಳಿಗೆ ವೀಸಾ ಇಲ್ಲದೆ ಬರೀ ಪಾಸ್‌ಪೋರ್ಟ್ ಮೂಲಕ ಪ್ರಯಾಣಿಸಬಹುದು. ಅದೇ ಭಾರತೀಯರು 52 ದೇಶಗಳಲ್ಲಿ ವೀಸಾ ಇಲ್ಲದೆ ಅಥವಾ ಸ್ಥಳದಲ್ಲೇ ವೀಸಾ ಪಡೆದು ಪ್ರಯಾಣಿಸಲು ಅವಕಾಶ ಇದೆ.

**ಹೆನ್ಲೆ ಅಂಡ್ ಪಾರ್ಟ್‌ನರ್ಸ್ ವೀಸಾ ವರದಿಯಲ್ಲೇನಿದೆ?**

- ಹೆನ್ಲೆ ಅಂಡ್ ಪಾರ್ಟ್‌ನರ್ಸ್ ವೀಸಾ ನಿರ್ಬಂಧ ಸೂಚ್ಯಂಕದ ಪ್ರಕಾರ, ಫಿನ್‌ಲ್ಯಾಂಡ್ ಮತ್ತು ಸ್ವೀಡನ್ ನಾಗರಿಕರಿಗೆ ಇರುವ ವೀಸಾಮುಕ್ತ ಪ್ರಯಾಣ ಅವಕಾಶಗಳಿಗೆ ತಕ್ಕಂತೆ ಬ್ರಿಟನ್ ನಾಗರಿಕರಿಗೂ ವೀಸಾಮುಕ್ತ ಪ್ರಯಾಣ ಅವಕಾಶಗಳಿವೆ.
- ಸೂಚ್ಯಂಕದ ಟಾಪ್ 10 ರಾಷ್ಟ್ರಗಳ ಪಟ್ಟಿಯಲ್ಲಿ 9 ಹೆಸರುಗಳು ಐರೋಪ್ಯ ಒಕ್ಕೂಟ ರಾಷ್ಟ್ರಗಳ ಹೆಸರಿದ್ದರೆ, 10ನೇ ಹೆಸರು ಅಮೆರಿಕದ್ದು.

- ಸೂಚ್ಯಂಕ ಪಟ್ಟಿಯಲ್ಲಿ ಭಾರತ 74ನೇ ಸ್ಥಾನದಲ್ಲಿದೆ. ಆಫ್ಘಾನಿಸ್ತಾನಕ್ಕೆ ಕೊನೆಯ ಸ್ಥಾನ. 28 ರಾಷ್ಟ್ರಗಳು ವೀಸಾಮುಕ್ತ ಪ್ರಯಾಣ ಪಟ್ಟಿಯಲ್ಲಿವೆ.
- ಪಾಸ್‌ಪೋರ್ಟ್ ಹೊಂದಿರುವ ಇರಾಕ್ ನಾಗರಿಕರು 31 ರಾಷ್ಟ್ರಗಳಿಗೆ ವೀಸಾ ಇಲ್ಲದೆ ಪ್ರಯಾಣಿಸಬಹುದು.
- ಪಾಕಿಸ್ತಾನ ಮತ್ತು ಸೊಮಾಲಿಯಾ ರಾಷ್ಟ್ರಗಳಿಗೆ ಪಟ್ಟಿಯಲ್ಲಿ ಕೊನೆಯಿಂದ ಮೂರನೇ ಸ್ಥಾನದಲ್ಲಿವೆ. ಅವು 32 ರಾಷ್ಟ್ರಗಳಿಗೆ ವೀಸಾರಹಿತವಾಗಿ ಪ್ರಯಾಣಿಸಬಹುದು.

**ಭಾರತೀಯರಿಗೆ ಇರುವ ಸೌಲಭ್ಯಗಳು:**

- ಅಂತಾರಾಷ್ಟ್ರೀಯ ವೈಮಾನಿಕ ಸಂಚಾರ ಸಂಸ್ಥೆ(ಐಎಟಿಎ)ಯ ಪಾಸ್‌ಪೋರ್ಟ್ ಮಾಹಿತಿ ಪ್ರಕಾರ, ಪಾಸ್‌ಪೋರ್ಟ್ ಹೊಂದಿರುವ ಭಾರತ ನಾಗರಿಕರು ವೀಸಾ ಇಲ್ಲದೆ ಅಥವಾ ಸ್ಥಳದಲ್ಲೇ ವೀಸಾ ಪಡೆದು 52 ದೇಶಗಳಿಗೆ ಪ್ರಯಾಣಿಸಬಹುದು.
- 28 ರಾಷ್ಟ್ರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ವೀಸಾಮುಕ್ತ ಪ್ರಯಾಣಕ್ಕೆ ಲಭ್ಯವಿವೆ.
- ಭಾರತೀಯ ನಾಗರಿಕರು ನೇಪಾಳ ಮತ್ತು ಭೂತಾನ್‌ಗೆ ಪ್ರವಾಸ ಕೈಗೊಳ್ಳಲು ಮತ್ತು ಕೆಲಸ ಮಾಡಲು ವೀಸಾ ಅವಶ್ಯಕತೆ ಇಲ್ಲ.
- ಭಾರತೀಯ ಪಾಸ್‌ಪೋರ್ಟ್‌ದಾರರು ಕೆಲವು ರಾಷ್ಟ್ರಗಳಿಗೆ ಭೇಟಿ ನೀಡಬೇಕಾದರೆ ಅವರ ವೀಸಾ ಅಗತ್ಯತೆಗಳಿಗೆ 'ವಾಸಿಸುವ ರಾಷ್ಟ್ರ ' ಪ್ರಮುಖ ಅಂಶವಾಗಲಿದೆ.
- ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ನಾಗರಿಕ ಕಾಯಂ ನಿವಾಸಿ ಪರವಾನಗಿ (ಗ್ರೀನ್ ಕಾರ್ಡ್) ಹೊಂದಿದ್ದರೆ, ಅಂಥವರು ಕೆನಡಾ, ಮೆಕ್ಸಿಕೊ ಮತ್ತಿತರ ರಾಷ್ಟ್ರಗಳಿಗೆ ಪ್ರಯಾಣಿಸಲು ವೀಸಾ ಅಗತ್ಯವಿಲ್ಲ.
- ಜಪಾನ್‌ನಲ್ಲಿ ನೆಲೆಸಿರುವ ಭಾರತೀಯ ನಾಗರಿಕ ಏಲಿಯನ್ ನೋಂದಣಿ ಕಾರ್ಡ್ ಹೊಂದಿದ್ದರೆ, ಪ್ರವಾಸ ಮತ್ತು ಅಲ್ಪಾವಧಿಯ ವ್ಯಾಪಾರ ಉದ್ದೇಶಕ್ಕಾಗಿ ದಕ್ಷಿಣ ಕೊರಿಯಾಕ್ಕೆ ಪ್ರಯಾಣಿಸಬಹುದು.

**ಭಾರತೀಯ ಅಂಚೆ ಇಲಾಖೆಯಿಂದ 'ಇನ್‌ಸ್ಟಾಂಟ್ ಮನಿ ಆರ್ಡರ್ '(ಐಎಂಒ) ಸೇವೆ**

ಬರೋಬ್ಬರಿ 238 ವರ್ಷಗಳ ಇತಿಹಾಸ ಇರುವ ಭಾರತೀಯ ಅಂಚೆ ಇಲಾಖೆ ಹಲವು ಬದಲಾವಣೆಗಳಿಗೆ ತನ್ನನ್ನು ತೆರೆದುಕೊಂಡಿದೆ. ಹಳೆಯ ಸೇವೆಗಳು ಹೊಸ ವ್ಯವಸ್ಥೆಗೆ ಬದಲಾಗಿವೆ. ಹಳೆಯ ವ್ಯವಸ್ಥೆ ಜತೆಗೆ ಹೊಸ ವ್ಯವಸ್ಥೆಯಾದ ಇನ್ ಸ್ಟಾಂಟ್ ಮನಿ ಆರ್ಡರ್ (ಐಎಂಒ) ಜಾರಿಗೆ ಬಂದಿದೆ.

**ಏನಿದು ಐಎಂಒ?**

ಊರಲ್ಲಿದ್ದವರು ಅಂಚೆ ಇಲಾಖೆಗೆ ಹೋಗಿ ದುಡ್ಡು ಪಡೆಯಬೇಕಾದ ವ್ಯಕ್ತಿಯ ವಿಳಾಸ ನೀಡಿ ಹಣ ಪಾವತಿ ಮಾಡುತ್ತಿದ್ದ ಪದ್ಧತಿಯೇ ಇಲ್ಲೂ ಅನ್ವಯಿಸುತ್ತದೆ. ಆದರೆ, ಮೊದಲಿನಂತೆ ನಾಲ್ಕಾರು ದಿನಗಳು ಹಿಡಿಯುವುದಿಲ್ಲ. ದುಡ್ಡು ಪಾವತಿ ಮಾಡಿದ ಕ್ಷಣಾರ್ಧದಲ್ಲೇ ನಿಗದಿತ ವ್ಯಕ್ತಿಗೆ ಹಣ ತಲುಪುತ್ತದೆ. ಆನ್‌ಲೈನ್ ಮೂಲಕವೇ ವ್ಯವಹಾರ.

**ಜಮಾ ಹೇಗೆ?**

- ಅಂಚೆ ಇಲಾಖೆಗೆ ಹೋಗಿ 'ಟು ರೆಮಿಟ್ ಪೇಮೆಂಟ್' (ಟಿಆರ್‌ಪಿ-1) ಪಡೆದು ದುಡ್ಡು ಪಡೆಯಬೇಕಾದ ವ್ಯಕ್ತಿಯ ಪೂರ್ಣ ಹೆಸರು, ವಿಳಾಸ ಸೇರಿದಂತೆ ಇನ್ನಿತರ ಮಾಹಿತಿ ಭರ್ತಿ ಮಾಡಬೇಕು.
- ಬುಕಿಂಗ್ ಕ್ಲರ್ಕ್ ಬಳಿ ಭರ್ತಿ ಮಾಡಿದ ಪ್ರತಿ ನೀಡಿದರೆ ಅದರಲ್ಲಿರುವ ಪೂರ್ಣ ವಿವರ ಪಡೆದು 16 ಅಂಕಿಯ ಗೌಪ್ಯ ಸಂಖ್ಯೆಯುಳ್ಳ ಕಂಪ್ಯೂಟರ್ ರಸೀದಿ ನೀಡುತ್ತಾರೆ.
- ಇದು ಸೀಲ್ಡ್ ಆಗಿರುವುದರಿಂದ ಕ್ಲರ್ಕ್‌ಗೂ ಆ ಸಂಖ್ಯೆಗಳು ಗೊತ್ತಿರುವುದಿಲ್ಲ.

**ಪಡೆಯುವುದು ಹೇಗೆ?**

- ದುಡ್ಡು ಪಡೆಯುವ ವ್ಯಕ್ತಿಗೆ ಹಣ ಜಮಾ ಮಾಡಿದ ವೇಳೆ ನೀಡಿರುವ 16 ಅಂಕಿಯ ಗೌಪ್ಯ ಸಂಖ್ಯೆಗಳನ್ನು ಎಸ್‌ಎಂಎಸ್ ಅಥವಾ ಫೋನ್ ಮಾಡಿ ನೀಡಬೇಕು.
- ಆ ಸಂಖ್ಯೆಯನ್ನು ಪಡೆದು ಹತ್ತಿರದ ಅಂಚೆ ಇಲಾಖೆಗೆ ಹೋಗಿ 'ಟು ಮೇಕ್ ಪೇಮೆಂಟ್' (ಟಿಎಂಪಿ-1) ಫಾರ್ಮ್ ಭರ್ತಿ ಮಾಡಬೇಕು. ಜತೆಗೆ ಭಾವಚಿತ್ರವಿರುವ ಗುರುತಿನ ಚೀಟಿ ತೋರಿಸಬೇಕು.
- ಎಲ್ಲವೂ ಸರಿಯಾಗಿದ್ದರೆ ಕ್ಷಣಾರ್ಧದಲ್ಲೇ ದುಡ್ಡು ಪಡೆಯಬಹುದು. 20,000 ಸಾವಿರದವರೆಗೂ ದುಡ್ಡನ್ನೇ ನೀಡಲಾಗುತ್ತದೆ. ಅದಕ್ಕಿಂತಲೂ ಮೇಲ್ಪಟ್ಟಿದ್ದರೆ ಚೆಕ್ ಮೂಲಕ ನೀಡಲಾಗುತ್ತದೆ. ಅಂಚೆ ಇಲಾಖೆಯಲ್ಲೇ ಖಾತೆ ಇದ್ದರೆ ನೇರವಾಗಿ ಅಲ್ಲಿಗೇ ಜಮಾ ಮಾಡಲಾಗುತ್ತದೆ.

**ಎಲ್ಲೆಲ್ಲಿ ದುಡ್ಡು ಪಡೆಯಬಹುದು?**

ಐಎಂಒ ಮೂಲಕ ಕಳುಹಿಸಿದ ದುಡ್ಡು ಪಡೆಯಲು ಹತ್ತಿರದ ಕೇಂದ್ರ ಅಂಚೆಕಚೇರಿಗೆ ತೆರಳಬೇಕು. ಅಲ್ಲಿ 16 ಅಂಕೆಗಳ ಗೌಪ್ಯ ಸಂಖ್ಯೆ ನೀಡಿದರೆ ದುಡ್ಡು ಪಡೆಯಬಹುದು. ಕೇವಲ ಐಎಂಒ ವ್ಯವಸ್ಥೆ ಇರುವ ಅಂಚೆ ಕಚೇರಿಗಳಲ್ಲಿ ಮಾತ್ರ ಈ ದುಡ್ಡನ್ನು ಪಡೆಯಬಹುದು. ಸದ್ಯ ದೇಶದ ಪ್ರಮುಖ 11 ನಗರಗಳಲ್ಲಿ 24 ಶಾಖೆಗಳ ಮೂಲಕ ವಹಿವಾಟು ನಡೆದಿದೆ. ಬೆಂಗಳೂರಿನ ಕೇಂದ್ರ ಅಂಚೆ ಕಚೇರಿ, ರಾಜಾಜಿನಗರ ಹಾಗೂ ಜಯನಗರ ಅಂಚೆ ಕಚೇರಿಗಳಲ್ಲಿ ಐಎಂಒ ವ್ಯವಸ್ಥೆ ಜಾರಿಯಲ್ಲಿದೆ. ಶೀಘ್ರವೇ ರಾಜ್ಯದ ವಿವಿಧ ಕೇಂದ್ರಗಳಲ್ಲೂ ಆರಂಭವಾಗಲಿದೆ.

**ಎಷ್ಟು ಸುರಕ್ಷಿತ?**

16 ಅಂಕಿಗಳ ಗೌಪ್ಯ ಸಂಖ್ಯೆ ನೀಡಿದರೆ ಮಾತ್ರ ದುಡ್ಡು ಪಡೆಯಬಹುದು ಎಂಬುದು ಒಪ್ಪತಕ್ಕ ಮಾತು. ಆದರೆ, ಇದು ದುರುಪಯೋಗವಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಭಾವಚಿತ್ರವಿರುವ ಗುರುತಿನ ಚೀಟಿ ತೋರಿಸಿ ಹಣ ಪಡೆಯುವ ವ್ಯವಸ್ಥೆ ಇದ್ದರೂ ಎಡವಟ್ಟಾಗುವ ಸಂಭವ ಇದೆ. ಸ್ವಲ್ಪ ಯಾಮಾರಿದರೂ ಸಾವಿರಾರು ರುಪಾಯಿ ಕೈ ತಪ್ಪುವ ಭೀತಿ ಇರುತ್ತದೆ. ಹೊಸ ವ್ಯವಸ್ಥೆ ನಡುವೆ ಕುಂದಿದಂತೆ ಕಂಡುಬರುವ ಅಂಚೆ ಇಲಾಖೆಗೆ ನೂತನ ವ್ಯವಸ್ಥೆಗಳನ್ನು ಜಾರಿಗಳಿಸಿ ಅನುಷ್ಠಾನಗೊಳಿಸಲೇಬೇಕಾಗಿದೆ.

## ಚುನಾವಣೆಯಲ್ಲಿ ಮತಪತ್ರ ತಾಳೆ ಪರಿಶೋಧನಾ ವ್ಯವಸ್ಥೆ ಸೌಲಭ್ಯಕ್ಕೆ ಸುಪ್ರೀಂ ಕೋರ್ಟ್ ಆದೇಶ

ಮುಂಬರುವ 2014ರ ಸಾರ್ವತ್ರಿಕ ಚುನಾವಣೆಯಲ್ಲಿ ಹಂತ-ಹಂತವಾಗಿ ವಿದ್ಯುನ್ಮಾನ ಮತ ಯಂತ್ರಗಳಲ್ಲಿ (ಇವಿಎಂ) ಮತಪತ್ರ ತಾಳೆ ಪರಿಶೋಧನಾ ವ್ಯವಸ್ಥೆ (ವಿವಿಪಿಎಟಿ) ಮತ್ತು ರಶೀದಿ ಸೌಲಭ್ಯವನ್ನು ಅಳವಡಿಸುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿರುವ ಸುಪ್ರೀಂ ಕೋರ್ಟ್, ಇದರಿಂದ ಮುಕ್ತ ಹಾಗೂ ಪಾರದರ್ಶಕ ಮತದಾನ ಸಾಧ್ಯ ಎಂದು ಅಭಿಪ್ರಾಯ ಪಟ್ಟಿದೆ. ಮತಪತ್ರ ತಾಳೆ ಪರಿಶೋಧನಾ ವ್ಯವಸ್ಥೆ (ವಿವಿಪಿಎಟಿ)ಅಳವಡಿಸಲು ಹಣಕಾಸಿನ ನೆರವು ಒದಗಿಸುವಂತೆಯೂ ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

**ಉಪಯೋಗವೇನು?**

ವಿದ್ಯುನ್ಮಾನ ಮತ ಯಂತ್ರಗಳ ಲ್ಲಿ ವಿವಿಪಿಎಟಿ ಅಳವಡಿಕೆಯು ಮುಕ್ತ ಹಾಗೂ ಪಾರದರ್ಶಕ ಚುನಾವಣೆಯನ್ನು ಖಚಿತಪಡಿಸಲಿದೆ ಹಾಗೂ 'ವಿವಾದಗಳನ್ನು ಇತ್ಯರ್ಥ' ಪಡಿಸಲು ಸಹಾಯವಾಗಲಿದೆ ಎಂದು ಮುಖ್ಯ ನ್ಯಾಯಮೂರ್ತಿ ಪಿ ಸದಾಶಿವಂ ಹಾಗೂ ನ್ಯಾಯಮೂರ್ತಿ ರಂಜನ್ ಗೋಗಾಯ್ ಅವರಿದ್ದ ಪೀಠ ಅಭಿಪ್ರಾಯ ವ್ಯಕ್ತಪಡಿಸಿದೆ.

**ಬಳಕೆ ಯಾವಾಗ?**

ಮುಂದಿನ ವರ್ಷದ ಫೆಬ್ರುವರಿ ತಿಂಗಳಲ್ಲಿ ನಾಗಾಲ್ಯಾಂಡ್ ವಿಧಾನಸಭೆ ಚುನಾವಣೆ ವೇಳೆ 21 ಮತ ಕೇಂದ್ರಗಳಲ್ಲಿ ವಿವಿಪಿಎಟಿ ಬಳಕೆ ಯಶಸ್ವಿ ಹಾಗೂ ಸಮರ್ಪಕವಾಗಿತ್ತು ಎಂದು ಚುನಾವಣಾ ಆಯೋಗ ಈ ಮುಂಚೆ ನ್ಯಾಯಾಲಯಕ್ಕೆ ತಿಳಿಸಿತ್ತು.ಜೊತೆಗೆ ವಿವಿಪಿಎಟಿಯನ್ನು ಹಂತ-ಹಂತವಾಗಿ ಅಳವಡಿಸಲು ಸಾಧ್ಯವಿದೆ. ಮತ್ತು ಇದಕ್ಕಾಗಿ ಆಡಳಿತಾತ್ಮಕ ಹಾಗೂ ಆರ್ಥಿಕ ನೆರವಿನ ಅಗತ್ಯವಿದೆ ಎಂದೂ ಆಯೋಗ ಪೀಠಕ್ಕೆ ಹೇಳಿತ್ತು.ಸಾರ್ವತ್ರಿಕ ಚುನಾವಣೆಗೆ 13 ಲಕ್ಷ ವಿವಿಪಿಎಟಿ ಯಂತ್ರಗಳು ಬೇಕಾಗಬಹುದು ಎಂದು ಆಯೋಗ ತಿಳಿಸಿತ್ತು.

**ವಿವಿಪಿಎಟಿ ವ್ಯವಸ್ಥೆ:**

ಮತದಾರನು ಎಲೆಕ್ಟ್ರಾನಿಕ್ ಮತ ಯಂತ್ರದಲ್ಲಿ ತನ್ನ ಆಯ್ಕೆಯ ಅಭ್ಯರ್ಥಿಗೆ ಮತ ನೀಡುವ ಗುಂಡಿ ಒತ್ತಿದ ತತ್ ಕ್ಷಣವೇ ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಮತ್ತು ಚುನಾವಣಾ ಚಿಹ್ನೆಯನ್ನು ಒಳಗೊಂಡ ಮತಪತ್ರ ಮುದ್ರಣಗೊಳ್ಳುತ್ತದೆ. ಅಭ್ಯರ್ಥಿಯು ಅದನ್ನು ಪರಿಶೀಲಿಸಿ ತನ್ನ ಮತದಾನ ತನ್ನಿಚ್ಛೆಯಂತೆ ನಡೆದಿದೆಯೇ ಎಂದು ಖಾತರಿ ಪಡಿಸಿಕೊಳ್ಳಬಹುದು.

## ಅಂಗವಿಕಲರಿಗೆ ಉದ್ಯೋಗದಲ್ಲಿ ಶೇ.3 ರಷ್ಟು ಕಡ್ಡಾಯ ಮೀಸಲಾತಿ: ಸುಪ್ರೀಂಕೋರ್ಟ್

ಸರ್ಕಾರದ ಇಲಾಖೆಗಳಲ್ಲಿ, ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಸ್ವಾಮ್ಯದ ಕಂಪೆನಿಗಳ ಉದ್ಯೋಗಾವಕಾಶಗಳಲ್ಲಿ ದೈಹಿಕ ಅಸಮರ್ಥರಿಗೆ ಶೇ 3 ರಷ್ಟು ಮೀಸಲಾತಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಸಾಮಾಜಿಕ ಮತ್ತು ದೈಹಿಕ ಕಾರಣಗಳಿಗಾಗಿ ಅಂಗವಿಕಲರು ನಿರುದ್ಯೋಗಿಗಳಾಗಿರುವುದು 'ದಿಗಿಲು ಹುಟ್ಟಿಸುವ ವಾಸ್ತವ' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಒಂದು ವೇಳೆ ಸರ್ಕಾರಿ ಉದ್ಯೋಗದಲ್ಲಿ ದೈಹಿಕ ಅಸಮರ್ಥರಿಗೆ ಮೀಸಲಾತಿ ನೀಡದೇ ಹೋದರೆ ಅದನ್ನು 'ಅವಿಧೇಯತೆ' ಎಂದು ಪರಿಗಣಿಸಿ, ಸಂಬಂಧಿಸಿದ ಇಲಾಖೆಗಳ ಸಮನ್ವಯ ಅಧಿಕಾರಿ ವಿರುದ್ಧ ಸ್ವತಃ ಕಾನೂನು ಕ್ರಮ ಕೈಗೊಳ್ಳು ವುದಾಗಿಯೂ ಸುಪ್ರೀಂ ಕೋರ್ಟ್ ಎಚ್ಚರಿಸಿದೆ.

**ಗಡುವು ವಿಧಿಸಿದ ಸುಪ್ರೀಂ:**

ಮೂರು ತಿಂಗಳ ಒಳಗಾಗಿ ಎಲ್ಲಾ ಸರ್ಕಾರಿ ಇಲಾಖೆ, ಸಂಸ್ಥೆಗಳಲ್ಲಿ ಲಭ್ಯವಿರುವ ಉದ್ಯೋಗಗಳನ್ನು ಲೆಕ್ಕ ಹಾಕಿ ಅಂಗವಿಕಲರಿಗೆ ಹೊಂದುವಂತಹ ಹುದ್ದೆಗಳನ್ನು ಗುರುತಿಸಿ ಆದೇಶ ಜಾರಿಗೆ ತರುವಂತೆ ಮುಖ್ಯ ನ್ಯಾಯಮೂರ್ತಿ ಪಿ. ಸದಾಶಿವಂ, ನ್ಯಾಯಮೂರ್ತಿಗಳಾದ ರಂಜನಾ ಪ್ರಕಾಶ್ ದೇಸಾಯಿ ಮತ್ತು ರಂಜನ್ ಗೋಗೋಯ್ ಅವರನ್ನೊಳಗೊಂಡ ನ್ಯಾಯಪೀಠವು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

**ನಿರ್ಬಂಧ ಅನ್ವಯಿಸುವುದಿಲ್ಲ:**

ಶೇ 3ರಷ್ಟು ಮೀಸಲಾತಿಯಲ್ಲಿ ಅಂಧರು, ಶ್ರವಣ ದೋಷ ಉಳ್ಳವರು ಮತ್ತು ಮೂಕರು ಹಾಗೂ ಸೆರೆಬ್ರೆಲ್ ಪಾಲ್ಸಿಗೆ ತುತ್ತಾದವರಿಗೆ ತಲಾ ಶೇಕಡಾ ಒಂದರಷ್ಟು ಮೀಸಲಾತಿ ನೀಡಬೇಕು ಎಂದು ಸೂಚಿಸಿರುವ ಸುಪ್ರೀಂ ಕೋರ್ಟ್, ಸರ್ಕಾರಿ ಉದ್ಯೋಗದಲ್ಲಿ ನೀಡುವ ಮೀಸಲಾತಿಯು ಶೇ 50 ರಷ್ಟು ಮೀರಬಾರದು ಎಂಬ ನಿಯಮ ಈ ಮೀಸಲಾತಿಗೆ ಅನ್ವಯವಾಗುವುದಿಲ್ಲ ಎಂದೂ ಸ್ಪಷ್ಟಪಡಿಸಿದೆ.

## ಇವಿಎಮ್ ಗಳಲ್ಲಿ ಆಯಾ ರಾಜ್ಯಗಳ ಸ್ಥಳೀಯ ಭಾಷೆಯಲ್ಲಿ "ನೋಟಾ": ಚುನಾವಣಾ ಆಯೋಗ

ವಿದ್ಯುನ್ಮಾನ ಮತ ಯಂತ್ರಗಳಲ್ಲಿ 'ಮೇಲಿನವರಲ್ಲಿ ಯಾರಿಗೂ ಮತ ಹಾಕುವುದಿಲ್ಲ' (ನನ್ ಆಫ್ ದ ಎಬೋವ್- ನೋಟಾ) ಎಂಬ ಆಯ್ಕೆಯನ್ನು ಕನ್ನಡವೂ ಸೇರಿದಂತೆ ಆಯಾ ರಾಜ್ಯಗಳ ಸ್ಥಳೀಯ ಭಾಷೆಯಲ್ಲೇ ಮತದಾರರಿಗೆ ಒದಗಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾಧಿಕಾರಿಗಳಿಗೆ ಕೇಂದ್ರ ಚುನಾವಣಾ ಆಯೋಗ ನಿರ್ದೇಶನ ನೀಡಿದೆ.

**ಮುಂದಿನ ಚುನಾವಣೆಯಲ್ಲೇ ಜಾರಿ:**

- ಇದರಿಂದಾಗಿ ಮುಂಬರುವ ಪಂಚರಾಜ್ಯ ಚುನಾವಣೆಗಳಲ್ಲಷ್ಟೇ ಅಲ್ಲದೆ ಸಂಭಾವ್ಯ ಉಪಚುನಾವಣೆಗಳು ಸೇರಿದಂತೆ 2014ರ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಕಣದಲ್ಲಿರುವ ಎಲ್ಲ ಅಭ್ಯರ್ಥಿಗಳನ್ನು ತಿರಸ್ಕರಿಸುವ ಐತಿಹಾಸಿಕ ಹಕ್ಕು ಮತದಾರರಿಗೆ ಲಭಿಸಲಿದೆ.
- 'ಮೇಲಿನವರಲ್ಲಿ ಯಾರಿಗೂ ಮತ ಹಾಕುವುದಿಲ್ಲ' ಎಂಬ ಆಯ್ಕೆಯನ್ನು ಇಂಗ್ಲಿಷ್ ಭಾಷೆಯ ಬದಲು ಆಯಾ ಸ್ಥಳೀಯ ಭಾಷೆಗೆ ಸ್ಥಳಾಂತರಿಸಿ ನೀಡಬೇಕು.
- ಈಶಾನ್ಯ ರಾಜ್ಯಗಳಲ್ಲಿ ಇಂಗ್ಲಿಷ್ ಅಧಿಕೃತ ಭಾಷೆಯಾಗಿರುವುದರಿಂದ ಅಲ್ಲಿ ಬೇಕಾದರೆ ಇಂಗ್ಲಿಷ್‌ನಲ್ಲಿ ಆಯ್ಕೆ ನೀಡಬಹುದು ಎಂದು ಆಯೋಗ ಸೂಚಿಸಿದೆ.
- ಅಭ್ಯರ್ಥಿಗಳನ್ನು ತಿರಸ್ಕರಿಸುವ ಹಕ್ಕನ್ನು ಮತದಾರರಿಗೆ ನೀಡುವ ಸಂಬಂಧ ಸೆ.27 ರಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಜಾರಿ ಸಂಬಂದ ಚುನಾವಣಾಧಿಕಾರಿಗಳಿಗೆ ತರಬೇತಿ ನೀಡಬೇಕು ಎಂದು ಹೇಳಿದೆ.

## ಸಾಮಾಜಿಕ ಜಾಲತಾಣಗಳಿಗೂ ಚುನಾವಣಾ ನೀತಿ ಸಂಹಿತೆ: ಚುನಾವಣಾ ಆಯೋಗ

ಫೇಸ್‌ಬುಕ್, ಟ್ವೀಟರ್, ಯೂಟ್ಯೂಬ್‌ನಂಥ ಸಾಮಾಜಿಕ ಜಾಲತಾಣಗಳನ್ನು ಮನಸೋ ಇಚ್ಛೆ ಬಳಸಿ ಅವುಗಳ ಮೂಲಕ ಚುನಾವಣೆಯಲ್ಲಿ 'ಪುಕ್ಕಟೆ' ಪ್ರಚಾರ ಮಾಡುತ್ತಿರುವ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗ ಕಡಿವಾಣ ಹಾಕಿದೆ. ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಎಲ್ಲ ಅಭ್ಯರ್ಥಿಗಳು ತನ್ನ ಮುಂದೆ ಘೋಷಣೆ ಮಾಡಿಕೊಳ್ಳಬೇಕು. ಆ ತಾಣಗಳಿಗೆ ಹಾಕುವ ಜಾಹೀರಾತುಗಳ ಬಗ್ಗೆ ಮೊದಲೇ ತನ್ನ ಅನುಮತಿ ಪತ್ರ ಪಡೆದಿರಬೇಕು ಎಂದು ಚುನಾವಣಾ ಆಯೋಗ ನಿಯಮಾವಳಿ ಜಾರಿಗೊಳಿಸಿದೆ.

**ಚುನಾವಣಾ ವೆಚ್ಚವಾಗಿ ಪರಿಗಣನೆ:**

ಸಾಮಾಜಿಕ ಜಾಲತಾಣ ಅಥವಾ ಇಂಟರ್‌ನೆಟ್‌ಗಳಲ್ಲಿ ಹಾಕುವ ಜಾಹೀರಾತಿಗೆ ಸಂಬಂಧಿಸಿದಂತೆ ಆ ಕಂಪನಿಗೆ ನೀಡಲಾಗುವ ಹಣ, ಅದರಲ್ಲಿನ ಸಾಹಿತ್ಯ ರಚನೆಕಾರರಿಗೆ ನೀಡುವ ಸಂಭಾವನೆ, ತಾಣಗಳಿಗೆ ಜಾಹೀರಾತು ಹಾಕುವ ಸಿಬ್ಬಂದಿಗೆ ನೀಡುವ ವೇತನ- ಇತ್ಯಾದಿಗಳನ್ನು ಅಭ್ಯರ್ಥಿಗಳ ಚುನಾವಣಾ ಲೆಕ್ಕಕ್ಕೇ ಸೇರಿಸಲಾಗುವುದು. ಅಲ್ಲದೆ, ಇಂಟರ್‌ನೆಟ್/ಸಾಮಾಜಿಕ ಜಾಲತಾಣಗಳಲ್ಲಿನ ಪ್ರಚಾರ ಸಾಮಗ್ರಿಗಳಿಗೂ ಚುನಾವಣಾ ನೀತಿಸಂಹಿತೆಯು ಅನ್ವಯಿಸುತ್ತದೆ ಎಂದು ತಿಳಿಸಲಾಗಿದೆ.

**5 ಭಾಗಗಳಾಗಿ ವಿಭಜನೆ:**

- ಸಾಮಾಜಿಕ ಜಾಲತಾಣಗಳನ್ನು 5 ಭಾಗಗಳಾಗಿ ವಿಭಜಿಸಿರುವ ಚುನಾವಣಾ ಆಯೋಗ, ಅವುಗಳನ್ನು ಬ್ಲಾಗ್ ಮತ್ತು ಮೈಕ್ರೊ ಬ್ಲಾಗ್ (ಟ್ವೀಟರ್), ಕಂಟೆಂಟ್ ಕಮ್ಯುನಿಟಿ (ಯೂಟ್ಯೂಬ್), ಸೋಷಿಯಲ್ ನೆಟ್‌ವರ್ಕಿಂಗ್ ಸೈಟ್ಸ್ (ಫೇಸ್‌ಬುಕ್), ವರ್ಚುವಲ್ ಗೇಮ್ ವರ್ಲ್ಡ್ (ಆಯಪ್ಸ್) ಮತ್ತು ವಿಕಿಪಿಡಿಯಾ ಎಂದು ಹೆಸರಿಸಿದೆ.
- ಇತರ ಮಾಧ್ಯಮಗಳಿಗೆ ಯಾವ ರೀತಿ ಚುನಾವಣಾ ನೀತಿ ಸಂಹಿತೆಯ ಕಾನೂನು ಅಂಶಗಳು ಅನ್ವಯವಾಗುತ್ತದೋ ಅದೇ ರೀತಿ ಇಂಟರ್‌ನೆಟ್/ಸಾಮಾಜಿಕ ಜಾಲತಾಣ ಮಾಧ್ಯಮಗಳಿಗೂ ಅನ್ವಯವಾಗುತ್ತದೆ.
- ನಾಮಪತ್ರ ಸಲ್ಲಿಸುವ ಸಂದರ್ಭದಲ್ಲೇ ಅವರು ಬಳಸುವ ಇಂಥ ಜಾಲತಾಣಗಳ ಬಗ್ಗೆ ಪ್ರಮಾಣಪತ್ರದಲ್ಲಿ ವಿವರ ನೀಡುವುದು ಕಡ್ಡಾಯವಾಗಲಿದೆ.
- ಜಿಲ್ಲಾ ಮಟ್ಟದ ಚುನಾವಣಾ ಮಾಧ್ಯಮ ಪ್ರಮಾಣಪತ್ರ ಹಾಗೂ ಮೇಲುಸ್ತುವಾರಿ ಸಮಿತಿ ಯಾವ ರೀತಿ ಇತರ ಮಾಧ್ಯಮಗಳಲ್ಲಿನ ಜಾಹೀರಾತುಗಳಿಗೆ ಹೇಗೆ ಪೂರ್ವಾನುಮತಿ ನೀಡುತ್ತದೋ ಅದೇ ರೀತಿ ಸಾಮಾಜಿಕ ಜಾಲತಾಣಗಳಲ್ಲಿನ ಜಾಹೀರಾತುಗಳಿಗೂ ಅನುಮೋದನೆ ನೀಡುವ ಅಧಿಕಾರ ಹೊಂದಲಿದೆ.
- ಪ್ರಚಾರದಲ್ಲಿ ಯಾವ ರೀತಿ ವೈಯಕ್ತಿಕ, ಕೋಮುದ್ವೇಷ ಕೆರಳಿಸುವ ಭಾಷಣ, ಹೇಳಿಕೆ, ಬರಹಗಳನ್ನು ನಿಷೇಧಿಸಲಾಗಿದೆಯೋ ಅದೇ ರೀತಿ ಸಾಮಾಜಿಕ ಜಾಲತಾಣಗಳಲ್ಲೂ ಈ ರೀತಿ ಯಾವುದೇ ಹೇಳಿಕೆ, ಭಾಷಣ ಪ್ರಕಟಿಸುವಂತಿಲ್ಲ ಎಂದು ನಿಯಮಾವಳಿ ರೂಪಿಸಲಾಗಿದೆ.

**ನಿಯಮಾವಳಿಯಲ್ಲೇನಿದೆ?**

ಸಾಮಾಜಿಕ ಜಾಲತಾಣ, ಇಂಟರ್‌ನೆಟ್ ಕೂಡ ನೀತಿಸಂಹಿತೆ ವ್ಯಾಪ್ತಿಗೆ, ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ ವೇಳೆಯೇ ತಮ್ಮ ಸಾಮಾಜಿಕ ತಾಣದ ವಿವರ ನಮೂದಿಸಿರಬೇಕು, ಫೇಸ್‌ಬುಕ್, ಟ್ವೀಟರ್, ಯೂಟ್ಯೂಬ್ ಮೂಲಕ ಹಾಕುವ ಜಾಹೀರಾತಿಗೆ

ಪೂರ್ವಾನುಮತಿ ಕಡ್ಡಾಯ, ಇಂಟರ್‌ನೆಟ್/ಸಾಮಾಜಿಕ ಜಾಲತಾಣದ ಪ್ರಚಾರದ ಖರ್ಚು ಅಭ್ಯರ್ಥಿ/ಪಕ್ಷದ ಲೆಕ್ಕಕ್ಕೆ, ಈ ಜಾಲತಾಣಗಳ ಮೂಲಕ ಕೋಮುದ್ವೇಷ, ವೈಯಕ್ತಿಕ ಹಗೆ ಸಾಧಿಸುವ ಪ್ರಚಾರ ಮಾಡುವಂತಿಲ್ಲ.

**ಯಾವ್ಯಾವ ಜಾಲತಾಣಗಳು ನೀತಿಸಂಹಿತೆ ವ್ಯಾಪ್ತಿಗೆ?**

ಬ್ಲಾಗ್ ಮತ್ತು ಮೈಕ್ರೊ ಬ್ಲಾಗ್ (ಟ್ವೀಟರ್), ಕಂಟೆಂಟ್ ಕಮ್ಯುನಿಟಿ (ಯೂಟ್ಯೂಬ್), ಸೋಷಿಯಲ್ ನೆಟ್‌ವರ್ಕಿಂಗ್ ಸೈಟ್ಸ್ (ಫೇಸ್ ಬುಕ್), ವರ್ಚುವಲ್ ಗೇಮ್ ವರ್ಲ್ಡ್ (ಆಯಪ್ಸ್) ಮತ್ತು ಸಹಭಾಗಿತ್ವ ಯೋಜನೆಗಳು (ವಿಕಿಪಿಡಿಯಾ)

## ಮಹಿಳೆಯರಿಗಾಗಿಯೇ ಪ್ರತ್ಯೇಕ ಸಾರಿಗೆ ವ್ಯವಸ್ಥೆ "She Taxi" ಯೋಜನೆಯನ್ನು ಆರಂಭಿಸಲಿರುವ ಕೇರಳ

ಮಹಿಳೆಯರ ಮೇಲೆ ದಿನೇ ದಿನೇ ದೌರ್ಜನ್ಯ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಮಹಿಳೆಯರ ಸುರಕ್ಷಿತ ಪ್ರಯಾಣಕ್ಕಾಗಿ "She Taxi" ಎಂಬ ವಿನೂತನ ಯೋಜನೆಯೊಂದನ್ನು ಕೇರಳ ಸರ್ಕಾರ ಜಾರಿಗೊಳಿಸಲಾಗಿದೆ.

**"She Taxi"**

- ಕೇರಳ ರಾಜ್ಯ ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಿಳಾ ಅಭಿವೃದ್ಧಿ ಪ್ರಾಧಿಕಾರದ ಸ್ವಾಯುತ್ತತೆ ಸಂಸ್ಥೆಯಾಗಿರುವ "ಜೆಂಡರ್ ಪಾರ್ಕ್" ಎನ್ನುವ ಸಂಸ್ಥೆ ಜಾರಿಗೊಳಿಸುತ್ತಿದೆ.
- ನವೆಂಬರ್ ಮಧ್ಯಂತರದ ವೇಳೆಯಲ್ಲಿ ತಿರುವನಂತಪುರಂ ನಲ್ಲಿ 25 ಟ್ಯಾಕ್ಸಿಗಳೊಂದಿಗೆ ಈ ಯೋಜನೆಗೆ ಚಾಲನೆ ನೀಡಲಾಗುವುದು.
- She Taxi ಯಲ್ಲಿ ಮಹಿಳೆಯರೇ ಡ್ರೈವರ್ ಗಳ ಆಗಿರಲಿದ್ದಾರೆ. ಪಿಂಕ್ ಬಣ್ಣದಲ್ಲಿರುವ ಟ್ಯಾಕ್ಸಿಗಳು 24 X 7 ವೇಳೆ ಕಾರ್ಯನಿರ್ವಹಿಸಲಿವೆ. ಮಹಿಳಾ ಡ್ರೈವರ್ ಗಳಿಗೆ ಈಗಾಗಲೇ ತರಬೇತಿಯನ್ನು ನೀಡಲಾಗಿದೆ.
- ಮುಂದಿನ ದಿನಗಳಲ್ಲಿ ಇನ್ನು ಮೂರು ನಗರಗಳಲ್ಲಿ ಯೋಜನೆಯನ್ನು ಜಾರಿಗೆ ತರಲು ಕೇರಳ ಸರ್ಕಾರ ನಿರ್ಧರಿಸಿದೆ.
- ಪ್ರಮುಖ ಕಾರು ತಯಾರಿಕ ಸಂಸ್ಥೆ "ಮಾರುತಿ ಸುಝುಕಿ" ಈ ಯೋಜನೆಗೆ ಕೈಜೋಡಿಸಿದ್ದು, ಯೋಜನೆಗೆ ಬೇಕಾಗುವ ಕಾರುಗಳನ್ನು ಸಬ್ಸಿಡಿ ದರದಲ್ಲಿ ನೀಡಲಿದೆ. ಅಲ್ಲದೇ ಇತರೆ ರಾಜ್ಯಗಳಲ್ಲಿ ಸಹ ಜಾರಿಗೊಳಿಸಲು ಚಿಂತನೆ ನಡೆಸಿದೆ.

## ತೆಲಂಗಾಣ ಮತ್ತು ಆಂಧ್ರಪ್ರದೇಶ ವಿಭಜನೆ ಕುರಿತು ಸಮಿತಿ ರಚಿಸಿದ ಕೇಂದ್ರ ಸರ್ಕಾರ

ಆಂಧ್ರಪ್ರದೇಶ ವಿಭಜನೆಯಾದ ನಂತರ ಆಡಳಿತ ರೂಪುರೇಷೆ ಹಾಗೂ ಆಸ್ತಿಪಾಸ್ತಿ ಹಂಚಿಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಮಿತಿಯೊಂದನ್ನು ರಚಿಸಿದೆ. ಕೇಂದ್ರ ಮೀಸಲು ಪೊಲೀಸ್ ಪಡೆ (CRPF) ನ ಮಾಜಿ ನಿರ್ದೇಶಕರಾದ ಕೆ.ವಿಜಯ್ ಕುಮಾರ್ ಅವರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ.

- ಸಮಿತಿಯು ಆಂಧ್ರಪ್ರದೇಶ ಸರ್ಕಾರದ ಉನ್ನತ ಮಟ್ಟದ ವಿವಿಧ ಅಧಿಕಾರಿಗಳು, ತಜ್ಞರು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಭೇಟಿ ನೀಡಿ ಅಭಿಪ್ರಾಯವನ್ನು ಸಂಗ್ರಹಿಸಿ ವರದಿ ಮಾಡಲಿದೆ,

- ಆಂಧ್ರಪ್ರದೇಶದ ವಿಭಜನೆಯ ನಂತರ ಎರಡು ರಾಜ್ಯಗಳಿಗೆ ಸಂಬಂಧಿಸಿದಂತೆ ಆಡಳಿತ ರೂಪುರೇಷೆ ಹಾಗೂ ಉಭಯ ರಾಜ್ಯಗಳ ನಡುವೆ ಆಸ್ತಿ ಹಂಚಿಕೆ ಬಗ್ಗೆ ಅಧ್ಯಯನ ಮಾಡಲಿದೆ.
- ಆಂಧ್ರಪ್ರದೇಶವನ್ನು ತೆಲಂಗಾಣ ಮತ್ತು ಆಂಧ್ರಪ್ರದೇಶವೆಂದು ವಿಭಜಿಸಿ ಹೈದ್ರಾಬಾದ್ ಅನ್ನು 10 ವರ್ಷಗಳ ಕಾಲ ಎರಡು ರಾಜ್ಯಗಳ ರಾಜಧಾನಿಯನ್ನಾಗಿ ಮಾಡಲು ಈಗಾಗಲೇ ಕೇಂದ್ರ ಸರ್ಕಾರ ನಿರ್ಧರಿಸಿದೆ.

# ಅಂತರರಾಷ್ಟ್ರೀಯ

**ಧನವಿನಿಯೋಗ ಮಸೂದೆ ಅಂಗೀಕಾರಗೊಳ್ಳದೆ ಅಮೆರಿಕದಲ್ಲಿ ಸರ್ಕಾರಿ ಸೇವೆಗಳು ಬಂದ್**

ಸರ್ಕಾರದ ಖರ್ಚು- ವೆಚ್ಚಗಳಿಗೆ ಅನುಮತಿ ನೀಡುವ ಧನವಿನಿಯೋಗ ಮಸೂದೆ (ಬಜೆಟ್ ವಿಧೇಯಕ) ಅಂಗೀಕಾರವಾಗದ ಹಿನ್ನೆಲೆಯಲ್ಲಿ ಅಮೆರಿಕ ಸರ್ಕಾರ ತುರ್ತು ಸೇವೆ ಹೊರತುಪಡಿಸಿ ಎಲ್ಲಾ ಇಲಾಖೆ, ಸೇವೆಗಳನ್ನು 18 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ದಿಢೀರ್ ಬಂದ್ ಮಾಡಿದೆ. ಇದರಿಂದಾಗಿ ಅಮೆರಿಕದಲ್ಲಿ ಅಲ್ಲೋಲ- ಕಲ್ಲೋಲವಾಗಿದ್ದು, ಅದರ ಪರಿಣಾಮ ಅಂತಾರಾಷ್ಟ್ರೀಯ ವ್ಯವಹಾರಗಳ ಮೇಲೂ ಆಗಿದೆ. ಪೊಲೀಸ್, ಮಿಲಿಟರಿ, ಅಗ್ನಿಶಾಮಕದಂತಹ ತುರ್ತು ಸೇವೆಗಳನ್ನು ಹೊರತುಪಡಿಸಿ ಮೂರನೇ ಒಂದು ಭಾಗದಷ್ಟು ಎಲ್ಲಾ ಇಲಾಖೆ- ಸೇವೆಗಳನ್ನು ಅಮೆರಿಕ ಬಂದ್ ಮಾಡಿರುವುದರಿಂದಾಗಿ ಅಮೆರಿಕದ ಒಟ್ಟು 21 ಲಕ್ಷ ಸರ್ಕಾರಿ ನೌಕರರ ಪೈಕಿ 8 ಲಕ್ಷ ಮಂದಿ ಅತಂತ್ರರಾಗಿದ್ದಾರೆ.

**'ದೊಡ್ಡಣ್ಣ'ನಿಗೆ ಏನಾಗಿದೆ?**

ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಅವರು ಐತಿಹಾಸಿಕ ಆರೋಗ್ಯ ಸುಧಾರಣೆ ಯೋಜನೆಯೊಂದರ ಜಾರಿಗೆ ಮುಂದಾಗಿದ್ದಾರೆ. ಆದರೆ ಈ ಯೋಜನೆಗೆ ಪ್ರತಿಪಕ್ಷ ರಿಪಬ್ಲಿಕನ್ ಸದಸ್ಯರು ಹೆಚ್ಚಿರುವ ಅಮೆರಿಕದ ಕೆಳಮನೆ 'ಕಾಂಗ್ರೆಸ್' ಮೊದಲಿನಿಂದಲೂ ವಿರೋಧ ಮಾಡಿಕೊಂಡು ಬಂದಿದೆ. ಈ ನಡುವೆ, ಅಮೆರಿಕ ಸರ್ಕಾರ ಒಪ್ಪಿಗೆ ಪಡೆದುಕೊಂಡಿದ್ದ ಬಜೆಟ್ ಮಸೂದೆಯ ಅವಧಿ ಸೆಪ್ಟೆಂಬರ್ 30 ಕ್ಕೆ ಮುಗಿದಿದೆ. ಹೊಸದಾಗಿ ಧನವಿನಿಯೋಗ ಮಸೂದೆ ಮಂಡಿಸಿ, ಸರ್ಕಾರದ ಖರ್ಚು-ವೆಚ್ಚಗಳಿಗೆ ಒಪ್ಪಿಗೆ ಪಡೆದುಕೊಳ್ಳಲು ಅಮೆರಿಕ ಸರ್ಕಾರ ಸಜ್ಜಾಗಿತ್ತು. ಆದರೆ 'ಒಬಾಮಾಕೇರ್' ಯೋಜನೆ ಎಂದೇ ಕರೆಯಲ್ಪಡುತ್ತಿರುವ ಆರೋಗ್ಯ ಸುಧಾರಣೆ ಕಾರ್ಯಕ್ರಮವನ್ನು ಕೈಬಿಡಬೇಕು ಎಂದು ರಿಪಬ್ಲಿಕನ್ ಸದಸ್ಯರು ಪಟ್ಟು ಹಿಡಿದರು. ಇದಕ್ಕೆ ಒಬಾಮ ಅವರ ಪಕ್ಷ ಡೆಮೊಕ್ರಟಿಕ್ ಸದಸ್ಯರು ಮಣಿಯಲಿಲ್ಲ. ಹೀಗಾಗಿ ಮಸೂದೆ ಅಂಗೀಕಾರವಾಗಿಲ್ಲ. ಪರಿಣಾಮವಾಗಿ ಅಮೆರಿಕ ಸರ್ಕಾರಕ್ಕೆ ಅಕ್ಟೋಬರ್ 1 ರಿಂದ ಯಾವುದೇ ಖರ್ಚು- ವೆಚ್ಚ ಮಾಡಲು ಬರುವುದಿಲ್ಲ. ಆದ ಕಾರಣ ಅಮೆರಿಕ ಸರ್ಕಾರ ಬಹುತೇಕ ಇಲಾಖೆಗಳ ಸೇವೆಗಳನ್ನು ದಿಢೀರ್ ಬಂದ್ ಮಾಡಿದೆ.

**ಏನಿದು ಬಿಕ್ಕಟ್ಟು?**

ಅಮೆರಿಕದ ಬಜೆಟ್ ವರ್ಷ ಸೆಪ್ಟೆಂಬರ್ 30 ಕ್ಕೆ ಮುಗಿಯುತ್ತದೆ. ಹೀಗಾಗಿ ಹೊಸದಾಗಿ ಖರ್ಚು ಮಾಡಲು ಅಮೆರಿಕ ಸರ್ಕಾರ ಸಂಸತ್ತಿನ ಒಪ್ಪಿಗೆ ಪಡೆಯಬೇಕಿತ್ತು. ಈ ಸಂಬಂಧ ಮಂಡಿಸಲಾದ ಮಸೂದೆಗೆ ಮೇಲ್ಮನೆಯಾದ ಹೌಸ್ ಆಫ್ ರೆಪ್ರಸೆಂಟೇಟಿವ್ಸ್ ಒಪ್ಪಿಗೆ ಸಿಕ್ಕಿತ್ತು. ಆದರೆ ಪ್ರತಿಪಕ್ಷ ರಿಪಬ್ಲಿಕನ್ ಸದಸ್ಯರು ಹೆಚ್ಚಿರುವ ಕೆಳಮನೆ (ಕಾಂಗ್ರೆಸ್) ಒಪ್ಪಿಗೆ ದೊರೆಯಲಿಲ್ಲ. ಹೀಗಾಗಿ ಅಮೆರಿಕ ಸರ್ಕಾರ ಖರ್ಚು ಮಾಡಲು ಹಣವಿಲ್ಲದೆ ಬಹುತೇಕ ಇಲಾಖೆ- ಸೇವೆಗಳನ್ನು ಬಂದ್ ಮಾಡಿದೆ.

**ಪರಿಣಾಮಗಳೇನು?**

- ಮೂರನೇ ಒಂದು ಭಾಗದಷ್ಟು ಅಮೆರಿಕ ಸರ್ಕಾರ ಸ್ಥಗಿತಗೊಳ್ಳಲಿದೆ.
- 31 ಲಕ್ಷ ಸರ್ಕಾರಿ ನೌಕರರ ಪೈಕಿ 8 ಲಕ್ಷ ಮಂದಿಯನ್ನು ವೇತನವಿಲ್ಲದೆ ಇರಿಸಲಾಗುತ್ತದೆ ಅಥವಾ ವೇತನ ವಿಳಂಬವಾಗಲಿದೆ.

- ಹೊಸ ರೋಗಿಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದಾಖಲಿಸಿಕೊಳ್ಳುವುದಿಲ್ಲ. ಈಗಾಗಲೇ ಚಿಕಿತ್ಸೆ ಪಡೆಯುತ್ತಿರುವವರಿಗಷ್ಟೆ ಸೇವೆ ಲಭಿಸಲಿದೆ.
- ದೇಶಕ್ಕೆ ಭದ್ರತೆ ಹಾಗೂ ಸುರಕ್ಷತೆ ಒದಗಿಸುತ್ತಿರುವ ಸೇನೆ ಹಾಗೂ ಮತ್ತಿತರ ಸಂಸ್ಥೆಗಳು ಎಂದಿನಂತೆಯೇ ಕಾರ್ಯ ನಿರ್ವಹಿಸಲಿವೆ.
- 14 ಲಕ್ಷದಷ್ಟಿರುವ ಸೇನಾ ಸಿಬ್ಬಂದಿಗೆ ವೇತನ ಸಿಗುತ್ತದೆಯಾದರೂ ಅದು ತಲುಪುವಷ್ಟರಲ್ಲಿ ವಿಳಂಬವಾಗಲಿದೆ.
- ಲಿಬರ್ಟಿ ಪ್ರತಿಮೆಯಂಥ ಪ್ರೇಕ್ಷಣೀಯ ಸ್ಥಳ ರಾಷ್ಟ್ರೀಯ ಉದ್ಯಾನಗಳನ್ನು ಮುಚ್ಚಲಾಗುತ್ತದೆ.
- ನಾಸಾ, ಪರಿಸರ ಸಂರಕ್ಷಣೆಯಂತಯ ಸಂಸ್ಥೆಗಳು ತಮ್ಮ ಬಹುಪಾಲು ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸಲಿವೆ.

**ಭಾರತದ ಮೇಲೆ ಏನು ಪರಿಣಾಮ?**

ಅಮೆರಿಕ ಸರ್ಕಾರ ಬಹುತೇಕ ಸೇವೆಗಳನ್ನು ಸ್ಥಗಿತಗೊಳಿಸಿರುವುದರ ಪರಿಣಾಮವಾಗಿ ಅಮೆರಿಕ ವೀಸಾ ಪಡೆಯುವುದು ಕಷ್ಟಸಾಧ್ಯವಾಗಲಿದೆ. ಇದರಿಂದಾಗಿ ಭಾರತೀಯ ಐಟಿ ಕಂಪನಿಗಳು ಹಾಗೂ ಅಮೆರಿಕಕ್ಕೆ ಭೇಟಿ ನೀಡುವವರಿಗೆ ತೊಂದರೆಯಾಗಲಿದೆ. ಇದಲ್ಲದೆ, ಹೂಡಿಕೆ ಹಾಗೂ ರಫ್ತಿನಲ್ಲಿ ಅಸ್ತವ್ಯಸ್ತವಾಗುವುದರಿಂದ ರೂಪಾಯಿಗೂ ಹೊಡೆತ ಬೀಳುವ ಸಾಧ್ಯತೆ ಇದೆ. ಅಮೆರಿಕದಲ್ಲಿ ಸ್ಥಿತಿ ಸುಧಾರಿಸುವವರೆಗೂ ಭಾರತದ ಷೇರುಪೇಟೆ, ರೂಪಾಯಿ ಮೌಲ್ಯ ಹೊಯ್ದಾಡುವ ಸಂಭವ ಇದೆ.

**ಪರಿಹಾರವೇನು?**

ಅಮೆರಿಕ ಕೆಳಮನೆ ಕಾಂಗ್ರೆಸ್ ಬಜೆಟ್ ಮಸೂದೆಯನ್ನು ತಿರಸ್ಕರಿಸುವ ಹಿನ್ನೆಲೆಯಲ್ಲಿ ಅಮೆರಿಕ ಸರ್ಕಾರ ಹೊಸದಾಗಿ ಮಸೂದೆ ಮಂಡಿಸಿ ಒಪ್ಪಿಗೆ ಪಡೆದುಕೊಳ್ಳಬೇಕಾಗುತ್ತದೆ. ಒಬಾಮ ಅವರ ಕನಸಿನ ಆರೋಗ್ಯ ಸುಧಾರಣೆ ಯೋಜನೆ ಕೈಬಿಟ್ಟರೆ ಆ ಮಸೂದೆ ಅಂಗೀಕಾರವಾಗುವ ಸಾಧ್ಯತೆ ಇದೆ.

**ಇತಿಹಾಸ:**

- 18 ವರ್ಷ ಹಿಂದೆ 21 ದಿನ ಬಂದ್ ಬಿಲ್ ಕ್ಲಿಂಟನ್ ಅವರು ಅಮೆರಿಕ ಅಧ್ಯಕ್ಷರಾಗಿದ್ದಾಗ ಅಂದರೆ 1995-96ರ ಅವಧಿಯಲ್ಲೂ ಅಮೆರಿಕ ಸರ್ಕಾರ ಬಂದ್ ಆಗಿತ್ತು. ಆಗ 21 ದಿನಗಳ ಕಾಲ ಸೇವೆಗಳು ಸ್ಥಗಿತಗೊಂಡಿದ್ದವು.
- 2011ರಲ್ಲಿ ಸ್ವಲ್ಪದರಲ್ಲೇ ಬಚಾವ್ ಎರಡು ವರ್ಷಗಳ ಹಿಂದೆ ಅಂದರೆ 2011ರಲ್ಲೂ ಅಮೆರಿಕ ಇಂಥದ್ದೇ ಸಮಸ್ಯೆ ಎದುರಿಸಿತ್ತು. ಆದರೆ ಲೇಖಾನುದಾನ ಪಾಸಾಗುವ ಕೊನೆಯ ದಿನ ಡೆಮಾಕ್ರೆಟ್ ಮತ್ತು ರಿಪಬ್ಲಿಕನ್ನರ ಮಧ್ಯದ ಬಿಕ್ಕಟ್ಟು ಬಗೆಹರಿದು ಒಬಾಮಾ ನಿಟ್ಟುಸಿರು ಬಿಟ್ಟಿದ್ದರು.

**ಭಾರತ ಮತ್ತು ಚೀನಾದ ತಲಾ ಮೂರು ನಗರಗಳು "ಸೋದರಿ ನಗರ"ಗಳೆಂದು ಘೋಷಣೆ**

ಭಾರತ - ಚೀನಾ ಉತ್ತಮ ಸಂಬಂಧದ ಮಾತು ಬಂದಾಗಲೆಲ್ಲಾ ಹಿಂದಿ- ಚೀನಿ ಭಾಯಿ ಭಾಯಿ (ಭಾರತ-ಚೀನಾ ಸೋದರರು) ಎಂಬ ಘೋಷವಾಕ್ಯ ಕೇಳಿ ಬರುತ್ತಿತ್ತು. ಇದೀಗ ಉಭಯ ರಾಷ್ಟ್ರಗಳ ನಡುವ ಸಂಬಂಧ ಸುಧಾರಣೆ ಮತ್ತೊಂದು ಮಜಲಿಗೆ ತಲುಪಿದೆ. ಭಾರತ ಮತ್ತು ಚೀನಾದ ತಲಾ ಮೂರು ನಗರಗಳನ್ನು ಸೋದರಿ ನಗರಗಳು ಎಂದು ಘೋಷಿಸುವ ಒಪ್ಪಂದಕ್ಕೆ

ಉಭಯ ದೇಶಗಳು ಸಹಿ ಹಾಕಿವೆ. ಇದರಲ್ಲಿ 'ನಮ್ಮ' ಬೆಂಗಳೂರು ಮತ್ತು ಚೀನಾದ ಚೆಂಗು ನಗರಗಳೂ ಸೇರಿವೆ. ಹಾಗಾಗಿ, ಇನ್ನು ಮುಂದೆ 'ಬೆಂಗಳೂರು-ಚೆಂಗು ಬೆಹೆನ್ ಬೆಹೆನ್'.

**ನಮ್ಮ ಬೆಂಗಳೂರು:**

ಭಾರತದ ಉಳಿದೆಲ್ಲಾ ನಗರಗಳನ್ನು ಬಿಟ್ಟು ಬೆಂಗಳೂರನ್ನು ಅಮೆರಿಕದ 'ಸಿಲಿಕಾನ್ ಸಿಟಿ'ಯ ತವರು ಸ್ಯಾನ್‌ಫ್ರಾನ್ಸಿಸ್ಕೋ ತನ್ನ 'ಸೋದರಿ ನಗರಿ'ಯನ್ನಾಗಿ (ಸಿಸ್ಟರ್ ಸಿಟಿ) ಘೋಷಿಸಿಕೊಂಡ ನಾಲ್ಕು ವರ್ಷಗಳ ಬಳಿಕ ಬೆಂಗಳೂರಿಗೆ ಮತ್ತೊಬ್ಬಳು ಸೋದರಿ ಸಿಕ್ಕಿದ್ದಾಳೆ. ಚೀನಾದ ಪ್ರಮುಖ ನಗರಿಗಳಲ್ಲಿ ಒಂದಾದ ಚೆಂಗು ಕರ್ನಾಟಕದ ರಾಜಧಾನಿಯ ಸೋದರಿಯಾಗಲಿದ್ದಾಳೆ. ಚೀನಾ ಪ್ರವಾಸದಲ್ಲಿರುವ ಪ್ರಧಾನಿ ಮನಮೋಹನ ಸಿಂಗ್ ಹಾಗೂ ಚೀನಾ ಪ್ರಧಾನಿ ಲೀ ಕೆಖೀಯಾಂಗ್ ಸಮ್ಮುಖದಲ್ಲಿ ಬೆಂಗಳೂರು- ಚೆಂಗು, ದೆಹಲಿ- ಬೀಜಿಂಗ್ ಹಾಗೂ ಕೋಲ್ಕತಾ- ಕುನ್ಮಿಗ್ ನಡುವೆ 'ಸಿಸ್ಟರ್ ಸಿಟಿ' ಸಂಬಂಧ ಸ್ಥಾಪಿಸುವ ಸಂಬಂಧ ಒಪ್ಪಂದವೇರ್ಪಟ್ಟಿದೆ.

**'ಸೋದರಿ ನಗರ'ಗಳ ಬಗ್ಗೆ:**

ಭಾರತ ಹಾಗೂ ಚೀನಾದ ವಿದೇಶಾಂಗ ಸಚಿವಾಲಯಗಳು ಉಭಯ ದೇಶದ ಪ್ರಮುಖ ನಗರಗಳ ನಡುವೆ ಸಹಕಾರ ವೃದ್ಧಿಸುವ ಸಲುವಾಗಿ ಈ ಒಡಂಬಂಡಿಕೆ ಮಾಡಿಕೊಂಡಿವೆ. ಚೆಂಗು ಈಕೆ ನಮ್ಮ ಸೋದರಿ ನೈಋತ್ಯ ಚೀನಾದಲ್ಲಿರುವ ಸಿಚುವಾನ್ ಪ್ರಾಂತ್ಯದ ರಾಜಧಾನಿಯೇ ಚೆಂಗು. 1.40 ಕೋಟಿ ಜನಸಂಖ್ಯೆ ಇರುವ ಈ ನಗರ, ಪಶ್ಚಿಮ ಚೀನಾದ ಆರ್ಥಿಕತೆ, ಸಾರಿಗೆ ಹಾಗೂ ಸಂಪರ್ಕದಲ್ಲಿ ಅತ್ಯಂತ ಪ್ರಮುಖ ಕೇಂದ್ರ. ಜನ ವಾಸಿಸಲು ಚೀನಾದ ಅತ್ಯಂತ 4ನೇ ಪ್ರಶಸ್ತ ಸ್ಥಳ ಎಂದು 'ಚೀನಾ ಡೇಲಿ' ಪತ್ರಿಕೆ 2006ರಲ್ಲಿ ಹೊಗಳಿತ್ತು. ಹೂಡಿಕೆಗೆ ಯೋಗ್ಯವಾದ ಚೀನಾದ 10 ನಗರಗಳಲ್ಲಿ 2007ರಲ್ಲಿ ಚೆಂಗು ಕೂಡ ಸ್ಥಾನ ಪಡೆದಿತ್ತು.

**ಏನಿದು 'ಸಿಸ್ಟರ್ ಸಿಟಿ'?**

- ಭೌಗೋಳಿಕವಾಗಿ, ರಾಜಕೀಯವಾಗಿ ವಿಭಿನ್ನವಾಗಿರುವ 2 ದೇಶಗಳ ನಗರಿಗಳ ನಡುವೆ ಸಾಂಸ್ಕೃತಿಕ ಹಾಗೂ ವಾಣಿಜ್ಯ ಸಂಬಂಧವನ್ನು ಉತ್ತೇಜಿಸುವ ಸಲುವಾಗಿ ಏರ್ಪಡುವ ಒಪ್ಪಂದವೇ 'ಸಿಸ್ಟರ್ ಸಿಟಿ'.
- ಇದರಡಿ ಉಭಯ ನಗರಗಳು ಆಲೋಚನೆ, ಜನರು ಹಾಗೂ ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ನಗರಪಾಲಿಕೆ, ವೃತ್ತಿ ಹಾಗೂ ತಾಂತ್ರಿಕ ಯೋಜನೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತವೆ.
- ಸಿಸ್ಟರ್ ಸಿಟಿ ಎಂಬ ಪರಿಕಲ್ಪನೆ ಶುರುವಾಗಿದ್ದು ಜಪಾನ್‌ನ ಒಸಾಕಾದಲ್ಲಿ. ಎರಡನೇ ಮಹಾ ಯುದ್ಧದ ಬಳಿಕ. ಇಲ್ಲಿವರೆಗೂ ವಿವಿಧ ನಗರಗಳ ನಡುವೆ 180ಕ್ಕೂ ಹೆಚ್ಚು ಒಪ್ಪಂದಗಳು ಏರ್ಪಟ್ಟಿವೆ.
- 2009ರ ಅಕ್ಟೋಬರ್‌ನಲ್ಲಿ ಸ್ಯಾನ್ ಫ್ರಾನ್ಸಿಸ್ಕೋ ಕೂಡ ಬೆಂಗಳೂರು ಜತೆ ಇಂತಹುದೇ ಒಪ್ಪಂದ ಮಾಡಿಕೊಂಡಿತ್ತು.

**ಯಾಕೆ ಈ ಒಪ್ಪಂದ?**

ಸಾಮಾನ್ಯವಾಗಿ ಭೌಗೋಳಿಕವಾಗಿ, ವಿಸ್ತೀರ್ಣದಲ್ಲಿ ಸಮಾನತೆ ಹೊಂದಿರುವ ನಗರಗಳ ನಡುವೆ ಇಂತಹ ಸಂಬಂಧ ಏರ್ಪಡಿಸಲಾಗುತ್ತದೆ. ಈ ಮೂಲಕ ಬೇರೆ ಬೇರೆ ಕ್ಷೇತ್ರಗಳಲ್ಲಿ ಪರಸ್ಪರು ಸಾಧಿಸಿರುವ ನೈಪುಣ್ಯತೆಯನ್ನು ತಾವೂ ಬಳಸಿಕೊಳ್ಳಲು ಅನುವು ಮಾಡಿ ಕೊಡಲಾಗುತ್ತದೆ. ಇದು ಶೈಕ್ಷಣಿಕ, ಕ್ರೀಡೆ, ಮೂಲಭೂತ ಸೌಕರ್ಯ, ಆಡಳಿತದಲ್ಲಿ ವಿಶೇಷತೆಗಳನ್ನು ಸಾಧಿಸಲು ನೆರವು ನೀಡುತ್ತದೆ. ಇಂತಹ ಒಪ್ಪಂದದ ಮೂಲಕ ಬೆಂಗಳೂರು, ಚೆಂಗು ನಗರದ ಸಾಧನೆಯನ್ನು ತಾನೂ ಬಳಸಿಕೊಳ್ಳಲು ಮತ್ತು ಬೆಂಗಳೂರು ಸಾಧಿಸುವ ನೈಪುಣ್ಯತೆಯನ್ನು ಚೆಂಗು ನಗರ ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

## ಭಾರತ ಮತ್ತು ಚೀನಾ ದೇಶಗಳ ನಡುವೆ 9 ಪ್ರಮುಖ ಒಪ್ಪಂದಗಳಿಗೆ ಸಹಿ

ಭಾರತ-ಚೀನಾದ ವಾಸ್ತವ ಗಡಿ ನಿಯಂತ್ರಣ ರೇಖೆಗುಂಟ (ಎಲ್‌ಎಸಿ) ಸಂಭವನೀಯ ಉದ್ವಿಗ್ನ ಸ್ಥಿತಿ ಶಮನಗೊಳಿಸಲು ಮತ್ತು ಸೇನಾ ಸಂಘರ್ಷ ತಪ್ಪಿಸಲು 'ಗಡಿ ರಕ್ಷಣಾ ಸಹಕಾರ' (ಬಿಡಿಸಿಎ) ಸೇರಿದಂತೆ ಒಟ್ಟು 9 ಪ್ರಮುಖ ಒಪ್ಪಂದಗಳಿಗೆ ಎರಡೂ ದೇಶಗಳು ಸಹಿ ಹಾಕಿವೆ. ಮೂರು ದಿನಗಳ ಚೀನಾ ಪ್ರವಾಸದಲ್ಲಿರುವ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ಚೀನಾ ಪ್ರಧಾನಿ ಲೀ ಕೆಕಿಯಾಂಗ್ ಅವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ನಂತರ ಈ ಒಪ್ಪಂದಗಳಿಗೆ ಸಹಿ ಬಿತ್ತು.

**ಒಪ್ಪಂದಗಳು ಯಾವುವು?**

- ಲಡಾಕ್‌ನ ದೆಪ್ಸಾಂಗ್ ಕಣಿವೆಯಲ್ಲಿ ಕಳೆದ ಏಪ್ರಿಲ್ ತಿಂಗಳಿನಲ್ಲಿ ಚೀನಾ ಪಡೆ ಗಳು ಭಾರತದ ನೆಲದೊಳಗೆ ನುಗ್ಗಿದ ಪರಿಣಾಮ ಗಡಿಯಲ್ಲಿ ತ್ವೇಷ ಸ್ಥಿತಿ ಉಂಟಾಗಿತ್ತು. ಇದು ಉಭಯ ರಾಷ್ಟ್ರ ಗಳ ಸಂಬಂಧಕ್ಕೆ ಧಕ್ಕೆ ಉಂಟು ಮಾಡಿದ್ದರಿಂದ ಈ ಮಾತುಕತೆಗೆ ಮಹತ್ವ ಬಂದಿತ್ತು. ಪ್ರಧಾನಿ ಲೀ ಜತೆ ಡಾ. ಸಿಂಗ್ ಅವರು ಸಮಗ್ರ ಸಮಾಲೋಚನೆ ಕೈಗೊಂಡಿದ್ದು ಮಾತುಕತೆ 'ಫಲಪ್ರದ ಹಾಗೂ ಪರಿಣಾಮಕಾರಿ'ಯಾಗಿದೆ ಎಂದು ಉಭಯ ದೇಶಗಳು ಬಣ್ಣಿಸಿದವು.
- ಉಭಯ ರಾಷ್ಟ್ರಗಳ ನಡುವಿನ ಸಂಬಂಧಕ್ಕೆ ತೊಡ ಕಾಗಿರುವ ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ಚೀನಾ ನಿರ್ಮಿಸಬೇಕಿಂದಿರುವ ಅಣೆ ಕಟ್ಟು ವಿಚಾರವೂ ಮಾತುಕತೆ ವೇಳೆ ಪ್ರಧಾನವಾಗಿ ಪ್ರಸ್ತಾಪವಾಯಿತು. ನಂತರ ಒಪ್ಪಂದಕ್ಕೆ ಬರಲಾಯಿತು. ನದಿಗಳ ಗಡಿ ಕುರಿತಾದ ವಿವಾದ ಗಳನ್ನು ತಜ್ಞರ ನೆರವಿನೊಂದಿಗೆ ಪರಿಹ ರಿಸಿಕೊಳ್ಳಲಾಗುವುದು ಎನ್ನಲಾಗಿದೆ.
- 'ಭಾರತದಲ್ಲಿ ಕೈಗಾರಿಕಾ ಪಾರ್ಕ್ ಸ್ಥಾಪಿಸುವಂತೆ ಚೀನದ ಜತೆ ಮಾತುಕಡೆ ನಡೆದಿದೆ. ಇದು ಚೀನಾದ ಬಂಡವಾಳ ಹೂಡಿಕೆಗೆ ಪ್ರಶಸ್ತ ತಾಣ ಎನಿಸುವಲ್ಲಿ ಎರಡು ಮಾತಿಲ್ಲ. ಇದರೊಂದಿಗೆ ಬಾಂಗ್ಲಾದೇಶ-ಚೀನಾ, ಭಾರತ-ಮ್ಯಾನ್ಮಾರ್ ನಡುವೆ 'ಆರ್ಥಿಕ ಕಾರಿಡಾರ್' ಆರಂಭಿಸುವ ಸಾಧ್ಯಾಸಾಧ್ಯತೆಗಳನ್ನೂ ಪರಿಶೀಲಿಸ ಲಾಗುತ್ತಿದೆ' ಎಂದು ತಿಳಿಸಿದರು.
- 4,000 ಕಿ.ಮೀ ಉದ್ದದ ಎಲ್‌ಎಸಿಯಲ್ಲಿ ಶಾಂತಿ ಹಾಗೂ ಸ್ಥಿರತೆ ಕಾಪಾಡಿಕೊಂಡು ಹೋಗಲು ಅನುವು ಮಾಡಿಕೊಡುವ ನಾಲ್ಕು ಪುಟಗಳ 'ಗಡಿ ರಕ್ಷಣಾ ಸಹಕಾರ ಒಪ್ಪಂದ'ಕ್ಕೆ ಉಭಯ ನಾಯಕರ ಸಮ್ಮುಖದಲ್ಲಿ ಹಿರಿಯ ಅಧಿಕಾರಿಗಳು ಸಹಿ ಹಾಕಿದರು.

## 50 ನೇ ವರ್ಷದ ದ್ವಿಪಕ್ಷೀಯ ಸಂಬಂಧ ಸಂಭ್ರಮದಲ್ಲಿ ಭಾರತ ಮತ್ತು ಪೆರು

2013 ನೇ ಇಸವಿ ಭಾರತ ಮತ್ತು ಪೆರು ದೇಶಗಳಿಗೆ ಸಂಭ್ರಮದ ವರ್ಷ. ಭಾರತ ಮತ್ತು ಪೆರು ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಕ್ಕೆ ಸಹಿ ಹಾಕಿ 2013 ಕ್ಕೆ 50 ವರ್ಷ ತುಂಬಿವೆ. ಈ ಸಂಭ್ರಮಕ್ಕೆ ಉದಾಹರಣೆ ಎನ್ನುವಂತೆ ಭಾರತ ಮತ್ತು ಪೆರು ನಡುವೆ ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಇದರ ಬಗ್ಗೆ ಇನ್ನಷ್ಟು ಮಾಹಿತಿ ಇಲ್ಲಿದೆ.

- ಭಾರತ ಮತ್ತು ಪೆರು ಉಭಯ ದೇಶಗಳ ನಡುವೆ ಪರಸ್ಪರ ಸಹಕಾರ ದೃಷ್ಟಿಯಿಂದ 1963 ರಲ್ಲಿ ಮೊದಲ ಬಾರಿಗೆ ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿಹಾಕಿದವು. 2013 ಕ್ಕೆ ಈ ಒಪ್ಪಂದಕ್ಕೆ 50 ವರ್ಷ ತುಂಬಿದ ಕಾರಣ "ಭಾರತೀಯ ಹಬ್ಬ-2013 (Festival of India-2013)" ಅನ್ನು ಪೆರುವಿನ ರಾಜಧಾನಿ "ಲೆಮಾ"ದಲ್ಲಿ ಆಯೋಜಿಸಲಾಗಿತ್ತು. ಭಾರತದ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು ಈ ಸಂಭ್ರಮದಲ್ಲಿ ಭಾಗವಹಿಸಿದ್ದರು.

- ಅನ್ಸಾರಿ ಅವರು ಪೆರುವಿಗೆ ಭೇಟಿ ನೀಡಿದ ವೇಳೆ ಪೆರು ದೇಶದೊಂದಿಗೆ ನಾಲ್ಕು ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಿದರು. ಅವುಗಳೆಂದರೆ ರಕ್ಷಣಾ ಸಹಕಾರ, ಜಂಟಿ ಆಯೋಗ ಸ್ಥಾಪನೆ, ಶಿಕ್ಷಣ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರಸ್ಪರ ಕಾರ್ಯಕ್ರಮಗಳ ವಿನಿಮಯ.
- ಇದೇ ವೇಳೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸ್ಥಾನಮಾನವನ್ನು ನೀಡುವ ಪ್ರಸ್ತಾವನೆಗೆ ಪೆರು ಸಂಪೂರ್ಣವಾಗಿ ಬೆಂಬಲಿಸುವುದಾಗಿ ಹೇಳಿತು. ಉಭಯ ದೇಶಗಳ ಭಯೋತ್ಪಾದನಾ ನಿಗ್ರಹಕ್ಕೆ ಮಹತ್ವವನ್ನು ನೀಡುವುದಾಗಿ ಒತ್ತಿ ಹೇಳಿದವು.
- ಪೆರು ಮತ್ತು ಇತರೆ ಲ್ಯಾಟಿನ್ ಅಮೆರಿಕಾ ದೇಶಗಳೊಂದಿಗೆ ವ್ಯಾಪಾರ ವಹಿವಾಟವನ್ನು ಮತ್ತಷ್ಟು ಸಲೀಸಾಗಿಸುವ ಉದ್ದೇಶದೊಂದಿಗೆ "ಭಾರತೀಯ ವಾಣಿಜ್ಯ ಮಂಡಳಿ (Indian Chamber of Commerce (INCHAM))"ಯನ್ನು ಲಿಮಾದಲ್ಲಿ ಅನ್ಸಾರಿ ಅವರು ಉದ್ಘಾಟಿಸಿದರು. INCHAM ಉಭಯ ದೇಶಗಳ ನಡುವೆ ವ್ಯವಹಾರಿಕ ಸಂಬಂಧವನ್ನು ಉತ್ತಮಪಡಿಸಲಿದೆ.

# ವ್ಯವಹಾರ

## ಭಾರ್ತಿ ಮತ್ತು ವಾಲ್ ಮಾರ್ಟ್ ಸಹಭಾಗಿತ್ವ ಕಡಿತ- ಸ್ವತಂತ್ರ ನಿರ್ವಹಣೆಗೆ ನಿರ್ಧಾರ

ಭಾರತದಲ್ಲಿ ಚಿಲ್ಲರೆ ಮಳಿಗೆಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಉದ್ದೇಶದಿಂದ ಭಾರ್ತಿ ಎಂಟರ್‌ಪ್ರೈಸೆಸ್ ಹಾಗೂ ವಾಲ್ ಮಾರ್ಟ್ ಸಹಭಾಗಿತ್ವವನ್ನು ಕೊನೆಗಾಣಿಸುತ್ತಿರುವುದಾಗಿ ಹೇಳಿಕೆ ನೀಡಿವೆ. ಈ ಮೂಲಕ ಆರು ವರ್ಷಗಳ ಸಹಭಾಗಿತ್ವ ಭವಿಷ್ಯದ ಬಗ್ಗೆ ಇದ್ದ ಊಹಾಪೋಹಗಳಿಗೆ ತೆರೆ ಬಿದ್ದಿದೆ.

**ಹಿನ್ನೆಲೆ ಏನು?**

ಉಭಯ ಕಂಪೆನಿಗಳು 2007 ಕೈ ಜೋಡಿಸಿದ್ದವು. ಹಾಗೂ 2009 ರಲ್ಲಿ ಅಮೃತಸರದಲ್ಲಿ ಬೆಸ್ಟ್ ಪ್ರೈಸ್ ಮೊಡೆರ್ನ್ ಹೋಲ್‌ಸೇಲ್‌ನ ಮೊದಲ ಮಳಿಗೆ ತೆರದಿದ್ದವು.ಅಮೆರಿಕದ ಪ್ರಮುಖ ಚಿಲ್ಲರೆ ಮಾರಾಟ ಸಂಸ್ಥೆಯಾಗಿರುವ ವಾಲ್‌ಮಾರ್ಟ್ ಮತ್ತು ಭಾರತದ ಭಾರ್ತಿ ಎಂಟರ್‌ಪ್ರೈಸೆಸ್ , ಜಂಟಿಯಾಗಿ 50:50 ರಷ್ಟು ಬಂಡವಾಳ ತೊಡಗಿಸಿ, ಭಾರ್ತಿ ವಾಲ್‌ಮಾರ್ಟ್ ಹೆಸರಿನಲ್ಲಿ ಭಾರತದಲ್ಲಿ ಬೆಸ್ಟ್ ಪ್ರೈಸ್ ಮೊಡೆರ್ನ್ ಹೋಲ್‌ಸೇಲ್‌ಬ್ರಾಂಡ್ ಅಡಿಯಲ್ಲಿ 20 ಸಗಟು ಮಳಿಗೆಗಳನ್ನು ನಡೆಸುತ್ತಿದೆ. ಆದರೆ ಷೇರು ಬಂಡವಾಳ ಮೊತ್ತ ಮಾತ್ರ ಬಹಿರಂಗಗೊಂಡಿರಲಿಲ್ಲ.

**ಪ್ರತ್ಯೇಕ ವಾದ:**

- ಭಾರತದಲ್ಲಿ ಸ್ವತಂತ್ರ ಹಾಗೂ ಪ್ರತ್ಯೇಕವಾದ ವ್ಯಾಪಾರ ನಡೆಸಲು ಒಂದು ಒಪ್ಪಂದ ಮಾಡಿಕೊಂಡಿದ್ದೇವೆ ಹಾಗೂ ಚಿಲ್ಲರೆ ವ್ಯಾಪಾರದಲ್ಲಿದ್ದ ಫ್ರಾಂಚೈಸ್ ಒಪ್ಪಂದವನ್ನು ಸ್ಥಗಿತಗೊಳಿಸುತ್ತಿದ್ದೇವೆ ಎಂದು ಉಭಯ ಕಂಪೆನಿಗಳು ಜಂಟಿ ಪ್ರಕಟಣೆಯಲ್ಲಿ ತಿಳಿಸಿವೆ.
- ವಿಶ್ವ ದರ್ಜೆಯ ಚಿಲ್ಲರೆ ವ್ಯಾಪಾರವನ್ನು ನಿರ್ಮಿಸುವುದು ಹಾಗೂ ಎಲ್ಲಾ ವಿಧಗಳಲ್ಲೂ ಭಾರ್ತಿ ರೀಟೇಲ್‌ನಲ್ಲಿ ಬಂಡವಾಳ ತೊಡಗಿಸುವುದನ್ನು ಮುಂದುವರಿಸಲು ಭಾರ್ತಿ ಬದ್ಧವಾಗಿದೆ. ವ್ಯಾಪಾರವನ್ನು ವಿಸ್ತರಿಸಲು ಈಗಿರುವ 212 ಮಳಿಗೆಗಳ ಪ್ರಮುಖ ವೇದಿಕೆ ನಮಗಿದೆ ಎಂದು ನಂಬಿದ್ದೇವೆ ಎಂದು ಭಾರ್ತಿ ಎಂಟರ್‌ಪ್ರೈಸೆಸ್‌ನ ಚೇರಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ರಾಜನ್ ಭಾರ್ತಿ ಮಿತ್ತಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.
- ಚಿಲ್ಲರೆ ಮಾರುಕಟ್ಟೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಉತ್ತೇಜನದ ಪರಿಸ್ಥಿತಿ ನಿರ್ಮಿಸಲು ಸರ್ಕಾರ ಹಾಗೂ ಆಸಕ್ತ ಷೇರುದಾರರ ಜೊತೆಗೂಡಿ ವ್ಯಾಪಾರ ವೃದ್ಧಿಸಲು ಯೋಜನೆ ರೂಪಿಸುವುದಾಗಿ ವಾಲ್‌ಮಾರ್ಟ್ ತಿಳಿಸಿದೆ.

## ಮೊಬೈಲ್ ನಂಬರ್ ಪೋರ್ಟಬಿಲಿಟಿ (ಎಂಎನ್‌ಪಿ) ಯಲ್ಲಿ ಕರ್ನಾಟಕ ನಂ.1

ರಾಜ್ಯದಲ್ಲಿರುವ 5.34 ಕೋಟಿ ಮೊಬೈಲ್ ಸಂಪರ್ಕ ಪೈಕಿ ಪೋರ್ಟಬಿಲಿಟಿಗೆ ಕೋರಿ ಬಂದ ಸಂಖ್ಯೆ 1.14 ಕೋಟಿ ಹೀಗಾಗಿ ಮೊಬೈಲ್ ನಂಬರ್ ಪೋರ್ಟಬಿಲಿಟಿ (ಎಂಎನ್‌ಪಿ) ಸೇವೆ ಪಡೆಯುವಲ್ಲಿ ಕರ್ನಾಟಕದ ಗ್ರಾಹಕರು ಅಗ್ರ ಸ್ಥಾನದಲ್ಲಿದ್ದಾರೆ. ಇದರರ್ಥ ಕರ್ನಾಟಕದ ಗ್ರಾಹಕರಿಗೆ ಈಗ ತಾವು ಬಳಸುತ್ತಿರುವ ಮೊಬೈಲ್ ಕಂಪನಿ ಸೇವೆ ಬಗ್ಗೆ ತೃಪ್ತಿ ಇಲ್ಲ.

**ಅಗ್ರಸ್ಥಾನ:**

- ಕರ್ನಾಟಕದಲ್ಲಿ 5.34 ಕೋಟಿ ಮೊಬೈಲ್ ಸಂಪರ್ಕಗಳಿದ್ದು ಈ ಪೈಕಿ 1.14 ಕೋಟಿ ಸಂಪರ್ಕಗಳಿಂದ ನಂಬರ್ ಪೋರ್ಟಬಿಲಿಟಿಗೆ ಕೋರಿಕೆ ಬಂದಿದೆ. ಇದು ಇಡೀ ದೇಶದಲ್ಲೇ ಅತಿ ಹೆಚ್ಚು.
- ಉತ್ತರ ಮತ್ತು ಪಶ್ಚಿಮ ಭಾರತವನ್ನೊಳಗೊಂಡ ವಲಯ ಒಂದರಲ್ಲಿ ರಾಜಸ್ಥಾನ (9.58 ದಶಲಕ್ಷ ಸಂಪರ್ಕ) ಅಗ್ರ ಸ್ಥಾನದಲ್ಲಿದೆ.
- ದಕ್ಷಿಣ ಮತ್ತು ಪೂರ್ವ ಭಾರತವನ್ನೊಳಗೊಂಡ ವಲಯ ಎರಡರಲ್ಲಷ್ಟೇ ಅಲ್ಲ ಕರ್ನಾಟಕ ಒಟ್ಟಾರೆ 1.14 ಕೋಟಿ ಎಂಎನ್ ಪಿ ಕೋರಿಕೆಯೊಂದಿಗೆ ರಾಷ್ಟ್ರದಲ್ಲೇ ಮೊದಲ ಸ್ಥಾನದಲ್ಲಿದೆ.

**ಎಂ.ಎನ್.ಪಿ.:**

ಈಗಿರುವ ಮೊಬೈಲ್ ನಂಬರ್ ಉಳಿಸಿಕೊಂಡೇ ಬೇರೆ ಮೊಬೈಲ್ ಕಂಪನಿ ಸೇವೆ ಪಡೆದುಕೊಳ್ಳುವುದಕ್ಕೆ ಮೊಬೈಲ್ ನೆಟ್‌ವರ್ಕ್ ಪೋರ್ಟಬಿಲಿಟಿ ಎನ್ನಲಾಗುತ್ತದೆ. ಉತ್ತಮ ನೆಟ್‌ವರ್ಕ್ ಮತ್ತು ಉತ್ತಮ ಕೊಡುಗೆಗಳು ಎಂಎನ್‌ಪಿಗೆ ಮೊರೆ ಹೋಗಲು ಪ್ರಮುಖ ಕಾರಣ.

**ಸಾಂದ್ರತೆ:**

- ಕರ್ನಾಟಕದ ಒಟ್ಟಾರೆ ದೂರಸಂಪರ್ಕ ಸಾಂದ್ರತೆ 91.73 ಇದೆ. ರಾಷ್ಟ್ರೀಯ ದೂರಸಂಪರ್ಕ ಸಾಂದ್ರತೆ 73.54 ಇದೆ.
- ದೆಹಲಿ, ತಮಿಳುನಾಡು, ಹಿಮಾಚಲ ಪ್ರದೇಶ, ಪಂಜಾಬ್ ರಾಜ್ಯಗಳು ಶೇ.100ರಷ್ಟು ಸಂಪರ್ಕ ಸಾಂದ್ರತೆ ಸಾಧಿಸಿವೆ.
- ಸಂಪರ್ಕ ಸಾಂದ್ರತೆಯಲ್ಲಿ ನೂರರ ಗಡಿ ಮುಟ್ಟಲು ಸಿದ್ಧವಾಗಿರುವ ಕೇರಳ 97.29 ಸಾಂದ್ರತೆ ಹೊಂದಿದ್ದರೆ ಕರ್ನಾಟಕ ನಂತರದ ಸ್ಥಾನದಲ್ಲಿದೆ.
- ಒಟ್ಟಾರೆ ದೂರ ಸಂಪರ್ಕ ಸಾಂದ್ರತೆಯಲ್ಲಿ ರಾಜ್ಯಕ್ಕೆ 6ನೇ ಸ್ಥಾನ. ಅತಿ ಕಡಿಮೆ ಸಂಪರ್ಕ ಸಾಂದ್ರತೆ ಉತ್ತರ ಪ್ರದೇಶದ್ದು. ಇಲ್ಲಿ ಪ್ರತಿ ನೂರು ಜನರಿಗೆ 34.33 ರಷ್ಟು ಸಂಪರ್ಕ ಇದೆ.
- ಪ್ರತಿ ನೂರು ಜನರಿಗೆ ಎಷ್ಟು ದೂರವಾಣಿ ಸಂಪರ್ಕ ಇದೆ ಎಂಬುದನ್ನಾಧರಿಸಿ ದೂರವಾಣಿ ಸಂಪರ್ಕ ಸಾಂದ್ರತೆ ಅಳೆಯಲಾಗುತ್ತದೆ.
- ವೈರ್‌ಲೆಸ್ ಸೇವೆ ಒದಗಿಸುವಲ್ಲಿ ಖಾಸಗಿ ಕಂಪನಿಗಳದ್ದೇ ಅಗ್ರಪಾಲು. ಶೇ.88.30 ಖಾಸಗಿ ಕಂಪನಿಗಳು ಸೇವೆ ಒದಗಿಸುತ್ತಿದ್ದರೆ, ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್, ಎಂಟಿಎನ್‌ಎಲ್‌ಗಳ ಪಾಲು ಶೇ.11.70ರಷ್ಟು ಮಾತ್ರ.
- ಭಾರತಿ ಏರ್‌ಟೆಲ್, ವೊಡಾಫೋನ್, ರಿಲಯನ್ಸ್, ಐಡಿಯಾ ಕಂಪನಿಗಳು ಕ್ರಮವಾಗಿ ಶೇ.21.88, ಶೇ.17.65, 14.43, ಶೇ.13.32 ರಷ್ಟು ಪಾಲು ಹೊಂದಿವೆ.

# ವಿಜ್ಞಾನ-ತಂತ್ರಜ್ಞಾನ

## ಜಪಾನೀಸ್ ಎನ್ಸೆಪಾಲಿಟಿಸ್ ರೋಗಕ್ಕೆ ದೇಶದ ಮೊದಲ ಸ್ವದೇಶಿ ಲಸಿಕೆ ಬಿಡುಗಡೆ

ಮಾರಕ ರೋಗ ಜಪಾನೀಸ್ ಎನ್ಸೆಪಾಲಿಟಿಸ್ (Japanese Encephalitis)" ವಿರುದ್ದ ಮೊದಲ ಬಾರಿಗೆ ಭಾರತ ಅಭಿವೃದ್ಧಿಪಡಿಸಿರುವ ಲಸಿಕೆಯನ್ನು ಕೇಂದ್ರ ಆರೋಗ್ಯ ಸಚಿವ ಗುಲಾಂ ನಬಿ ಆಜಾದ್ ಅವರು ಬಿಡುಗಡೆಗೊಳಿಸಿದರು. JENVAC ಹೆಸರಿನ ಈ ಲಸಿಕೆಯನ್ನು "ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ವೈರಾಲಜಿ", "ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್" ಮತ್ತು ಭಾರತ್ ಬಯೋಟೆಕ್ ಸಂಸ್ಥೆ ಜಂಟಿಯಾಗಿ ಅಭಿವೃದ್ಧಿಪಡಿಸಿವೆ. JENVAC ಜಪಾನೀಸ್ ಎನ್ಸೆಪಾಲಿಟಿಸಿ ವಿರುದ್ದ ಭಾರತ ಅಭಿವೃದ್ಧಿಪಡಿಸಿರುವ ಮೊದಲ ಲಸಿಕೆ.

- ಜಪಾನೀಸ್ ಎನ್ಸೆಪಾಲಿಟಿಸ್ ಸೊಳ್ಳೆಗಳ ಮೂಲಕ ಹರಡುವ ವೈರಾಣುವಿನಿಂದ ಉಂಟಾಗುವ ಮಾರಕ ಕಾಯಿಲೆ. ಏಷ್ಯಾದಲ್ಲಿ ಅತ್ಯಂತ ಹೆಚ್ಚಾಗಿ ಈ ಕಾಯಿಲೆ ಕಂಡುಬರುತ್ತಿದೆ. ಜಪಾನೀಸ್ ಎನ್ಸೆಪಾಲಿಟಿಸ್ ಭಾರತಕ್ಕೂ ಸವಾಲು ಆಗಿರುವ ರೋಗವಾಗಿದ್ದು, ಸಾವಿರಾರು ಜನರು ಈ ಕಾಯಿಲೆಗೆ ತುತ್ತಾಗುತ್ತಿದ್ದಾರೆ.
- ತಲೆ ನೋವು, ವಿಪರೀತ ಜ್ವರ, ಕುತ್ತಿಗೆ ಹಿಡಿದುಕೊಳ್ಳುವುದು, ವಾಂತಿ ಹಾಗೂ ಕೋಮ ಈ ಕಾಯಿಲೆಯ ಪ್ರಮುಖ ಲಕ್ಷಣಗಳು.

**ಭಾರತದಲ್ಲಿ ಜಪಾನೀಸ್ ಎನ್ಸೆಪಾಲಿಟಿಸ್:**

- 1955 ರಲ್ಲಿ ತಮಿಳನಾಡಿನ ವೆಲ್ಲೂರುನಲ್ಲಿ ಈ ಕಾಯಿಲೆ ಮೊತ್ತಮೊದಲ ಬಾರಿಗೆ ಬೆಳಕಿಗೆ ಬಂದಿತ್ತು. ಪ್ರಸ್ತುತ ಈ ಕಾಯಿಲೆಯ ನಿರ್ಮೂಲನೆ ದೇಶಕ್ಕೆ ಸವಾಲಾಗಿದ್ದು, 19 ರಾಜ್ಯಗಳ 171 ಜಿಲ್ಲೆಗಳು ಈ ಕಾಯಿಲೆಯಿಂದ ಬಾಧಿತವಾಗಿವೆ.
- ಇಲ್ಲಿಯವರೆಗೂ ಈ ಕಾಯಿಲೆಗೆ ನೀಡುತ್ತಿದ್ದ ಲಸಿಕೆಯನ್ನು ಭಾರತ ಚೀನಾದಿಂದ ಆಮದು ಮಾಡಿಕೊಳ್ಳುತ್ತಿತ್ತು.
- ಜಪಾನೀಸ್ ಎನ್ಸೆಪಾಲಿಟಿಸ್ ಕಾಯಿಲೆಯನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮವನ್ನು ರೂಪಿಸಿದ್ದು, 12 ನೇ ಪಂಚವಾರ್ಷಿಕ ಯೋಜನೆಯಡಿ ರೂ 40,000 ಮಿಲಿಯನ್ ಮೀಸಲಿಟ್ಟಿದೆ ಹಾಗೂ ಈ ಕಾರ್ಯಕ್ರಮವನ್ನು ಅಗತ್ಯತೆಗೆ ಅನುಗುಣವಾಗಿ ದೇಶದ 60 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

## ಗುರು ಗ್ರಹವನ್ನು ಹೋಲುವ ಹೊಸ ಗ್ರಹವನ್ನು ಅನ್ವೇಷಿಸಿದ ಖಗೋಳ ವಿಜ್ಞಾನಿಗಳು

ಸೌರ ಮಂಡಲದಿಂದ ಹೊರಗೆ ಇರುವ ಗ್ರಹ ಒಂದರ ಮೇಲೆ ಅಗಾಧ ಮೋಡಗಳು ಕವಿದಿದೆ. ಅಲ್ಲದೇ, ಇದು ಗುರು ಗ್ರಹದಂತೆ ಹೋಲಿಕೆಯಾಗುತ್ತಿದೆ ಎನ್ನುವುದರ ಕುರಿತು ಖಗೋಳ ವಿಜ್ಞಾನಿಗಳು ಹೊಸ ಮಾಹಿತಿಯನ್ನು ಕಲೆ ಹಾಕಿದ್ದಾರೆ. ನಾಸಾದ ಕೆಪ್ಲರ್ ಮತ್ತು ಸ್ಪಿಟ್ಜರ್ ಅಂತರಿಕ್ಷ ದೂರದರ್ಶಕ ವನ್ನು ಬಳಸಿ ವೀಕ್ಷಿಸಿದ ಗ್ರಹವನ್ನು ಕೆಪ್ಲರ್7ಬಿ ಎಂದು ಹೆಸರಿಸ ಲಾಗಿದೆ. ಗ್ರಹದ ಪಶ್ಚಿಮ ಭಾಗದಲ್ಲಿ ಅಗಾಧ ಮೋಡ ಕವಿದಿದೆ ಮತ್ತು ಪೂರ್ವದಲ್ಲಿ ಶುಭ್ರ ಆಕಾಶ ಕಾಣಿಸುತ್ತಿದೆ ಎಂಬ ಮಾಹಿತಿ ದಾಖಲಾಗಿದೆ.

**"ಕೆಪ್ಲರ್ 7 ಬಿ":**

'ಕೆಪ್ಲರ್ ಮತ್ತು ಸ್ಪಿಟ್ಜರ್ ಅಂತರಿಕ್ಷ ದೂರದರ್ಶಕದಿಂದ ಮೂರು ವರ್ಷಗಳ ಕಾಲ ಅನಿಲರೂಪದ ಮತ್ತು ದೈತ್ಯಗ್ರಹವನ್ನು ವೀಕ್ಷಿಸಿದ ನಂತರ ಈಗ ನಾವು ಕಡಿಮೆ ವಿಶ್ಲೇಷಣೆಯ (ರೆಸ್ಯಲೂಷನ್) ನಕ್ಷೆಯನ್ನು ತಯಾರಿ ಸಿದ್ದೇವೆ' ಎನ್ನುತ್ತಾರೆ ಕೇಂಬ್ರಿಡ್ಜ್ ತಾಂತ್ರಿಕ ಸಂಸ್ಥೆಯ ಮುಖ್ಯ ಸಂಶೋಧಕ ಬ್ರೀಸ್ ಒಲಿವಿಯರ್ ಡೆಮೊರಿ.

ಕೆಪ್ಲರ್7ಬಿ ಗ್ರಹದಲ್ಲಿ ಸಮುದ್ರ ಗಳು ಮತ್ತು ಭೂಮೇಲ್ಮೈ ಇದೆಯೇ ಎನ್ನುವುದನ್ನು ಪತ್ತೆ ಹಚ್ಚಲಿದ್ದೇವೆ. ಸಂಶೋಧನೆ ವೇಳೆ ಗ್ರಹಕ್ಕೆ ನಿಚ್ಚಳ ಮತ್ತು ಪ್ರತಿಫಲಿತ ವೈಶಿಷ್ಟ್ಯತೆ ಇದೆ ಎನ್ನುವುದನ್ನು ಕಂಡು ಕೊಂಡಿದ್ದೇವೆ. ಇದೇ ವೇಳೆ ಗ್ರಹಕ್ಕೆ ಮೋಡದ ಛಾಯೆ ಇರುವುದನ್ನೂ ತಿಳಿದುಕೊಂಡಿ ದ್ದೇವೆ' ಎಂದು ಡೆಮೊರಿ ವಿವರಿಸುತ್ತಾರೆ. ಕೆಪ್ಲರ್ ದೂರದರ್ಶಕದ ಮೂಲಕ ಸೌರವ್ಯವಸ್ಥೆಯ ಹೊರಗಡೆ ಇರುವ 150 ಗ್ರಹಗಳನ್ನು ಪಚ್ಚೆ ಹಚ್ಚಲಾಗಿದೆ. ಅದರ ಮೊದಲ ಅನ್ವೇಷಣೆಯೇ ಕೆಪ್ಲರ್ 7 ಬಿ.

**<u>ಬರಿಗಣ್ಣಿನಿಂದ ಕಾಣಬಹುದಾದ 'ಇಸಾನ್' ಧೂಮಕೇತು ನವೆಂಬರ್-ಡಿಸೆಂಬರ್ ನಲ್ಲಿ ಗೋಚರ</u>**

ಎರಡು ವರ್ಷಗಳ ಹಿಂದೆ ಸೆಪ್ಟಂಬರ್ 21 ರಂದು ಸೌರ ಮಂಡಲದಲ್ಲಿ ಪತ್ತೆಯಾಗಿದ್ದ ಇಸಾನ್ (ISON) ಎಂಬ ಧೂಮಕೇತುವನ್ನು ಬರಿಗಣ್ಣಿನಲ್ಲಿ ನೋಡುವ ಅವಕಾಶವಿದೆ. ಗಂಟೆಗೆ ಸುಮಾರು 80 ಮೈಲಿ ವೇಗದಲ್ಲಿ ಚಲಿಸುತ್ತಿರುವ ಈ ಧೂಮಕೇತುವನ್ನು ನವೆಂಬರ್ 28ರಿಂದ ಡಿಸೆಂಬರ್ ಅಂತ್ಯದವರೆಗೂ ಬರಿಗಣ್ಣಿನಲ್ಲಿ ನೋಡಬಹುದಾಗಿದೆ.

**ಬರಿಗಣ್ಣಿಗೆ ಗೋಚರ:**

ಡಿಸೆಂಬರ್ ಎರಡನೆಯ ವಾರ ಸಂಜೆಯ ಆಗಸದಲ್ಲಿ ಉದ್ದನೆಯ ಬಾಲವುಳ್ಳ ಇಸಾನ್ ಧೂಮಕೇತು ಪ್ರತಿಯೊಬ್ಬರಿಗೂ ಗೋಚರವಾಗಲಿದೆ. ಹವ್ಯಾಸಿ ಖಗೋಳ ವೀಕ್ಷಕರು ಹಾಗೂ ವೃತ್ತಿಪರ ಖಗೋಳ ತಜ್ಞರಿಗೆ ಸಂಶೋಧನೆಗೆ ಇದೊಂದು ಸುವರ್ಣಾವಕಾಶವಾಗಿದ್ದು, ಈ ಧೂಮಕೇತುವಿನಲ್ಲಿ ಅಪಾರವಾದ ಹಿಮದುಂಡೆಗಳು ಹಾಗೂ ದೂಳಿನ ಕಣಗಳು ಹೇರಳವಾಗಿವೆ' ಎಂದು ಈ ಧೂಮಕೇತುವನ್ನು ಪತ್ತೆ ಹಚ್ಚಿದ ರಷ್ಯಾದ ವಿಟಾಲಿನೆವಾಸ್ಕಿ ಮತ್ತು ಆರ್ಟೆಯಾ ನೋವಿಕ್‌ನಾಕ್ ಮಾಹಿತಿ ನೀಡಿದ್ದಾರೆ. ನಭೋಮಂಡಲದಲ್ಲಿ ಬರಿಗಣ್ಣಿಗೆ ಕಾಣಿಸಲಿರುವ ಇಸಾನ್ (ISON) ಧೂಮಕೇತು ಈ ಶತಮಾನದ ಅದ್ಭುತವಾಗಲಿದೆ. ಬೈನಾಕ್ಯುಲರ್ ಅಥವಾ ದೂರದರ್ಶಕಗಳಿದ್ದರೆ, ಇದನ್ನು ವೀಕ್ಷಿಸಲು ಸುಲಭ.

**<u>ಭಾರತದ ಮಹತ್ವಾಕಾಂಕ್ಷಿ 'ಮಂಗಳಯಾನ' ಯೋಜನೆ ನವೆಂಬರ್ 5 ಕ್ಕೆ</u>**

ದೇಶದ ಬಹು ಮಹತ್ವಾಕಾಂಕ್ಷೆಯ ಯೋಜನೆಯಾದ ಮಂಗಳಯಾನಕ್ಕೆ, ನವೆಂಬರ್ 5 ರಂದು ಬಾಹ್ಯಾಕಾಶ ನೌಕೆ ಉಡ್ಡಯನ ಮಾಡಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ನಿರ್ಧರಿಸಿದೆ. 'ಮಂಗಳ ಕಕ್ಷೆಗೆ ಉಪಗ್ರಹ ಯೋಜನೆ' (ಎಂಒಎಂ) ಮಂಗಳಯಾನಕ್ಕೆ 'ಪಿಎಸ್ಎಲ್‌ವಿ ಸಿ25' ನೌಕೆಯನ್ನು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡಾವಣಾ ತಾಣದಿಂದ ನವೆಂಬರ್ 5 ರಂದು ಮಧ್ಯಾಹ್ನ 3.28ಕ್ಕೆ ಉಡ್ಡಯನ ಮಾಡಲು ಸಮಯ ನಿಗದಿ ಮಾಡಲಾಗಿದೆ

**ಇಸ್ರೋ ತೀರ್ಮಾನ:**

ಈ ನೌಕೆಯ ಉಡ್ಡಯನ ದಿನಾಂಕ ನಿಗದಿ ಮಾಡುವ ಬಗ್ಗೆ ಈ ಹಿಂದೆ ತೀರ್ಮಾನ ಕೈಗೊಳ್ಳಬೇಕಿತ್ತು. ಆದರೆ, ದಕ್ಷಿಣ ಶಾಂತಮಹಾಸಾಗರದಲ್ಲಿ ಹವಾಮಾನ ವೈಪರೀತ್ಯ ಉಂಟಾದ ಕಾರಣ ಈ ನಿರ್ಧಾರವನ್ನು ಮಂಗಳವಾರ ನಡೆದ ಸಭೆಯಲ್ಲಿ ಕೈಗೊಳ್ಳಲಾಯಿತು. ಹೆಚ್ಚಿನ ಪ್ರಮಾಣದಲ್ಲಿ ಇಂಧನ ಸಾಮರ್ಥ್ಯಹೊಂದಿರುವ 'ಧ್ರುವಗಾಮಿ ಉಪಗ್ರಹ ಉಡಾವಣಾ ವಾಹನ'ವನ್ನು (ಪಿಎಸ್ಎಲ್‌ವಿ) Rs 450 ಕೋಟಿ ವೆಚ್ಚದ ಈ ಯೋಜನೆಗೆ ಬಳಕೆ ಮಾಡಲಾಗುತ್ತಿದೆ.

**ಯೋಜನೆ ಉದ್ದೇಶ:**

- ಮಂಗಳಯಾನದ ಪ್ರಾಥಮಿಕ ಉದ್ದೇಶವು ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಧಿಸಿರುವ ಸಾಧನೆಯನ್ನು ವಿಶ್ವಕ್ಕೆ ಸಾರುವುದು. ಜೊತೆಗೆ 'ಕೆಂಪು' ಗ್ರಹದ ಬಗ್ಗೆ ಮೌಲಿಕ ಸಂಶೋಧನೆ ನಡೆಸುವುದು ಆಗಿದೆ.
- ಮುಖ್ಯವಾಗಿ ಅಂಗಾರಕನಲ್ಲಿ ಜೀವಿಗಳ ಇರುವಿಕೆಗೆ ಅಗತ್ಯವಾದ ಮಿಥೇನ್ ಅನಿಲ ಇದ್ದ ಕುರುಹು ಇದೆಯೇ ಎಂಬುದನ್ನು ತಿಳಿಯಲು ಈ ಗಗನನೌಕೆಯನ್ನು ಉಡಾವಣೆ ಮಾಡಲಾಗುತ್ತಿದೆ.
- ಹಾಗೂ ಕೆಂಪು ಗ್ರಹದಲ್ಲಿ ಜೀವಿಸಲು ಬೇಕಾದಂತಹ ವಾತಾವರಣದ ಲಕ್ಷಣಗಳ ಅಧ್ಯಯನ ಮಾಡಲು ಈ ಉಪಗ್ರಹ ನೆರವಾಗಲಿದೆ ಮತ್ತು ಚಿತ್ರಗಳನ್ನು ರವಾನಿಸಲಿದೆ.
- 80 ಸಾವಿರ ಕಿ.ಮೀ. ವಿಸ್ತಾರವಿರುವ ಅಂಡಾಕಾರದ ಮಂಗಳದ ಗ್ರಹದ ಕಕ್ಷೆಯಲ್ಲಿ 320 ಕಿ.ಮೀ. ಒಳಕ್ಕೆ ಉಪಗ್ರಹ ಹೋಗಲಿದೆ.
- ಭೂ ಕಕ್ಷೆ ಬಿಟ್ಟ ನಂತರ ಈ ನೌಕೆಯು ಬಾಹ್ಯಾಕಾಶದಲ್ಲೇ 10 ತಿಂಗಳ ಕಾಲ ಯಾನ ಮಾಡಿ ಅಂಗಾರಕನ ಸಮೀಪದ ಪಥಕ್ಕೆ 2014 ರ ಸೆಪ್ಟೆಂಬರ್‌ಗೆ ಹೋಗಿ ಸೇರಲಿದೆ.

## ಏಳು ಗ್ರಹಗಳನ್ನು ಹೊಂದಿರುವ ಹೊಸ ಸೌರವ್ಯೂಹ ವ್ಯವಸ್ಥೆ ಪತ್ತೆ ಹಚ್ಚಿದ ಖಗೋಳತಜ್ಞರು

ಸೌರವ್ಯೂಹ ವ್ಯವಸ್ಥೆಯನ್ನೇ ಹೋಲುವ ಹೊಸ ಸೌರವ್ಯೂಹ ಪತ್ತೆಯಾಗಿದ್ದು, ಅದು ಏಳು ಗ್ರಹಗಳನ್ನು ಹೊಂದಿದೆ. ಈ ಸೌರಮಂಡಲ ಭೂಮಿಯಿಂದ ಸುಮಾರು 127 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದೆ. ದಕ್ಷಿಣ ಯೂರೋಪಿನ ವೀಕ್ಷಣಾಲಯದ (ಯುರೋಪಿಯನ್ ಸದರನ್ ಅಬ್ಸರ್ವೇಟರಿ - ಇಎಸ್‌ಒ) ಖಗೋಳತಜ್ಞರು, ಈ ಸೌರವ್ಯೂಹವನ್ನು ಪತ್ತೆಹಚ್ಚಿದ್ದು, ಇದು ತನ್ನ ಸುತ್ತ ಕನಿಷ್ಠ ಏಳು ಗ್ರಹಗಳನ್ನು ಹೊಂದಿದೆ.

**'ಹಾರ್ಪ್ಸ್' ಮೂಲಕ ಪತ್ತೆ:**

'ಹಾರ್ಪ್ಸ್' ಸ್ಪೆಕ್ಟ್ರೋಗ್ರಾಫ್ (ಎಚ್‌ಎಆರ್‌ಪಿಎಸ್ - ಹೈ ಆಕ್ಯುರಸಿ ರೇಡಿಯಲ್ ವೆಲಾಸಿಟಿ ಪ್ಲಾನೆಟ್) ಎಂಬ ಸಾಧನದ ಮೂಲಕ ಈ ಸೌರಮಂಡಲವನ್ನು ಪತ್ತೆ ಹಚ್ಚಲಾಗಿದ್ದು, ಇದರೊಟ್ಟಿಗೆ ಇರಬಹುದಾದ ಮತ್ತೆರಡು ಗ್ರಹಗಳ ಕುರಿತು ಇಎಸ್‌ಒ ಸಂಶೋಧಕರು ಹೆಚ್ಚಿನ ಮಾಹಿತಿಯನ್ನು ಕಲೆಹಾಕುತ್ತಿದ್ದಾರೆ. 'ಸೌರವ್ಯೂಹ ವ್ಯವಸ್ಥೆ ಹೊಂದಿರುವ ಈ ಏಳು ಹೊಸ ಗ್ರಹಗಳ ಜಾಲವು, ನಮ್ಮ ಸೌರವ್ಯವಸ್ಥೆಗೆ ಸಮಾನವಾಗಿದೆ ಎಂಬ ಸಾಧ್ಯತೆಯನ್ನು ದಟ್ಟವಾಗಿಸಿದೆ' ಎಂದು ಸಂಶೋಧನಾ ತಂಡದ ಕ್ರಿಸ್ಟೋಫೆ ಲೊವಿಸ್ ಅಭಿಪ್ರಾಯಪಟ್ಟಿದ್ದಾರೆ. 'ಪತ್ತೆಯಾಗಿರುವ ಹೊಸ ಸೌರಮಂಡಲದಲ್ಲಿ ಗ್ರಹಗಳ ಚಲನಗತಿಗಳ ಅಧ್ಯಯನದಿಂದ, ಗ್ರಹಗಳ ಮಧ್ಯೆ ಸಂಕೀರ್ಣವಾದ ಗುರುತ್ವಾಕರ್ಷಣ ಪಾರಸ್ಪರಿಕ ಕ್ರಿಯೆ ಇರುವುದು ತಿಳಿದುಬಂದಿದೆ' ಎಂದು ಅವರು ಹೇಳಿದ್ದಾರೆ. ಇಎಸ್‌ಒಗೆ ಸೇರಿರುವ ಚಿಲಿಯ ಲಾ ಸಿಲ್ಲಾ ಎಂಬಲ್ಲಿರುವ 'ಹಾರ್ಪ್ಸ್' ಸಾಧನವನ್ನು ಉಪಯೋಗಿಸಿ ಈ ಗ್ರಹಗಳ ಜಾಲವನ್ನು ಪತ್ತೆಹಚ್ಚಲಾಗಿದೆ.

ಹೈಡ್ರಸ್ ನಕ್ಷತ್ರ ಸಮೂಹದಿಂದ ಸುಮಾರು 127 ಜ್ಯೋತಿ ವರ್ಷಗಳಷ್ಟು ದೂರವಿರುವ ಸೂರ್ಯನನ್ನು ಹೋಲುವ 'ಎಚ್‌ಡಿ 10180' ಕುರಿತು ಆರು ವರ್ಷದಿಂದ ಸುದೀರ್ಘ ಅಧ್ಯಯನ ನಡೆಸಲಾಗುತ್ತಿದೆ.

**"ಪ್ರಗತಿ" ಎಂಬ ಹೊಸ ಕ್ಷಿಪಣೆ ಅಭಿವೃದ್ಧಿಪಡಿಸಿರುವ ಭಾರತ**

ನೆಲದಿಂದ ನೆಲಕ್ಕೆ ಚಿಮ್ಮುವ "ಪ್ರಗತಿ" ಹೆಸರಿನ ಕ್ಷಿಪಣಿಯನ್ನು ಭಾರತ ಇತ್ತೀಚೆಗೆ ಅಭಿವೃದ್ಧಿ ಪಡಿಸಿದೆ. ಹೊಸದಾಗಿ ಅಭಿವೃದ್ಧಿಪಡಿಸಲಾಗಿರುವ ಈ ಕ್ಷಿಪಣಿಯನ್ನು ತನ್ನ ಮಿತ್ರರಾಷ್ಟ್ರಗಳಿಗೆ ಪೂರೈಸಲಾಗುವುದು ಎನ್ನಲಾಗಿದೆ. ದಕ್ಷಿಣಾ ಕೊರಿಯಾದಲ್ಲಿ ನಡೆಯುತ್ತಿರುವ ರಕ್ಷಣಾ ಪ್ರದರ್ಶನದಲ್ಲಿ "ಪ್ರಗತಿ" ಕ್ಷಿಪಣಿಯನ್ನು ಭಾರತ ಪ್ರದರ್ಶಿಸಿದೆ. DRDO ಅಭಿವೃದ್ಧಿ ಪಡಿಸಿದ್ದ ಪ್ರಹಾರ್ ಕ್ಷಿಪಣಿಯ ಮಾದರಿಯಲ್ಲೇ ಪ್ರಗತಿ ಕ್ಷಿಪಣಿಯನ್ನು ವಿನ್ಯಾಸಗೊಳಿಸಲಾಗಿದೆ.

- ಪ್ರಗತಿ ನೆಲದಿಂದ ನೆಲಕ್ಕೆ ಚಿಮ್ಮುವ ಕ್ಷಿಪಣಿ
- 60-170 ಕಿ.ಮೀ ಹಾರಬಲ್ಲ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ.
- ಭಾರತದ ಮಿತ್ರರಾಷ್ಟ್ರಗಳಿಗೆ ರಫ್ತು ಮಾಡುವ ಉದ್ದೇಶದಿಂದ ಇದನ್ನು ಅಭಿವೃದ್ಧಿಪಡಿಸಲಾಗಿದೆ.
- ದಕ್ಷಿಣಾ ಕೊರಿಯಾದಲ್ಲಿ ಆಯೋಜಿಸಲಾಗಿರುವ "ಸಿಯೊಲ್ ಅಂತರರಾಷ್ಟ್ರೀಯ ಏರೋಸ್ಪೇಸ್ ಮತ್ತು ರಕ್ಷಣಾ ಪ್ರದರ್ಶನ (ADEX-2013)" ದಲ್ಲಿ ಪ್ರಗತಿ ಕ್ಷಿಪಣಿಯನ್ನು ಪ್ರದರ್ಶಿಸಲಾಗಿದೆ.
- ಪ್ರಗತಿ ಕ್ಷಿಪಣಿ ಜೊತೆ ಆಕಾಶ್, ತೇಜಸ್ ಮುಂತಾದ ರಕ್ಷಣಾ ಸಂಬಂಧಿ ಸಾಮಾಗ್ರಿಗಳನ್ನು ಭಾರತ ಪ್ರದರ್ಶಿಸಲಿದೆ.

# ಪರಿಸರ

## ಏಷ್ಯಾ ಮತ್ತು ಯುರೋಪ್ ಖಂಡಗಳನ್ನು ಸಂಪರ್ಕಿಸುವ ಸಮುದ್ರ ಆಳದ ಸುರಂಗ ಮಾರ್ಗ ಉದ್ಘಾಟಿಸಿದ ಟರ್ಕಿ

ವಿಶ್ವದಲ್ಲೇ ಸಮುದ್ರದ ಅತ್ಯಂತ ಆಳಭಾಗದಲ್ಲಿ ನಿರ್ಮಿಸಲಾಗಿರುವ ರೈಲು ಸುರಂಗ ಮಾರ್ಗವನ್ನು ಟರ್ಕಿ ಅನಾವರಣಗೊಳಿಸಿತು. ಒಟ್ಟೊಮನ್ ಸುಲ್ತಾನ್ "ಅಬ್ದುಲ್ ಮೆಜಿದ್" ಅವರು ಸುಮಾರು 150 ವರ್ಷಗಳ ಹಿಂದೆಯೇ ಈ ಸುರಂಗ ಮಾರ್ಗವನ್ನು ನಿರ್ಮಿಸುವ ಕನಸನ್ನು ಕಂಡಿದ್ದರು.

- ಟರ್ಕಿಯ ಬೊಸ್ಪೊರಸ್ (Bosphorus) ಸುರಂಗ ಮಾರ್ಗ ವಿಶ್ವದ ಎರಡು ಪ್ರಮುಖ ಖಂಡಗಳಾದ ಏಷ್ಯಾ ಮತ್ತು ಯುರೋಪ್ ಖಂಡಗಳನ್ನು ಸಂಪರ್ಕಿಸುವ ಪ್ರಮುಖ ಯೋಜನೆಯಾಗಿದೆ.
- ಈ ಸುರಂಗ ಮಾರ್ಗ ಸುಮಾರು 13.6 ಕಿ.ಮೀ ಉದ್ದವಾಗಿದ್ದು, ಬೊಸ್ಪೊರಸ್ ಸಂಧಿ ಮೂಲಕ ಹಾದುಹೋಗುತ್ತದೆ. ಬೊಸ್ಪೊರಸ್ ಸಂಧಿ ಬ್ಲಾಕ್ ಸಮುದ್ರವನ್ನು ಮರ್ಮರ ಸಮುದ್ರದೊಂದಿಗೆ ಸಂಧಿಸುವ ಮೂಲಕ ಇಸ್ತಾಂಬುಲ್ ಅನ್ನು ಏಷ್ಯಾ ಮತ್ತು ಯುರೋಪ್ ನಿಂದ ಬೇರ್ಪಡಿಸುತ್ತದೆ.
- ಈ ಯೋಜನೆ ಪ್ರಸ್ತುತ ಜಾರಿಯಲ್ಲಿರುವ "ಮರ್ಮರೇ" ಯೋಜನೆಯ ಮುಂದುವರೆದ ಭಾಗವಾಗಿದ್ದು, ಏಷ್ಯಾ ಮತ್ತು ಯುರೋಪ್ ಖಂಡವನ್ನು ಸಂಪರ್ಕಿಸುತ್ತದೆ.
- ವಿಶ್ವದಲ್ಲೇ ಸಮುದ್ರದ ಅತ್ಯಂತ ತಳಭಾಗದಲ್ಲಿ ನಿರ್ಮಿಸಲಾಗಿರುವ ಸುರಂಗ ಇದಾಗಿದೆ.

## IUCN " ಹೋಪ್ ಸ್ಪಾಟ್ (Hope Spot)" ಪಟ್ಟಿಗೆ ಸೇರ್ಪಡೆಗೊಂಡ ಅಂಡಮಾನ್ ನಿಕೋಬರ್ ಹಾಗೂ ಲಕ್ಷದ್ವೀಪ

ಅಂಡಮಾನ್ & ನಿಕೋಬರ್ ಹಾಗೂ ಲಕ್ಷದ್ವೀಪ ಪ್ರದೇಶಗಳನ್ನು ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ (IUCN) ನ ಹೋಪ್ ಸ್ಪಾಟ್ (hope spot) ಪಟ್ಟಿಗೆ ಇತ್ತೀಚೆಗೆ ಸೇರ್ಪಡೆಗೊಳಿಸಲಾಯಿತು. IUCN ಮತ್ತು ಸಿಲ್ವಿಯ ಅರ್ಲೆ ಮಿಷನ್ ಜಂಟಿಯಾಗಿ ನಡೆಸಿದ ಅಧ್ಯಯನದ ಬಳಿಕ ಈ ಪ್ರದೇಶವನ್ನು "ಹೋಪ್ ಸ್ಪಾಟ್" ಪಟ್ಟಿಗೆ ಸೇರಿಸಲಾಗಿದೆ.

**ಏನಿದು "ಹೋಪ್ ಸ್ಪಾಟ್"?**

- ಹೋಪ್ ಸ್ಪಾಟ್ ಎಂದರೆ ವೈಶಿಷ್ಟ್ಯ ಜಲಚರಗಳಿಂದ ಕೂಡಿರುವ ಸಾಗರದ ಪ್ರಮುಖ ಭಾಗ.
- ಅಂಡಮಾನ್ ಮತ್ತು ನಿಕೋಬರ್ ಹಾಗೂ ಲಕ್ಷದ್ವೀಪ ಪ್ರದೇಶಗಳು ಹೋಪ್ ಸ್ಪಾಟ್ ಪಟ್ಟಿಗೆ ಸೇರ್ಪಡೆಗೊಂಡ ಭಾರತದ ಮೊದಲ ದ್ವೀಪ ಪ್ರದೇಶಗಳು.
- ವಿಶ್ವದಾದ್ಯಂತ ಈಗಾಗಲೇ 31 ಹೋಪ್ ಸ್ಪಾಟ್ ಗಳನ್ನು ಗುರುತಿಸಲಾಗಿದೆ. ಪ್ರಸ್ತಕ ವರ್ಷದಲ್ಲಿ ಭಾರತದ ಎರಡು ಹೋಪ್ ಸ್ಪಾಟ್ ಗಳೊಂದಿಗೆ ಇನ್ನು 17 ಪ್ರದೇಶಗಳನ್ನು ಸೇರಿಸಲಾಗಿದೆ. ಇದರಿಂದ ಹೋಪ್ ಸ್ಪಾಟ್ ಗಳ ಸಂಖ್ಯೆ 50ಕ್ಕೆ ಏರಿದೆ.

- ಅಂಡಮಾನ್ & ನಿಕೋಬರ್ ಪ್ರದೇಶ ವಿಶೇಷವಾದ ಪ್ರಾಣಿ ಹಾಗೂ ಸಸ್ಯ ವರ್ಗಗಗಳನ್ನು ಒಳಗೊಂಡಿದೆ. ಸುಮಾರು 270 ಕ್ಕೂ ಹೆಚ್ಚು ಪ್ರಾಣಿ ಮತ್ತು ಪಕ್ಷಿ ಪ್ರಬೇಧಗಳನ್ನು ಈ ಭಾಗದಲ್ಲಿ ಗುರುತಿಸಲಾಗಿದ್ದು, ಇವುಗಳ 106 ಪ್ರಭೇದಗಳು ಅಳಿವಿನಂಚಿನಲ್ಲಿವೆ.
- ಇನ್ನು ಲಕ್ಷದ್ವೀಪ ಪ್ರದೇಶ ಹವಳದ ಬಂಡೆಗಳಿಗೆ ಹೆಸರುವಾಸಿಯಾಗಿದ್ದು, ಇವುಗಳ ರಕ್ಷಣೆ ಅತ್ಯಗತೆ ಇದೆ ಎನ್ನಲಾಗಿದೆ.

# ಸುದ್ಧಿಯಲ್ಲಿರುವ ವ್ಯಕ್ತಿಗಳು

## "ಕ್ಯಾಲಿಫೋರ್ನಿಯಾ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ವಿಶ್ವದ ಟಾಪ್ ವಿಶ್ವವಿದ್ಯಾಲಯ

ಕ್ಯಾಲಿಫೋರ್ನಿಯಾ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕ್ಯಾಲ್ಟೆಕ್) ಟೈಮ್ಸ್ ಉನ್ನತ ಶಿಕ್ಷಣ ಜಾಗತಿಕ ಶ್ರೇಣಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಈ ಮೂಲಕ ಸತತ ಮೂರನೇ ಬಾರಿ ಈ ಬ್ರಿಟಿಷ್ ವಿಶ್ವವಿದ್ಯಾಲಯ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ತನ್ನದಾಗಿಸಿಕೊಂಡಿದೆ.

- ಟೈಮ್ಸ್ ಹೊರತಂದಿರುವ ಪಟ್ಟಿಯಲ್ಲಿ ನಂತರದ ನಾಲ್ಕು ಸ್ಥಾನವನ್ನು ಹಾರ್ವಡ್ ವಿವಿ, ಆಕ್ಸಫರ್ಡ್ ವಿವಿ, ಸ್ಟಾನ್ ಫೋರ್ಡ್ ವಿವಿ ಮತ್ತು ಮೆಸ್ಸಾಚುಸೆಟ್ಸ್ ವಿವಿ ಪಡೆದುಕೊಂಡಿವೆ.
- ದೇಶ ವಿದೇಶಗಳ ಒಟ್ಟು 200 ವಿಶ್ವವಿದ್ಯಾಲಯಗಳನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿದೆ. ಸಂಶೋಧನೆ, ಶಿಕ್ಷಣ, ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಸಂಖ್ಯೆ, ಶೈಕ್ಷಣಿಕ ಬೋಧನಾ ಸಂಪನ್ಮೂಲ ಸೇರಿದಂತೆ ಒಟ್ಟು 13 ಮಾನದಂಡಗಳನ್ನು ಇಟ್ಟುಕೊಂಡು ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.
- ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಇರುವ ಈ ಖಾಸಗಿ ವಿಶ್ವವಿದ್ಯಾಲಯ 2,200 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದೆ.

## ಪಟ್ಟಿಯಲ್ಲಿರುವ ಭಾರತದ ವಿವಿಗಳು

- ಟೈಮ್ಸ್ ಹೊರತಂದಿರುವ ಈ ಪಟ್ಟಿಯಲ್ಲಿ ಭಾರತದ ಯಾವ ವಿಶ್ವವಿದ್ಯಾಲಯಗಳು ಟಾಪ್ 200 ರಲ್ಲಿ ಸ್ಥಾನ ಪಡೆದಿಲ್ಲ. ಆದರೆ ಭಾರತದ ಮಟ್ಟಿಗೆ ಹೇಳುವುದಾದರೆ ಪಂಜಾಬ್ ವಿಶ್ವವಿದ್ಯಾಲಯ ಟಾಪ್ ವಿವಿಯಾಗಿ ಹೊರಹೊಮ್ಮಿದೆ. ಇದೇ ಮೊದಲ ಬಾರಿಗೆ ಪಂಜಾಬ್ ವಿವಿ ಪಟ್ಟಿಯಲ್ಲಿ ಸ್ಥಾನಗಳಿಸಿದೆ. 226-250 ಶ್ರೇಣಿಯಲ್ಲಿರುವ ವಿವಿಗಳ ಪೈಕಿ ಪಂಜಾಬ್ ವಿವಿ ಸಹ ಒಂದು.
- ದೆಹಲಿ, ಖಾನ್ ಪುರ್, ಖರಗ್ ಪುರ್ ಮತ್ತು ರೂರ್ಕಿಯ ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳು ಟಾಪ್ 400 ಪಟ್ಟಿಯಲ್ಲಿ ಸ್ಥಾನಪಡೆದಿವೆ. 351-400 ಶ್ರೇಣಿಯಲ್ಲಿರುವ ವಿವಿಗಳ ಸಾಲಿನಲ್ಲಿ ಈ ವಿವಿಗಳು ಸ್ಥಾನಗಳಿಸಿವೆ.

## ವಿಶ್ವದಲ್ಲಿ ಅತಿ ಹೆಚ್ಚು ಜೀತದಾಳುಗಳನ್ನು ಹೊಂದಿರುವ ದೇಶ ಭಾರತ

'ಪುಟಿದೇಳುತ್ತಿರುವ ರಾಷ್ಟ್ರ' ಎಂದು ವಿಶ್ವಮಾನ್ಯ ಆರ್ಥಿಕ ತಜ್ಞರಿಂದ ಹೊಗಳಿಸಿಕೊಳ್ಳುವ ಭಾರತದಲ್ಲಿ ವಿಶ್ವದಲ್ಲೇ ಅತಿ ಹೆಚ್ಚು ಗುಲಾಮರಿದ್ದಾರೆ ಎಂಬ ಆಘಾತಕಾರಿ ಮಾಹಿತಿಯೊಂದು ಬೆಳಕಿಗೆ ಬಂದಿದೆ. ಆಸ್ಟ್ರೇಲಿಯಾ ಮೂಲದ 'ವಾಕ್ ಫ್ರೀ' ಎಂಬ ಸಂಸ್ಥೆ ಜೀತಪದ್ಧತಿ ಅಸ್ತಿತ್ವದಲ್ಲಿರುವ 162 ರಾಷ್ಟ್ರಗಳಲ್ಲಿ ಅಧ್ಯಯನ ನಡೆಸಿದ್ದು, ಈ ವೇಳೆ ಸುಮಾರು 3 ಕೋಟಿ ಗುಲಾಮರು ಪತ್ತೆಯಾಗಿದ್ದಾರೆ. ಆ ಪೈಕಿ ಬಹುತೇಕ ಅರ್ಧದಷ್ಟು ಅಂದರೆ 1.39 ಕೋಟಿ ಮಂದಿಯನ್ನು ಹೊಂದಿರುವ ಭಾರತ, ಅತಿ ಹೆಚ್ಚು ಜೀತದಾಳುಗಳನ್ನು ಹೊಂದಿರುವ ವಿಶ್ವದ ನಂ.1 ರಾಷ್ಟ್ರ ಎಂಬ ಕುಖ್ಯಾತಿಗೆ ಪಾತ್ರವಾಗಿದೆ.

**ಜೀತ ಪದ್ಧತಿ:**

ಬ್ರಿಟಿಷರ ಗುಲಾಮಗಿರಿಯಿಂದ ದೇಶ ವಿಮೋಚನೆ ಪಡೆದು 66 ವರ್ಷಗಳು ಉರುಳಿದ್ದರೂ ಜೀತ ಮಾತ್ರ ದೇಶವನ್ನು ಬಿಟ್ಟಿಲ್ಲ. ಜನಸಂಖ್ಯೆಯಲ್ಲಿ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿರುವ ಚೀನಾಕ್ಕಿಂತ ಭಾರತದಲ್ಲೇ ಅತಿ ಹೆಚ್ಚು ಜೀತದಾಳುಗಳು ಪತ್ತೆಯಾಗಿರುವುದು ಗಮನಾರ್ಹ. ಆಧುನಿಕ ವಿಶ್ವದಲ್ಲಿ ಎಷ್ಟು ಮಂದಿ ಗುಲಾಮರಿದ್ದಾರೆ ಎಂದು ಈ ಹಿಂದೆ ಅಂದಾಜಿಸಿದ್ದಕ್ಕಿಂತ ಹೆಚ್ಚು ಅಂದರೆ 2.98 ಕೋಟಿ ಜೀತದಾಳುಗಳು ಪತ್ತೆಯಾಗಿದ್ದಾರೆ.

**ಗುಲಾಮಗಿರಿಯ ಸ್ವರೂಪ:**

ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರಕಾರ ವಿಶ್ವದಲ್ಲಿ 2.1 ಕೋಟಿ ಜನರು ಬಲವಂತದಿಂದ ಗುಲಾಮರಾಗಿದ್ದಾರೆ. ಪಶ್ಚಿಮ ಆಫ್ರಿಕಾ ಹಾಗೂ ದಕ್ಷಿಣ ಏಷ್ಯಾದ ಕೆಲವು ಭಾಗಗಳಲ್ಲಿ ಹುಟ್ಟುವ ಮೊದಲೇ ಕೆಲವು ವ್ಯಕ್ತಿಗಳು ಜೀತದಾಳುಗಳಾಗಿ ನೇಮಕಗೊಂಡಿರುತ್ತಾರೆ. ವಂಶಪಾರಂಪರ್ಯವಾಗಿ ಅವರಿಗೆ ಗುಲಾಮಗಿರಿ ಬಳುವಳಿಯಾಗಿ ಬಂದಿರುತ್ತದೆ. ಇದು ಕಠೋರ ಸತ್ಯ ಎಂದು ವರದಿ ಹೇಳಿದೆ. ಇನ್ನೂ ಕೆಲವು ಸಂದರ್ಭದಲ್ಲಿ ಸೆರೆ ಹಿಡಿದು ಅಥವಾ ಅಪಹರಣ ಮಾಡಿ ಜೀತದಾಳುಗಳನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಮದುವೆ, ಮೀನುಗಾರಿಕೆ ದೋಣಿಗಳಲ್ಲಿ ಸಂಬಳವಿಲ್ಲದೆ ದುಡಿಮೆ ಅಥವಾ ಮನೆ ಕೆಲಸಗಾರರ ರೂಪದಲ್ಲಿ ದೌರ್ಜನ್ಯವೆಸಗಲಾಗುತ್ತಿದೆ ಅಥವಾ ಮಾರಾಟ ಮಾಡಲಾಗುತ್ತಿದೆ. ಇದಲ್ಲದೆ, ಒಳ್ಳೆಯ ಕೆಲಸ ಅಥವಾ ಶಿಕ್ಷಣ ನೀಡುವ ಸುಳ್ಳು ಭರವಸೆ ನೀಡಿ ತಪ್ಪಿಸಿಕೊಳ್ಳಲಾಗದ ಸನ್ನಿವೇಶ ಸೃಷ್ಟಿಸಿ ಅಮಾಯಕರನ್ನು ಸಿಲುಕಿಸಲಾಗುತ್ತಿದೆ ಎಂದು ವರದಿ ತಿಳಿಸಿದೆ.

**ಗುಲಾಮಗಿರಿ ಅಂದರೇನು?**

ಯಾವುದೇ ವ್ಯಕ್ತಿಯನ್ನು ಬಲವಂತವಾಗಿ ವಶದಲ್ಲಿಟ್ಟುಕೊಳ್ಳುವುದು ಅಥವಾ ನಿಯಂತ್ರಣದಲ್ಲಿಟ್ಟುಕೊಳ್ಳುವುದು, ಅವರಿಗೆ ಸ್ವಾತಂತ್ರ್ಯ ನಿರಾಕರಿಸಿ, ಲೈಂಗಿಕತೆ, ಹಿಂಸೆ ಮೂಲಕ ಅವರಿಂದ ಲಾಭ ಪಡೆಯುವುದನ್ನು ಗುಲಾಮಗಿರಿ ಎಂದು ವರದಿಯಲ್ಲಿ ಬಣ್ಣಿಸಲಾಗಿದೆ. ಬಲವಂತದ ಮದುವೆ, ಮಕ್ಕಳನ್ನು ಅಪಹರಿಸಿ ಯುದ್ಧದಲ್ಲಿ ಬಳಸಿಕೊಳ್ಳುವುದನ್ನೂ ಕೂಡ ಜೀತ ಎಂದು ಪರಿಗಣಿಸಲಾಗಿದೆ.

**ಜಾಗತಿಕ ಗುಲಾಮಗಿರಿ ಸೂಚ್ಯಂಕ:**

- 'ಜಾಗತಿಕ ಗುಲಾಮಗಿರಿ ಸೂಚ್ಯಂಕ 2013' ಎಂಬ ಈ ವರದಿಯಲ್ಲಿ 10 ರಾಷ್ಟ್ರಗಳು ಮೂರನೇ ಒಂದರಷ್ಟು ಜೀತದಾಳುಗಳನ್ನು ಹೊಂದಿವೆ.
- ಇಡೀ ವಿಶ್ವದಲ್ಲೇ ಐಸ್‌ಲ್ಯಾಂಡ್‌ನಲ್ಲಿ ಗುಲಾಮರ ಸಂಖ್ಯೆ 100ಕ್ಕಿಂತ ಕಡಿಮೆ ಇದೆ. ಅದು ಬಿಟ್ಟರೆ ಐರ್ಲೆಂಡ್, ಬ್ರಿಟನ್, ನ್ಯೂಜಿಲೆಂಡ್, ಸ್ವಿಟ್ಜರ್ಲೆಂಡ್, ಸ್ವೀಡನ್, ನಾರ್ವೆ, ಲಕ್ಸಂಬರ್ಗ್, ಫಿನ್‌ಲೆಂಡ್ ಹಾಗೂ ಡೆನ್ಮಾರ್ಕ್‌ನಂತಹ ಶ್ರೀಮಂತರ ರಾಷ್ಟ್ರಗಳಲ್ಲಿ ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಸಂಖ್ಯೆಯ ಗುಲಾಮರಿದ್ದಾರೆ.

**ಯಾವ ದೇಶದಲ್ಲೆಷ್ಟು ಗುಲಾಮರು?**

ಭಾರತ- 1.39 ಕೋಟಿ, ಚೀನಾ- 29 ಲಕ್ಷ, ಪಾಕಿಸ್ತಾನ- 21 ಲಕ್ಷ, ನೈಜೀರಿಯಾ- 7 ಲಕ್ಷ, ಇಥಿಯೋಪಿಯಾ- 6.51 ಲಕ್ಷ, ರಷ್ಯಾ- 5.16 ಲಕ್ಷ, ಥಾಯ್ಲೆಂಡ್- 4.73 ಲಕ್ಷ, ಕಾಂಗೋ- 4.62 ಲಕ್ಷ, ಮ್ಯಾನ್ಮಾರ್- 3.84 ಲಕ್ಷ, ಬಾಂಗ್ಲಾದೇಶ- 3.43 ಲಕ್ಷ.

**ಜನಸಂಖ್ಯೆ ಆಧಾರದಲ್ಲಿ ಗುಲಾಮಗಿರಿ:**

- 38 ಲಕ್ಷ ಜನಸಂಖ್ಯೆ ಹೊಂದಿರುವ ಆಫ್ರಿಕಾದ ಮಾರಿಟಾನಿಯಾ 1.51 ಲಕ್ಷ ಜೀತದಾಳುಗಳನ್ನು ಹೊಂದುವ ಮೂಲಕ ಮೊದಲ ಸ್ಥಾನದಲ್ಲಿದೆ.
- 1 ಕೋಟಿ ಜನಸಂಖ್ಯೆ ಹೊಂದಿರುವ ಹೈಟಿ 2.9 ಲಕ್ಷ ಗುಲಾಮರೊಂದಿಗೆ ಎರಡನೇ ಸ್ಥಾನ ಹಾಗೂ
- 17.9 ಕೋಟಿ ಜನರಿರುವ ಪಾಕಿಸ್ತಾನ 21 ಲಕ್ಷ ಜೀತದಾಳುಗಳೊಂದಿಗೆ ಮೂರನೇ ಸ್ಥಾನದಲ್ಲಿದೆ.
- 120 ಕೋಟಿ ಜನಸಂಖ್ಯೆ ಇರುವ ಭಾರತ 13.9 ಕೋಟಿ ಜೀತದಾಳುಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

**ವ್ಯಾಪಾರ-ವಹಿವಾಟಿಗೆ ದೇಶದಲ್ಲೇ ಬೆಂಗಳೂರು ನಗರ ನಂ.1**

ವ್ಯಾಪಾರ-ವಹಿವಾಟಿಗೆ ಅಚ್ಚುಮೆಚ್ಚು ಎನ್ನಿಸಿಕೊಂಡ ದೇಶದ 21 ನಗರಗಳ ಪೈಕಿ ಬೆಂಗಳೂರು ಮೊದಲ ಸ್ಥಾನ ಗಳಿಸಿದೆ. ಆರ್ಥಿಕ-ಸಾಮಾಜಿಕ ಮತ್ತು ಮೂಲಸೌಕರ್ಯ ಮಾನದಂಡಗಳನ್ನು ಆಧರಿಸಿ ನಡೆಸಲಾದ ಸಮೀಕ್ಷೆಯಲ್ಲಿ ಬೆಂಗಳೂರು ಮೊದಲ ಸ್ಥಾನ ಪಡೆದಿದೆ. ಡಿಟಿಝೀ ಎಂಬ ರಿಯಲ್ ಎಸ್ಟೇಟ್ ಕಂಪನಿ ಮತ್ತು ಗ್ಲೋಬಲ್ ರಿಸ್ಟ್ರಕ್ಚರಿಂಗ್ ಎನ್ವಿರಾನ್‌ಮೆಂಟ್ ಎಂಬ ಸಂಸ್ಥೆಗಳು ನಡೆಸಿದ ಜಂಟಿ ಸಮೀಕ್ಷೆಯಲ್ಲಿ ಈ ಫಲಿತಾಂಶ ಲಭ್ಯವಾಗಿದೆ. ಇನ್ನು ಚೆನ್ನೈ 2ನೇ, ಮುಂಬೈ ಹಾಗೂ ಪುಣೆ ಕ್ರಮವಾಗಿ 3 ಮತ್ತು 4ನೇ ಸ್ಥಾನ ಪಡೆದಿವೆ. ಆದರೆ ರಾಜಧಾನಿ ದಿಲ್ಲಿಗೆ ಹೊಂದಿಕೊಂಡಂತಿರುವ ಉದ್ಯಮ ಕೇಂದ್ರಗಳಾದ ನೊಯ್ಡಾ ಮತ್ತು ಗುರಗಾಂವ್ ಸಮೀಕ್ಷೆಯಲ್ಲಿ ತೀವ್ರ ಹಿನ್ನಡೆ ಕಂಡಿವೆ.

**ಸಮೀಕ್ಷೆ ಮಾನದಂಡಗಳು:**

- ಆರ್ಥಿಕ-ಸಾಮಾಜಿಕ, ಆರೋಗ್ಯ, ಗೃಹ, ಹವಾಮಾನ, ಕಚೇರಿ ಜಾಗದ ಲಭ್ಯತೆ, ನಗರದ ಸಂಸ್ಕೃತಿ, ಸುರಕ್ಷತೆ, ವಿದ್ಯುತ್ ವ್ಯವಸ್ಥೆ, ನೀರು, ಸಾರಿಗೆ, ಬಂಡವಾಳ ಹರಿವಿನಂಥ ಮೊದಲಾದ ಮೂಲಸೌಕರ್ಯ ಮಾನದಂಡಗಳನ್ನು ಪರಿಗಣಿಸಿ ಸಮೀಕ್ಷೆ ನಡೆಸಲಾಗಿದೆ.
- ಇದರಲ್ಲಿ ಬೆಂಗಳೂರು ಎಲ್ಲ ರೀತಿಯಲ್ಲೂ ಸೈ ಎನ್ನಿಸಿಕೊಂಡಿದೆ. ಮುಂಬೈ, ಚೆನ್ನೈ, ಪುಣೆಯಂಥ ಈಗಾಗಲೇ ಅಭಿವೃದ್ಧಿ ಹೊಂದಿದ ಉದ್ಯಮ ನಗರಿಗಳು ನಿರೀಕ್ಷೆಯಂತೆ ಮೊದಲ 10ರ ಪಟ್ಟಿಯಲ್ಲಿವೆ.
- ಇದೇ ವೇಳೆ ಇಂದೋರ್, ಭುವನೇಶ್ವರ, ಕೊಯಮತ್ತೂರು, ನಾಗ್ಪುರದಂಥ ಮೆಟ್ರೋಯೇತರ ನಗರಗಳು ಟಾಪ್ 10 ಪಟ್ಟಿಯಲ್ಲಿ ಅಚ್ಚರಿಯ ರೀತಿಯಲ್ಲಿ ಸ್ಥಾನ ಪಡೆದಿದ್ದು, ಭವಿಷ್ಯದ ಅಚ್ಚುಮೆಚ್ಚಿನ ಔದ್ಯಮಿಕ ನಗರಿಗಳು ಎನ್ನಿಸಿಕೊಂಡಿವೆ' ಎಂದು ಸಮೀಕ್ಷೆ ಕೈಗೊಂಡ ಸಂಸ್ಥೆಗಳು ಹೇಳಿವೆ.
- ಆದರೆ, ದಿಲ್ಲಿಗೆ ಹೊಂದಿಕೊಂಡಿರುವ ಬೃಹತ್ ಔದ್ಯಮಿಕ ನಗರಗಳಾಗಿರುವ ಗುರಗಾಂವ್ 19 ಮತ್ತು ನೊಯ್ಡಾ 17ನೇ ಸ್ಥಾನಕ್ಕೆ ಕುಸಿದಿವೆ. ಇದಕ್ಕೆ ಅಲ್ಲಿನ ವಿದ್ಯುತ್ ಮತ್ತು ಪರಿಸರ ಮಾಲಿನ್ಯ ಸಮಸ್ಯೆ, ಶಾಲಾ-ಕಾಲೇಜು, ಆಸ್ಪತ್ರೆಯಂಥ ಮೂಲ ಸೌಕರ್ಯ ಅಭಾವ ಹಾಗೂ ಸುರಕ್ಷತೆಯ ಕೊರತೆಯೇ ಕಾರಣವಾಗಿದೆ ಎಂದು ಹೇಳಲಾಗಿದೆ.
- ಅಹ್ಮದಾಬಾದ್ 6ನೇ ಸ್ಥಾನ ಪಡೆದಿದೆ. ಆದರೆ ಹೈದರಾಬಾದ್ 12 ಮತ್ತು ಕೋಲ್ಕತಾ 18ನೇ ಸ್ಥಾನಕ್ಕೆ ಕುಸಿದಿವೆ.

**ನಗರಗಳ ಸ್ಥಾನ?**

ಬೆಂಗಳೂರು...1 ಚೆನ್ನೈ..2 ಮುಂಬೈ...3 ಪುಣೆ..4 ಇಂದೋರ್...5 ಭುವನೇಶ್ವರ...6 ಕೊಯಮತ್ತೂರು....7 ಅಹ್ಮದಾಬಾದ್...8 ನಾಗಪುರ....9 ಕೊಚ್ಚಿ...10 ಹೈದರಾಬಾದ್....12 ನೊಯ್ಡಾ...17 ಕೋಲ್ಕತಾ...18 ಗುರಗಾಂವ್...19 ವಿಶಾಖಪಟ್ಟಣ...21

**ರಿಲಯನ್ಸ್ ಸಮೂಹದ ಒಡೆಯ ಮುಖೇಶ್ ಅಂಬಾನಿ ಅತಿ ಶ್ರೀಮಂತ ಭಾರತೀಯ ವ್ಯಕ್ತಿ**

ಅತಿ ಶ್ರೀಮಂತ ಭಾರತೀಯ ಪಟ್ಟವನ್ನು ರಿಲಯನ್ಸ್ ಸಮೂಹದ ಒಡೆಯ ಮುಖೇಶ್ ಅಂಬಾನಿ ತಮ್ಮಲ್ಲೇ ಕಾಯ್ದಿರಿಸಿಕೊಂಡಿದ್ದಾರೆ. ಒಟ್ಟು 1.15 ಲಕ್ಷ ಕೋಟಿ ಆಸ್ತಿ ಹೊಂದಿರುವ ಅಂಬಾನಿ ಭಾರತದಲ್ಲೇ ಅತಿ ಶ್ರೀಮಂತರಾಗಿದ್ದಾರೆ. ತಮ್ಮ ಆಸ್ತಿ ಶೇ.2ರಷ್ಟು ಕಡಿಮೆಯಾದರೂ, ಸತತ ಎರಡನೇ ವರ್ಷ ಈ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

**ಇತರೆ ಸ್ಥಾನಗಳು:**

ಅವರ ನಂತರದ ಸ್ಥಾನವನ್ನು ಭಾರತೀಯ ಮೂಲದ ಲಂಡನ್ ಉದ್ಯಮಿ ಎಲ್.ಎನ್.ಮಿತ್ತಲ್ ಹೊಂದಿದ್ದಾರೆ. ಮಿತ್ತಲ್ ಆಸ್ತಿ ಒಟ್ಟು 96 ಸಾವಿರ ಕೋಟಿಯಾಗಿದ್ದು, ಕಳೆದ ವರ್ಷಕ್ಕಿಂತ ಶೇ.6 ರಷ್ಟು ಕಡಿಮೆಯಾಗಿದೆ ಎಂದು ಪಟ್ಟಿ ಬಿಡುಗಡೆ ಮಾಡಿದ ಚೀನಾ ಮೂಲದ 'ಹರೂನ್' ಭಾರತದ ಶ್ರೀಮಂತರ ಪಟ್ಟಿ ಹೇಳಿದೆ. ಉಳಿದಂತೆ ಟಾಪ್ 10 ಪಟ್ಟಿಯಲ್ಲಿ ವಿಪ್ರೋದ ಅಜೀಂ ಪ್ರೇಮ್‌ಜಿ 4ನೇ ಸ್ಥಾನ (73 ಸಾವಿರ ಕೋಟಿ ರೂ.), ಎಚ್‌ಸಿಎಲ್ ಟೆಕ್ನಾಲಜೀಸ್‌ನ ಶಿವ ನಾಡಾರ್ 5ನೇ ಸ್ಥಾನ (52,460 ಸಾವಿರ ಕೋಟಿ ರೂ.), ಗ್ರಾಸಿಮ್ ಇಂಡಸ್ಟ್ರೀಸ್‌ನ ಕುಮಾರ ಮಂಗಲಂ ಬಿರ್ಲಾ 6ನೇ ಸ್ಥಾನ (51,240 ಕೋಟಿ ರೂ.), ಗೋದ್ರೆಜ್ ಗ್ರೂಪ್‌ನ ಆದಿ ಗೋದ್ರೆಜ್ 7ನೇ ಸ್ಥಾನ (49,410 ಕೋಟಿ ರೂ.) ಆಸ್ತಿ ಹೊಂದಿದ್ದಾರೆ. ಇದೇ ಶ್ರೀಮಂತರ ಯಾದಿಯಲ್ಲಿ ಬಾಲಿವುಡ್ ನಟ ಶಾರುಖ್ ಖಾನ್ 114ನೇ ಸ್ಥಾನ (24.4 ಸಾವಿರ ಕೋಟಿ ರೂ.) ಪಡೆದಿದ್ದಾರೆ.

**ವಿಶಿಷ್ಟ ದಾಖಲೆಯ ಹೊಸ್ತಿಲಲ್ಲಿ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ**

ಉದ್ಯಾನ ನಗರಿಯ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ವಿನೂತನ ದಾಖಲೆ ನಿರ್ಮಿಸುವ ಹೊಸ್ತಿಲಲ್ಲಿದೆ. ಭಾರತ ತಂಡ ಆಡಿದ ಅತಿ ಹೆಚ್ಚು ಏಕದಿನ ಕ್ರಿಕೆಟ್ ಪಂದ್ಯಗಳಿಗೆ ಆತಿಥ್ಯ ವಹಿಸಿದ ಸ್ವದೇಶದ ಕ್ರೀಡಾಂಗಣ ಎಂಬ ಕೀರ್ತಿಗೆ ಪಾತ್ರವಾಗಲಿದೆ. ಇದೇ ನವೆಂಬರ್ ನಲ್ಲಿ ಭಾರತ-ಆಸ್ಟ್ರೇಲಿಯಾ ನಡುವೆ ಇಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಪಂದ್ಯದ ವೇಳೆ ಆ ದಾಖಲೆ ನಿರ್ಮಾಣವಾಗಲಿದೆ. ಅದು ಇಲ್ಲಿ ನಡೆಯಲಿರುವ 19ನೇ ಪಂದ್ಯ.

**ಅತಿ ಹೆಚ್ಚು ಪಂದ್ಯಗಳು:**

ಸದ್ಯಕ್ಕೆ ಕೋಲ್ಕತ್ತದ ಈಡನ್ ಗಾರ್ಡನ್ಸ್ ಹಾಗೂ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಭಾರತ ತಂಡ ಆಡಿದ ತಲಾ 18 ಪಂದ್ಯಗಳಿಗೆ ವೇದಿಕೆಯಾಗಿವೆ. ನವದೆಹಲಿಯ ಫಿರೋಜ್ ಷಾ ಕೋಟ್ಲಾ (17 ಪಂದ್ಯ) ಮೂರನೇ ಸ್ಥಾನದಲ್ಲಿದೆ. 'ಕರ್ನಾಟಕದ ಕ್ರಿಕೆಟ್ ಪಾಲಿಗೆ ಇದೊಂದು ಹೆಮ್ಮೆಯ ಕ್ಷಣ. ಸ್ವದೇಶ ದಲ್ಲಿ ಭಾರತ ತಂಡ ಆಡಿದ ಅತಿ ಹೆಚ್ಚು ಏಕದಿನ ಪಂದ್ಯಗಳನ್ನು ಆಯೋಜಿಸಿದ ಕ್ರೀಡಾಂಗಣ ಎನಿಸಿಕೊಳ್ಳಲು ಖುಷಿಯಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಕಾರ್ಯದರ್ಶಿ ಜಾವಗಲ್ ಶ್ರೀನಾಥ್

ಪ್ರತಿಕ್ರಿಯಿಸಿದ್ದಾರೆ. 'ಇತ್ತೀಚಿನ ವರ್ಷಗಳಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಹೆಚ್ಚಿನ ಪಂದ್ಯಗಳನ್ನು (ಅಂತರರಾಷ್ಟ್ರೀಯ) ಆಯೋಜಿಸಲು ಅವಕಾಶ ದೊರೆಯುತ್ತಿದೆ. ಇದು ಹೀಗೆ ಮುಂದುವರಿಯಬೇಕು' ಎಂದರು.

**ಅದೃಷ್ಟದ ಅಂಗಳ:**

ಈ ಕ್ರೀಡಾಂಗಣದಲ್ಲಿ ಮೊದಲ ಏಕದಿನ ಪಂದ್ಯ ನಡೆದಿದ್ದು 1982ರ ಸೆಪ್ಟೆಂಬರ್ 26 ರಂದು. ಇದುವರೆಗೆ ನಡೆದ 18 ಪಂದ್ಯಗಳಲ್ಲಿ 12 ರಲ್ಲಿ ಭಾರತ ಗೆಲುವು ಸಾಧಿಸಿದೆ. ಇದು ಕೂಡ ಒಂದು ದಾಖಲೆ. ಏಕೆಂದರೆ ಭಾರತ ತಂಡ ಆಡಿದ ಸ್ವದೇಶದ ಯಾವುದೇ ಕ್ರೀಡಾಂಗಣದಲ್ಲಿ ಇಷ್ಟೊಂದು ಗೆಲುವು ಬಂದಿಲ್ಲ. ಫಿರೋಜ್ ಷಾ ಕೋಟ್ಲಾ ಕ್ರೀಡಾಂಗಣದಲ್ಲಿ 11 ಪಂದ್ಯಗಳನ್ನು ಗೆಲ್ಲಲು ಸಾಧ್ಯವಾಗಿದೆ. ಮುಂಬೈನ ವಾಂಖೆಡೆ ಹಾಗೂ ನಾಗಪುರದ ಹಳೆಯ ಕ್ರೀಡಾಂಗಣಗಳಲ್ಲಿ ಭಾರತ ತಲಾ 10 ಪಂದ್ಯಗಳನ್ನು ಗೆದ್ದಿದೆ. ಹಾಗಾಗಿ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಭಾರತ ತಂಡದ ಪಾಲಿನ ಅದೃಷ್ಟದ ಅಂಗಳ. ಜೊತೆಗೆ ಸ್ಮರಣೀಯ ಕ್ಷಣಗಳಿಗೆ ವೇದಿಕೆಯಾಗಿದೆ. 1996ರ ವಿಶ್ವಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಇಲ್ಲಿ ನಡೆದ ಕ್ವಾರ್ಟರ್ ಫೈನಲ್ ರೋಚಕ ಹೋರಾಟಕ್ಕೆ ಕಾರಣವಾಗಿತ್ತು. ಅದರಲ್ಲಿ ಭಾರತ ವಿಜಯಶಾಲಿ ಯಾಗಿತ್ತು. 2011ರ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ಎದುರಿನ ಪಂದ್ಯ ಟೈ ಆಗಿತ್ತು. ಈ ಅಂಗಳದಲ್ಲಿ ಭಾರತ-ಆಸ್ಟ್ರೇಲಿಯಾ ನಡುವೆ ಐದು ಏಕದಿನ ಪಂದ್ಯಗಳು ಜರುಗಿವೆ. ಅದರಲ್ಲಿ ಭಾರತ ಮೂರರಲ್ಲಿ ಗೆಲುವು ಸಾಧಿಸಿದೆ.

**<u>ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ವಿಶ್ವದ 3 ನೇ ಅತ್ಯಂತ ಪ್ರಭಾವಿ ಮಹಿಳೆ</u>**

ವಿಶ್ವದ 72 ಪ್ರಭಾವಿ ನಾಯಕರ ಪಟ್ಟಿಯೊಂದನ್ನು ಅಮೆರಿಕದ ಫೋರ್ಬ್ಸ್ ಮ್ಯಾಗಜೀನ್ ಬಿಡುಗಡೆ ಮಾಡಿದ್ದು, ಅದರಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಗೆ 21 ನೇ ಸ್ಥಾನ ಸಿಕ್ಕಿದೆ. ಸೋನಿಯಾಗಿಂತ ಮೊದಲು ಈ ಪಟ್ಟಿಯಲ್ಲಿರುವ ಮಹಿಳೆಯರೆಂದರೆ ಜರ್ಮನ್ ಪ್ರಧಾನಿ ಆಯಂಜೆಲಾ ಮರ್ಕೆಲ್ ಮತ್ತು ಬ್ರೆಜಿಲ್ ಅಧ್ಯಕ್ಷೆ ಡಿಲ್ಮಾ ರೌಸೇಫ್. ಈ ನಿಟ್ಟಿನಲ್ಲಿ ಸೋನಿಯಾ ವಿಶ್ವದ ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ 3ನೇ ಮಹಿಳೆ ಎಂದು ಗುರುತಿಸಿಕೊಂಡಿದ್ದಾರೆ.

**ಇತರೆ ನಾಯಕರು:**

- ಇನ್ನು ವಿಶ್ವದ ಪ್ರಭಾವಿ ನಾಯಕರಾಗಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೊರಹೊಮ್ಮಿದ್ದಾರೆ.
- 2ನೇ ಸ್ಥಾನ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ ಅವರಿಗೆ ಸಿಕ್ಕಿದೆ.
- ಭಾರತದ ಪ್ರಧಾನಿ ಮನಮೋಹನ್‌ಸಿಂಗ್ ಪಟ್ಟಿಯಲ್ಲಿ 28ನೇ ಸ್ಥಾನ ಪಡೆದಿದ್ದಾರೆ.
- ಇನ್ನು ವಿಶ್ವದ 100 ಪ್ರಭಾವಿ ಮಹಿಳಾ ನಾಯಕರದ್ದೇ ಬೇರೊಂದು ಪಟ್ಟಿ ಬಿಡುಗಡೆ ಮಾಡಲಾಗಿದ್ದು ಅದರಲ್ಲಿ ಸೋನಿಯಾಗೆ 9ನೇ ಸ್ಥಾನ ಸಿಕ್ಕಿದೆ.
- ದಕ್ಷಿಣ ಕನ್ನಡದ ಸೊಸೆ, ಪೆಪ್ಸಿಕೋ ಅಧ್ಯಕ್ಷೆ ಇಂದ್ರಾ ನೂಯಿಗೆ 10ನೇ ಸ್ಥಾನ ಸಿಕ್ಕಿದೆ.
- ಐಸಿಐಸಿಐ ಬ್ಯಾಂಕ್‌ನ ಅಧ್ಯಕ್ಷ ಚಂದ್ರಾ ಕೊಚಾರ್ ಅವರಿಗೆ 65 ಮತ್ತು ಬೆಂಗಳೂರು ಮೂಲದ ಬಯೋಕಾನ್ ಅಧ್ಯಕ್ಷ ಕಿರಣ್ ಮಜುಂದಾರ್ ಷಾ ಅವರಿಗೆ 85ನೇ ಸ್ಥಾನ ಸಿಕ್ಕಿದೆ.

## ಸರ್ದಾರ್ ವಲ್ಲಭಾಯ್ ಪಟೇಲರ ವಿಶ್ವದ ಅತ್ಯಂತ ಎತ್ತರದ ಪ್ರತಿಮೆ ಗುಜರಾತ್ ನಲ್ಲಿ

500ಕ್ಕೂ ಹೆಚ್ಚು ರಾಜಸಂಸ್ಥಾನಗಳನ್ನು ಒಗ್ಗೂಡಿಸಿ 'ಭಾರತ' ಎಂಬ ಬೃಹತ್ ದೇಶ ಅಸ್ತಿತ್ವಕ್ಕೆ ಬರಲು ಕಾರಣಕರ್ತರಾದ 'ಉಕ್ಕಿನ ಮನುಷ್ಯ' ಸರ್ದಾರ್ ವಲ್ಲಭ್ ಭಾಯ್ ಪಟೇಲ್ ಅವರ ದೈತ್ಯ ಪ್ರತಿಮೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿದೆ. ಅಮೆರಿಕದ ವಿಶ್ವಪ್ರಸಿದ್ಧ 'ಲಿಬರ್ಟಿ ಪ್ರತಿಮೆ'ಗಿಂತ ಪಟೇಲರ 'ಏಕತಾ ಮೂರ್ತಿ' (ಸ್ಟಾಚ್ಯೂ ಆಫ್ ಯೂನಿಟಿ)ಯು ಎತ್ತರದಲ್ಲಿ ಎರಡು ಪಟ್ಟು ಹೆಚ್ಚಿರಲಿದ್ದು, ನಿರ್ಮಾಣಗೊಂಡ ಬಳಿಕ 'ವಿಶ್ವದಲ್ಲೇ ಅತ್ಯಂತ ಎತ್ತರದ ಪ್ರತಿಮೆ' ಎಂಬ ಹಿರಿಮೆಗೆ ಭಾಜನವಾಗಲಿದೆ.

**ವಿಶ್ವದ ಎತ್ತರದ ಪ್ರತಿಮೆ:**

- 597 ಅಡಿ (182 ಮೀಟರ್) ಎತ್ತರದ ಈ ಮೂರ್ತಿಯನ್ನು ಬರೋಬ್ಬರಿ 2,500 ಸಾವಿರ ಕೋಟಿ ರೂ. ವೆಚ್ಚದಲ್ಲಿ ಗುಜರಾತ್‌ನ ಬಹೌಚ್‌ನಲ್ಲಿರುವ ಕೆವಾಡಿಯಾದ ಸರ್ದಾರ್ ಸರೋವರ ಡ್ಯಾಂ ಬಳಿ ನಿರ್ಮಿಸಲಾಗುತ್ತದೆ.
- ಬುಡಮಟ್ಟದಿಂದ 787 ಅಡಿ (240 ಮೀಟರ್) ಎತ್ತರವಿರುವ ಈ ಪುತ್ಥಳಿ ನಿರ್ಮಾಣಗೊಂಡ ಬಳಿಕ, ಸದ್ಯದ ಮಟ್ಟಿಗೆ ವಿಶ್ವದ ಅತ್ಯಂತ ಎತ್ತರದ ಪ್ರತಿಮೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಚೀನಾದ 'ಸ್ಪ್ರಿಂಗ್ ಟೆಂಪಲ್ ಬುದ್ಧ'ವನ್ನೂ (420 ಅಡಿ) ಮೀರಿಸಲಿದೆ.
- ನರ್ಮದಾ ನದಿಯ ಮಧ್ಯದಲ್ಲಿ ದ್ವೀಪದಂತೆ ಈ ಪ್ರತಿಮೆಯನ್ನು ನಿರ್ಮಿಸಲಿದ್ದು, ಎರಡು ಹಂತಗಳಲ್ಲಿ ಕಾಮಗಾರಿ ನಡೆಯಲಿದೆ.
- ಶಂಕುಸ್ಥಾಪನೆ ನೆರವೇರಿಸುವ ಮೂಲಕ ಬಿಜೆಪಿ ಪ್ರಧಾನಿ ಅಭ್ಯರ್ಥಿಯೂ ಆಗಿರುವ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅವರು ಕಾಮಗಾರಿಗೆ ಚಾಲನೆ ನೀಡಿದ್ದಾರೆ.
- ಮೊದಲ ಹಂತದಲ್ಲಿ ನದಿಯ ಮಧ್ಯದಲ್ಲಿ ಪ್ರತಿಮೆ ಹಾಗೂ ಅದಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಿಸಲಾಗುತ್ತದೆ. ಸರ್ದಾರ್ ಸರೋವರ ಡ್ಯಾಂ ಕಡೆ ನೋಡುತ್ತಿರುವಂತೆ ಈ ಮೂರ್ತಿಯನ್ನು ನಿರ್ಮಿಸಲುದ್ದೇಶಿಸಲಾಗಿದೆ.
- ಇದಕ್ಕಷ್ಟೇ 2100 ಕೋಟಿ ರೂ. ಖರ್ಚಾಗುವ ಅಂದಾಜಿದೆ. ಉಕ್ಕಿನ ಚೌಕಟ್ಟು, ಸಿಮೆಂಟ್ ಕಾಂಕ್ರಿಟ್ ಬಳಸಿ ತಯಾರಿಸಲಾಗುತ್ತಿರುವ ಈ ಪುತ್ಥಳಿಗೆ ಕಂಚಿನ ಲೇಪನ ಮಾಡಲಾಗುತ್ತದೆ.
- ಪ್ರತಿಮೆಗಾಗಿ ದೇಶಾದ್ಯಂತ ರೈತರಿಂದ ಕಬ್ಬಿಣದ ತುಂಡು ಸಂಗ್ರಹಿಸುತ್ತಿದೆ. 7 ಲಕ್ಷ ಹಳ್ಳಿಗಳಿಂದ ಕಬ್ಬಿಣ ಸಂಗ್ರಹಿಸುವ ಗುರಿ ಹಾಕಿಕೊಂಡಿದೆ, ಪ್ರತಿಯೊಬ್ಬ ರೈತರೂ 250 ಗ್ರಾಂ ಕಬ್ಬಿಣ ನೀಡಿದರೆ ಅದು 5 ಸಾವಿರ ಟನ್‌ನಷ್ಟಾಗುತ್ತದೆ ಎಂಬ ಲೆಕ್ಕವಿಟ್ಟುಕೊಂಡಿದೆ.
- ಎರಡನೇ ಹಂತದಲ್ಲಿ ಸ್ಮಾರಕ ಉದ್ಯಾನ, ಕೃತಕ ಜಲಾಶಯ, ಪ್ರವಾಸಿ ಕೇಂದ್ರ ನಿರ್ಮಿಸುವ ಉದ್ದೇಶವಿದ್ದು ಇದಕ್ಕೆ 400 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ.

**ವಿಶ್ವದ ಅತ್ಯಂತ ಎತ್ತರದ 5 ಪ್ರತಿಮೆಗಳು, ಪುತ್ಥಳಿ ಸ್ಥಳ, ಎತ್ತರ:**

ಸರ್ದಾರ್ ಪಟೇಲ್ ಗುಜರಾತ್ 597 ಅಡಿ, ಸ್ಪ್ರಿಂಗ್ ಟೆಂಪಲ್ ಬುದ್ಧ ಚೀನಾ 420 ಅಡಿ, ಬುದ್ಧ ಮ್ಯಾನ್ಮಾರ್ 381 ಅಡಿ, ಬುದ್ಧ ಜಪಾನ್ 360 ಅಡಿ, ಲಿಬರ್ಟಿ ಪ್ರತಿಮೆ ಅಮೆರಿಕ 305 ಅಡಿ.

**ಇಸ್ರೇಲ್‌ನ ಪ್ರತಿಷ್ಠಿತ ಪರ್ಯಾಯ ಇಂಧನ ಮೂಲ ಪ್ರಶಸ್ತಿಗೆ ಡಾ.ಜಿ.ಕೆ.ಸೂರ್ಯಪ್ರಕಾಶ್ ಆಯ್ಕೆ**

ಪರ್ಯಾಯ ಇಂಧನ ಕ್ಷೇತ್ರದಲ್ಲಿ ಅದ್ವಿತೀಯ ಸಂಶೋಧನೆ ಮಾಡಿದ ಬೆಂಗಳೂರು ಮೂಲದ ಅಮೆರಿಕ ನಿವಾಸಿ ಡಾ.ಜಿ.ಕೆ.ಸೂರ್ಯಪ್ರಕಾಶ್ ಅವರು ಇಸ್ರೇಲ್‌ನ ಪ್ರತಿಷ್ಠಿತ ಪರ್ಯಾಯ ಇಂಧನ ಮೂಲ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು ಅಮೆರಿಕದ ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರ ಪ್ರಾಧ್ಯಾಪಕರಾಗಿರುವ ಡಾ.ಸೂರ್ಯಪ್ರಕಾಶ್, ತಮ್ಮ ಹಿರಿಯ ಸಹೋದ್ಯೋಗಿಯೂ ಆಗಿರುವ ನೊಬೆಲ್ ವಿಜೇತ ಜಾರ್ಜ್.ಎ.ಓಲಾ ಅವರೊಂದಿಗೆ ಪ್ರಶಸ್ತಿ ಹಂಚಿಕೊಳ್ಳಲಿದ್ದಾರೆ.

**ಪಳೆಯುಳಿಕೆ ಇಂಧನ :**

ಪಳೆಯುಳಿಕೆ ಇಂಧನ (Fossil Fuel) ಅರ್ಥಾತ್ ಪೆಟ್ರೋಲಿಯಂ ಉತ್ಪನ್ನಗಳಿಗೆ ಪರ್ಯಾಯವಾಗಿ ಇಂಗಾಲ ಡೈ ಆಕ್ಸೈಡ್ ಆಧಾರಿತ ಮಿಥೆನಾಲ್ ಇಂಧನವನ್ನು ಬಳಸಬಹುದು ಎಂಬುದನ್ನು ಸಂಶೋಧಿಸಿದ್ದಕ್ಕಾಗಿ ಈ ಇಬ್ಬರು ವಿಜ್ಞಾನಿಗಳು ಇಸ್ರೇಲ್ ಪ್ರಶಸ್ತಿ ಗೌರವಕ್ಕೆ ಪಾತ್ರರಾಗಲಿದ್ದಾರೆ.

**ಪ್ರಶಸ್ತಿ ಬಗ್ಗೆ:**

ವಿಜ್ಞಾನದಲ್ಲಿ ಅತ್ಯಂತ ಮುಂದುವರಿದ ದೇಶವಾಗಿರುವ ಇಸ್ರೇಲ್ ಸರ್ಕಾರ, ಪರ್ಯಾಯ ಇಂಧನ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದವರಿಗೆಂದೇ 'ಎರಿಕ್ ಆಯಂಡ್ ಶೀಲಾ ಸ್ಯಾಮ್ಸನ್ ಪ್ರಧಾನಮಂತ್ರಿಗಳ ಪುರಸ್ಕಾರ' ಹೆಸರಿನಲ್ಲಿ ಪ್ರಶಸ್ತಿ ಸಂಸ್ಥಾಪಿಸಿದ್ದು, ಇದರ ಮೊದಲ ಪ್ರಶಸ್ತಿಯೇ ಕನ್ನಡಿಗರೊಬ್ಬರಿಗೆ ಪ್ರಾಪ್ತವಾಗುತ್ತಿರುವುದು ಮತ್ತೊಂದು ವಿಶೇಷ. ಒಟ್ಟಾರೆ 1 ಮಿಲಿಯನ್ ಡಾಲರ್ (6.14 ಕೋಟಿ ರೂ.) ನಗದು ಬಹುಮಾನ ಹೊಂದಿರುವ ಈ ಪ್ರಶಸ್ತಿಯನ್ನು ಇಸ್ರೇಲ್‌ನಲ್ಲಿ ಇದೇ ತಿಂಗಳು ನಡೆಯಲಿರುವ ಬ್ಲೂಮ್ ಬರ್ಗ್ ಇಂಧನ ಆಯ್ಕೆ ಶೃಂಗಸಭೆಯಲ್ಲಿ ಪ್ರದಾನ ಮಾಡಲಾಗುವುದು.

**ಪೆಟ್ರೋಲ್, ಡೀಸೆಲ್‌ಗೆ ಗುಡ್‌ಬೈ- ಮಿಥೆನಾಲ್‌ಗೆ ಜೈ:**

- ಪರ್ಯಾಯ ಇಂಧನ ಮೂಲಗಳ ಬಗ್ಗೆ ಹಲವು ಸಂಶೋಧನೆಗಳು ನಡೆದಿವೆ. ಇವುಗಳಲ್ಲಿ ಬಯೋ ಇಂಧನ, ದ್ರವ ನೈಟ್ರೋಜನ್, ಹೈಡ್ರೋಜನ್ ಬಳಕೆ ಇತ್ಯಾದಿಗಳು ನಡೆದಿವೆ. ಆದರೆ ಯುಎಸ್‌ಸಿಯ ಸಂಶೋಧಕರಾದ ಡಾ.ಪ್ರಕಾಶ್, ಮತ್ತು ಓಲಾ ಅವರು ನಡೆಸಿದ್ದು ಮಿಥೆನಾಲ್ ಉತ್ಪಾದನೆಯ ಮೇಲೆ, ಮಿಥೆನಾಲ್‌ನ್ನು ಅತ್ಯಂತ ಸುಲಭವಾಗಿ ಕಾರ್ಬನ್ ಡೈ ಆಕ್ಸೈಡ್‌ನಿಂದ ಉತ್ಪಾದಿಸುವ ಬಗ್ಗೆ.
- ಮಿಥೆನಾಲ್ ಎಂಬುದು ಆಲ್ಕೋಹಾಲ್/ಮದ್ಯಸಾರ ಮೂಲ ರೂಪ. ಇದು ಎಥೆನಾಲ್ (ಕುಡಿಯುವ ಮದ್ಯ)ಕ್ಕಿಂತ ಹೆಚ್ಚು ಸಿಹಿಯಾಗಿರುತ್ತದೆ. ಆದರೆ ಅತ್ಯಂತ ವಿಷಕಾರಿಯಾದದ್ದು. ಕಳ್ಳಬಟ್ಟಿಯಲ್ಲಿ ಮಿಥೆನಾಲ್ ಬಳಕೆ ಇದೆ. ಮಿಥೆನಾಲ್ ಶಕ್ತಿಯ ಆಕರವಾಗಿದ್ದು, ಎಥೆನಾಲ್ ಅಥವಾ ಗ್ಯಾಸೋಲಿನ್‌ಗಳಿಗಿಂತಲೂ ಪ್ರಯೋಜನಕಾರಿಯಾಗಿ ಬಳಸಬಹುದಾಗಿದೆ.
- ಇಂದು ಪೆಟ್ರೋಲಿಯಂ ಉತ್ಪನ್ನದೊಂದಿಗೆ ಮಿಥೆನಾಲ್ ಹಾಗೂ ಎಥೆನಾಲ್ ಸೇರಿಸಿ ಬಳಸುವ ಪ್ರಯೋಗಗಳು ನಡೆದಿದ್ದರೂ, ಮಿಥೆನಾಲ್ ಅನ್ನೇ ಇಂಧನವಾಗಿ ಬಳಸುವ ಪರಿಪಾಠವಿಲ್ಲ.
- 1989ರಲ್ಲಿ ಯುಎಸ್‌ಸಿ ಈ ಕುರಿತ ಸಂಶೋಧನೆಯಲ್ಲಿ ತೊಡಗಿದೆ. ಇದರಲ್ಲಿ ಮಾಲಿನ್ಯ ಪ್ರಮಾಣ ಅತ್ಯಂತ ಕಡಿಮೆಯಾಗಿದೆ. ಅಲ್ಲದೇ ಆರ್ಥಿಕವಾಗಿ ವೆಚ್ಚದಾಯಕವಲ್ಲ. ಗ್ಯಾಸೋಲಿನ್, ಎಥೆನಾಲ್‌ಗಿಂತ ಹೆಚ್ಚು ಪರಿಣಾಮಕಾರಿ. ಇದರ ಬಳಕೆಯಿಂದ ಆಹಾರ ಬೆಳೆಗಳ ಏರಿಕೆಯ ಭೀತಿಯೂ ಇರುವುದಿಲ್ಲ.

**ಸೂರ್ಯಪ್ರಕಾಶ್ ಬಗ್ಗೆ:**

ಬೆಂಗಳೂರು ಮೂಲದ ಸೂರ್ಯಪ್ರಕಾಶ್ ಡಾ.ಜಿ.ಕೆ.ಸೂರ್ಯಪ್ರಕಾಶ್ ಮೂಲತಃ ಬೆಂಗಳೂರಿನವರು. ಕನ್ನಡಿಗರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದ ಅವರು, ಪ್ರತಿಷ್ಠಿತ ಐಟಿಐ ಮದರಾಸು ಕಾಲೇಜಿನಲ್ಲಿ ರಸಾಯನ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಬಳಿಕ ಲಾಸ್ ಏಂಜಲೀಸ್‌ನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ ಪದವಿ ಪಡೆದಿದ್ದು, ಅದೇ ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರ ಪ್ರಾಧ್ಯಾಪಕರಾಗಿ ಉದ್ಯೋಗ ಆರಂಭಿಸಿದ್ದರು. ಬಳಿಕ ಯುಎಸ್‌ಸಿ ಸಂಶೋಧನಾ ಕೇಂದ್ರದಲ್ಲಿ ಸಂಶೋಧಕರು, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಪರ್ಯಾಯ ಇಂಧನ ಮೂಲದ ಸಂಶೋಧನೆಗಳಲ್ಲಿ ನಿರಂತರ ಭಾಗಿಯಾಗಿದ್ದಾರೆ.

**ಏನಿವರ ಸಾಧನೆ?**

ಕಾರ್ಬನ್ ಡೈ ಆಕ್ಸೈಡ್ ಮೂಲಕ ಮಿಥೆನಾಲ್ ಉತ್ಪಾದಿಸಬಹುದು ಹಾಗೂ ಮಿಥೆನಾಲನ್ನೇ ನೇರವಾಗಿ ಇಂಧನವಾಗಿ ಬಳಸಬಹುದು ಎಂಬುದು ಇವರ ಸಂಶೋಧನೆಯ ಮೂಲ ತಾತ್ಪರ್ಯ. ಈ ವರೆಗೆ ಮಿಥೆನಾಲ್ ಉತ್ಪಾದಿಸಲು ಸ್ವತಃ ಪೆಟ್ರೋಲಿಯಂ ಬೇಕಿತ್ತು ಅಥವಾ ಜೈವಿಕ ರೀತಿಯಿಂದ ತಯಾರಿಸಬೇಕಿತ್ತು. ಅಂದರೆ, ಮರದ ಬೇಡವಾದ ತೊಗಟೆ, ಘನ ನಗರ ತ್ಯಾಜ್ಯಗಳು, ಕೃಷಿ ತ್ಯಾಜ್ಯಗಳು ಅಥವಾ ಕಚ್ಚಾ ವಸ್ತುಗಳ ಮೂಲಕ ಮಿಥೆನಾಲ್ ತಯಾರಿಸಬೇಕಿತ್ತು. ಇದು ಸಾಂಪ್ರದಾಯಿಕ ವಿಧಾನ ಆದರೆ, ಸೂರ್ಯಪ್ರಕಾಶ್ ಹಾಗೂ ಓಲಾ ಅವರುಗಳು ಕಾರ್ಬನ್ ಡೈ ಆಕ್ಸೈಡ್ ಮೂಲಕ ಮಿಥೆನಾಲ್ ಉತ್ಪಾದಿಸುವ ಬಗ್ಗೆ ಕಂಡುಹಿಡಿದಿದ್ದು, ಪರ್ಯಾಯ ಇಂಧನ ಮೂಲವಾಗಿ ಬಳಸುವುದನ್ನು ಶೋಧಿಸಿದ್ದಾರೆ.

## ಬೆಂಗಳೂರು ನಗರ ಇನ್ನು ಮುಂದೆ 'ಕಾಲೇಜುಗಳ ನಗರಿ'

ಉದ್ಯಾನನಗರಿ, ಸಿಲಿಕಾನ್ ಸಿಟಿ ಎಂದು ಕರೆಯುವ ಬೆಂಗಳೂರು ನಗರವನ್ನು ಇನ್ನು ಮುಂದೆ 'ಕಾಲೇಜುಗಳ ನಗರಿ' ಎಂದೂ ಕರೆಯಬಹುದು. ಏಕೆಂದರೆ, ಭಾರತದಲ್ಲಿರುವ ಕಾಲೇಜುಗಳ ಪೈಕಿ ರಾಜಧಾನಿ ಬೆಂಗಳೂರಿನಲ್ಲಿರುವ ಕಾಲೇಜುಗಳ ಸಂಖ್ಯೆಯೇ ಹೆಚ್ಚು. ಕೇಂದ್ರ ಸರ್ಕಾರ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಇಲಾಖೆ(ಎಂಎಚ್‌ಆರ್‌ಡಿ) ನಡೆಸಿರುವ 2010-11ನೇ ಸಾಲಿನ ಉನ್ನತ ಶಿಕ್ಷಣದ ಸಮೀಕ್ಷೆಯಲ್ಲಿ ಈ ವಿಷಯ ತಿಳಿದು ಬಂದಿದೆ.

**ಅತೀ ಹೆಚ್ಚು ಕಾಲೇಜುಗಳು:**

ರಾಜ್ಯದಲ್ಲಿ ಒಟ್ಟು 3098 ಕಾಲೇಜುಗಳಿದ್ದು, ಈ ಪೈಕಿ ರಾಜಧಾನಿಯಲ್ಲಿ 885 ಕಾಲೇಜುಗಳಿವೆ. ಎರಡು ಮತ್ತು ಮೂರನೇ ಸ್ಥಾನವನ್ನು ಹೈದರಾಬಾದ್ ಮತ್ತು ಜೈಪುರ ಪಡೆದುಕೊಂಡಿದೆ.

**ಏನಿದು ಸಮೀಕ್ಷೆ:**

ಕೇಂದ್ರ ಸರ್ಕಾರ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಇಲಾಖೆ(ಎಂಎಚ್‌ಆರ್‌ಡಿ) ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ(ಎಐಎಸ್‌ಎಚ್‌ಇ) ನಡೆಸಿದೆ. ಕೇವಲ ಎಂಎಚ್‌ಆರ್‌ಡಿ ಅಲ್ಲದೆ, ಎನ್‌ಐಸಿ ಮತ್ತು ಎನ್‌ಯುಇಪಿಎ, ಯುಜಿಸಿ ಸಹಯೋಗದೊಂದಿಗೆ ವಿಶ್ವವಿದ್ಯಾಲಯ, ಕಾಲೇಜುಗಳು ಮತ್ತು ವಿದ್ಯಾಸಂಸ್ಥೆಗಳು ಎಂಬ ಮೂರು ವಿಭಾಗದಲ್ಲಿ ಸಮೀಕ್ಷೆ ನಡೆಸಿದೆ.

**ಮೂಲಸೌಕರ್ಯ ಕಾಯ್ದುಕೊಳ್ಳಲಿ:**

ಬೆಂಗಳೂರಿನಲ್ಲಿ ಕಾಲೇಜಿನ ಸಂಖ್ಯೆಗಳೇನೋ ಹೆಚ್ಚಾಗಿಯೇ ಇದೆ. ಆದರೆ, ಕಾಲೇಜಿನ ಮೂಲಸೌಕರ್ಯದ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎಂಬುವುದನ್ನು ಕಾಲೇಜುಗಳನ್ನು ತೆರೆಯಲು ಅನುಮತಿ ನೀಡುತ್ತಿರುವ ವಿಶ್ವವಿದ್ಯಾಲಯಗಳು ಚಿಂತಿಸಬೇಕಿದೆ. ಕಾರಣ ಇಷ್ಟೆ, ರಾಜ್ಯದಲ್ಲಿರುವ 677 ಪ್ರಥಮ ದರ್ಜೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಕಾಲೇಜುಗಳ ಪೈಕಿ ಶೇ.50ರಷ್ಟು ಕಾಲೇಜುಗಳಿಗೆ ಮೂಲಸೌಕರ್ಯವೇ ಇಲ್ಲದಂತಾಗಿದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ, ಬೆಂಗಳೂರು ವಿಶ್ವವಿದ್ಯಾಲಯ ಇತ್ತೀಚೆಗಷ್ಟೇ ನಡೆಸಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮೂಲಸೌಕರ್ಯವಿಲ್ಲದ 11 ಕಾಲೇಜುಗಳ ಸಂಯೋಜನೆ ರದ್ದುಗೊಳಿಸಿದ್ದು.

**ವಿದ್ಯಾರ್ಥಿಗಳ ಪ್ರವೇಶ:**

ಶೇ.54.3 ರಷ್ಟು ಕಾಲೇಜುಗಳು ಗ್ರಾಮೀಣ ಭಾಗದಲ್ಲಿದ್ದರೆ, ಶೇ.9.1ರಷ್ಟು ಕಾಲೇಜುಗಳು ಹೆಣ್ಣು ಮಕ್ಕಳಿಗೆ ಮಾತ್ರವೇ ಮೀಸಲಾಗಿವೆ. ಬಹುತೇಕ ಕಾಲೇಜುಗಳು ಕಡಿಮೆ ವಿದ್ಯಾರ್ಥಿಗಳ ಸಂಖ್ಯೆ ಹೊಂದಿವೆ. ಶೇ.30ರಷ್ಟು ಕಾಲೇಜುಗಳು 100ರಷ್ಟು ಪ್ರವೇಶ ಹೊಂದಿದ್ದರೆ, 100ರಿಂದ 500 ವಿದ್ಯಾರ್ಥಿಗಳನ್ನು ಹೊಂದಿರುವ ಕಾಲೇಜುಗಳ ಸಂಖ್ಯೆ ಶೇ.36ರಷ್ಟಿದೆ. ಕೇವಲ 4 ಕಾಲೇಜುಗಳು ಮಾತ್ರವೇ 3000ಕ್ಕೂ ಹೆಚ್ಚಿನ ವಿದ್ಯಾರ್ಥಿಗಳನ್ನು ಹೊಂದಿವೆ.

## ವಿಶಿಷ್ಟ ಕಂಠದ ಪಾಕಿಸ್ತಾನದ ಖ್ಯಾತ ಜನಪದ ಗಾಯಕಿ ರೇಷ್ಮಾ ಇನ್ನಿಲ್ಲ

'ದಮಾ ದಮ್ ಮಸ್ತ್ ಕಲಂದರ್', 'ಲಂಬಿ ಜುದಾಯಿ' ಗಳಂತಹ ಜನಪ್ರಿಯ ಹಿಂದಿ ಚಿತ್ರಗೀತೆಗಳನ್ನು ಗ್ರಾಮ್ಯ ಸೊಬಗಿನ ವಿಶಿಷ್ಟ ಕಂಠದ ಮೂಲಕ ಹಾಡಿದ್ದ ಪಾಕಿಸ್ತಾನದ ಖ್ಯಾತ ಜನಪದ ಗಾಯಕಿ ರೇಷ್ಮಾ (63) ಇನ್ನಿಲ್ಲ. ತಮ್ಮ ವಿಶಿಷ್ಟ ಸ್ವರದ ಮೂಲಕ ಭಾರತೀಯ ಉಪಖಂಡದ ಸಂಗೀತ ಪ್ರಿಯರನ್ನು ಮಂತ್ರಮುಗ್ಧರಾಗಿಸಿದ್ದ ರೇಷ್ಮಾ ಗಂಟಲು ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಕೆಲ ಸಮಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕಳೆದ ಒಂದು ತಿಂಗಳಿನಿಂದ ಕೋಮಾ ಸ್ಥಿತಿಗೆ ತಲುಪಿದ್ದ ಅವರು ಲಾಹೋರ್‌ನಲ್ಲಿ ನಿಧನರಾದರು.

**ರೇಷ್ಮಾ ಜೀವನಯಾನ:**

1947ರ ಆಸುಪಾಸಿನಲ್ಲಿ ರಾಜಸ್ತಾನದ ಬಿಕಾನೇರ್‌ನ ಬಂಜಾರ ಜನಾಂಗದಲ್ಲಿ ಜನಿಸಿದ್ದ ರೇಷ್ಮಾ ಅವರ ಕುಟುಂಬ ದೇಶ ವಿಭಜನೆ ಬಳಿಕ ಕರಾಚಿಗೆ ವಲಸೆ ಹೋಗಿ ಅಲ್ಲಿಯೇ ನೆಲೆ ಕಂಡುಕೊಂಡಿತ್ತು. ಆದರೆ, ಅವರ ಗಾಯನಕ್ಕೆ ಎರಡು ದೇಶಗಳ ಗಡಿ ಎಂದೂ ಅಡ್ಡಿಯಾಗಲಿಲ್ಲ. 'ದೇಶದ ಗಡಿಗಳ ಬಗ್ಗೆ ನಾನು ಎಂದೂ ಯೋಚಿಸಿಲ್ಲ. ಏಕೆಂದರೆ, ಒಬ್ಬ ಕಲಾವಿದ ಎಲ್ಲರಿಗೂ ಸೇರಿದವನಾಗಿರುತ್ತಾನೆ' ಎಂದು ಒಮ್ಮೆ ರೇಷ್ಮಾ ಅವರೇ ಹೇಳಿದ್ದರು.

**ಹಾಡುಗಾರಿಕೆ ಪಯಣ:**

- ಸುಭಾಷ್ ಘಾಯ್ ನಿರ್ಮಾಣದ 'ಹೀರೊ' (1983) ಚಿತ್ರದಲ್ಲಿ ರೇಷ್ಮಾ ಅವರು ಹಾಡಿದ್ದ 'ಲಂಬಿ ಜುದಾಯಿ' ಹಾಡಂತೂ ಅನೇಕ ವರ್ಷಗಳ ಕಾಲ ಎಲ್ಲರ ಬಾಯಲ್ಲೂ ಗುನುಗುತ್ತಿತ್ತು.
- ರೇಷ್ಮಾ ಕಂಠಸಿರಿ ಮೆಚ್ಚಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಅವರಿಗೆ ಆಮಂತ್ರಣ ನೀಡಿದ್ದರು.

- ರೇಷ್ಮಾ ಸಂಗೀತದ ಬಗ್ಗೆ ಔಪಚಾರಿಕ ಶಿಕ್ಷಣ ಪಡೆಯದಿದ್ದರೂ ಗಾಯನ ಕ್ಷೇತ್ರದಲ್ಲಿ ಹೆಮ್ಮರವಾಗಿ ಬೆಳೆದರು.
- 1960ರಲ್ಲಿ 12ರ ಬಾಲಕಿಯಾಗಿದ್ದ ರೇಷ್ಮಾ ಷಹಬಾಜ್ ಕಲಂದರ್ ಸೂಫಿ ದರ್ಗಾದಲ್ಲಿ ಹಾಡಿದ್ದನ್ನು ಕೇಳಿದ ಪಾಕಿಸ್ತಾನದ ದೂರದರ್ಶನ ಮತ್ತು ರೇಡಿಯೊ ನಿರ್ಮಾಪಕರೊಬ್ಬರು ಮೊದಲ ಬಾರಿಗೆ ಇವರಿಗೆ ಅವಕಾಶ ನೀಡಿದರು.
- ಆಗ ಪಾಕಿಸ್ತಾನ ರೇಡಿಯೊದಲ್ಲಿ ಬಿತ್ತರಗೊಂಡ 'ಲಾಲ್ ಮೇರಿ' ಹಾಡು ರೇಷ್ಮಾ ಅವರನ್ನು ರಾತ್ರೋರಾತ್ರಿ ಖ್ಯಾತಿಯ ಶಿಖರಕ್ಕೆ ಏರಿಸಿತು.
- 1980ರಲ್ಲಿ ಭಾರತ ಮತ್ತು ಪಾಕಿಸ್ತಾನದ ಕಲಾವಿದರಿಗೆ ಉಭಯ ದೇಶಗಳಲ್ಲಿ ಕಾರ್ಯಕ್ರಮ ನಡೆಸಿಕೊಡಲು ಅವಕಾಶ ಕಲ್ಪಿಸಿದ ಮೇಲೆ ಭಾರತದಲ್ಲೂ ಹಲವು ಕಾರ್ಯಕ್ರಮ ನೀಡಿದ್ದರು.

**ಭುವನೇಶ್ವರ್ ಮತ್ತು ಇಂಪಾಲ್ ವಿಮಾನ ನಿಲ್ದಾಣಗಳಿಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾನ್ಯತೆ**

ಒಡಿಶಾದ ಭುವನೇಶ್ವರ್ ಮತ್ತು ಮಣಿಪುರದ ಇಂಪಾಲ್ ವಿಮಾನ ನಿಲ್ದಾಣಗಳನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ಮೂಲಕ ಒಡಿಶಾ ಮತ್ತು ಮಣಿಪುರ ರಾಜ್ಯದ ಜನರ ಬಹುದಿನದ ಬೇಡಿಕೆ ಕೊನೆಗೂ ಈಡೇರಿದಂತಾಗಿದೆ. ಕೇಂದ್ರ ಸರ್ಕಾರ ಈ ನಿರ್ಧಾರದಿಂದ ಈ ರಾಜ್ಯಗಳಲ್ಲಿ ಪ್ರವಾಸೋದ್ಯಮ ಉತ್ತೇಜನ, ಆರ್ಥಿಕ ಬೆಳವಣಿಗೆ ಹಾಗೂ ವಿದೇಶಗಳೊಂದಿಗೆ ಉತ್ತಮ ಸಂಪರ್ಕ ಸಾಧಿಸಲು ಅನುಕೂಲವಾಗಲಿದೆ.

**ಹಿನ್ನೆಲೆ:**

**ಬಿಜು ಪಟ್ನಾಯಕ್ ಅಥವಾ ಭುವನೇಶ್ವರ್ ವಿಮಾನ ನಿಲ್ದಾಣ** : ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಡಿ ಕಾರ್ಯನಿರ್ವಹಿಸುತ್ತಿರುವ ಬಿಜು ಪಟ್ನಾಯಕ್ ನಿಲ್ದಾಣ "ಡಿ" ದರ್ಜೆಯಡಿ ಗುರುತಿಸಲಾಗಿದೆ. ರಾತ್ರಿ ವೇಳೆಯಲ್ಲೂ ಕಾರ್ಯನಿರ್ವಹಿಸಬಲ್ಲ ಈ ನಿಲ್ದಾಣ ಸುಮಾರು 800 ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ಇತ್ತೀಚೆಗೆ ಹೊಸ ಟರ್ಮಿನಲ್ ಗಳನ್ನು ನಿರ್ಮಿಸುವ ಮೂಲಕ ನೂತನವಾಗಿ ವಿನ್ಯಾಸಗೊಳಿಸಲಾಗಿದೆ.

**ಇಂಪಾಲ್ ವಿಮಾಣ ನಿಲ್ದಾಣ:** ಇಂಪಾಲ್ ವಿಮಾನ ನಿಲ್ದಾಣ ಭಾರತೀಯ ವಿಮಾನ ನಿಯಂತ್ರಣ ಪ್ರಾಧಿಕಾರದಡಿ "ಸಿ" ವರ್ಗದಡಿ ಕಾರ್ಯನಿರ್ವಹಿಸುತ್ತಿದೆ. ಇಂಪಾಲ್ ನಿಲ್ದಾಣ ಸರ್ವಕಾಲಿಕ ನಿಲ್ದಾಣವಾಗಿದ್ದು, ಎಲ್ಲಾ ಕಾಲದಲ್ಲೂ ಸೇವೆಯನ್ನು ಒದಗಿಸಲಿದೆ.

**ಸುಭಾಷ್ ಗೋಸ್ವಾಮಿ: ಇಂಡೋ-ಟಿಬಿಟಿಯನ್ ಬಾರ್ಡರ್ ಪೊಲೀಸ್ (ITBP) ನ ನೂತನ ಡೈರೆಕ್ಟರ್**

ಹಿರಿಯ ಐಪಿಎಸ್ ಅಧಿಕಾರಿ ಸುಭಾಷ್ ಗೋಸ್ವಾಮಿ ಅವರನ್ನು ಇಂಡೋ-ಟಿಬಿಟಿಯನ್ ಬಾರ್ಡರ್ ಆಫ್ ಪೊಲೀಸ್ ನ ಡೈರೆಕ್ಟರ್ ಜನರಲ್ ಆಗಿ ನೇಮಕ ಮಾಡಲಾಗಿದೆ. 1977 ನ ಬ್ಯಾಚ್ ನ ಐಪಿಎಸ್ ಅಧಿಕಾರಿಯಾಗಿರುವ ಗೋಸ್ವಾಮಿಯವರು ಐಟಿಬಿಪಿ ಯ 30 ನೇ ಡೈರೆಕ್ಟರ್ ಜನರಲ್ ಎನಿಸಿದ್ದಾರೆ.

- ಸದ್ಯ ಗೋಸ್ವಾಮಿ ಅವರು "ಸರ್ದಾರ್ ವಲ್ಲಭಾಯಿ ಪಟೇಲ್ ನ್ಯಾಷನಲ್ ಪೊಲೀಸ್ ಅಕಾಡೆಮಿ"ಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಗೋಸ್ವಾಮಿ ಅವರ ಅಧಿಕಾರ ಅವಧಿಯು ಕರ್ತವ್ಯ ವಹಿಸಿಕೊಂಡ ದಿನದಿಂದ ಡಿಸೆಂಬರ್ 31, 2014 ರ ವರೆಗೆ ಇರಲಿದೆ.

**ಐಟಿಬಿಪಿ:**

- 1962 ರಲ್ಲಿ ಚೀನಾ ಭಾರತದ ಮೇಲೆ ನಡೆಸಿದ ಅತಿಕ್ರಮಣ ದಾಳಿ ಹಿನ್ನೆಲೆಯಲ್ಲಿ ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ ಅನ್ನು ಸ್ಥಾಪಿಸಲಾಯಿತು. ಇತ್ತೀಚೆಗೆ ಈ ಸಂಸ್ಥೆ ತನ್ನ 50ನೇ ವರ್ಷದ ಸಂಸ್ಥಾಪನ ದಿನವನ್ನು ಆಚರಿಸಿಕೊಂಡಿತು.
- ಭಾರತ ಮತ್ತು ಚೀನಾ ನಡುವಿನ 3,488 ಕಿ.ಮೀ ಗಡಿ ವ್ಯಾಪ್ತಿಯನ್ನು ಕಾಯುವ ಕೆಲಸವನ್ನು ಸಮರ್ಥವಾಗಿ ಐಟಿಬಿಪಿ ನಿರ್ವಹಿಸುತ್ತಿದೆ. ಇತ್ತೀಚೆಗೆ ಉತ್ತರಖಂಡದಲ್ಲಿ ಸಂಭವಿಸಿದ ಪ್ರವಾಹದ ವೇಳೆ ಐಟಿಬಿಪಿ ಸಿಬ್ಬಂದಿ ಪ್ರಾಣವನ್ನು ಪಣವಿಟ್ಟು ರಕ್ಷಣ ಕಾರ್ಯದಲ್ಲಿ ತೊಡಗಿದ್ದನ್ನು ಇಲ್ಲಿ ಸ್ಮರಿಸಬಹುದು.
- ಕೇವಲ ಗಡಿ ಕಾವಲು ಅಲ್ಲದೇ, ನಕ್ಸಲ್ ವಿರೋಧಿ ಚಟುವಟಿಕೆ, ವಿಐಪಿಗಳಿಗೆ ರಕ್ಷಣೆ ನೀಡುವ ಕೆಲಸದಲ್ಲೂ ಇದು ಸೈ ಎನಿಸಿಕೊಂಡಿದೆ.

**ಫೋರ್ಬ್ಸ್ ಪ್ರಭಾವಿ ನಾಯಕರ ಪಟ್ಟಿ: ಪುಟಿನ್ ಗೆ ಅಗ್ರಸ್ಥಾನ**

ಅಮೆರಿಕಾದ ಫೋರ್ಬ್ ನಿಯತಕಾಲಿಕೆ ಹೊರತಂದಿರುವ ವಿಶ್ವದ ಪ್ರಭಾವಿ ನಾಯಕರ ಪಟ್ಟಿಯಲ್ಲಿ ರಷ್ಯಾದ ಅಧ್ಯಕ್ಷ "ವ್ಲಾದಿಮಿರ್ ಪುಟಿನ್" ಅವರು ಅತ್ಯಂತ ಪ್ರಭಾವಿ ನಾಯಕರಾಗಿ ಹೊರಹೊಮ್ಮಿದ್ದಾರೆ. ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ ಅವರನ್ನು ಎರಡನೇ ಸ್ಥಾನಕ್ಕೆ ತಳ್ಳಿ ಪುಟಿನ್ ಈ ಸ್ಥಾನ ಪಡೆದಿರುವುದು ವಿಶೇಷವೇ ಸರಿ.

- ಮೂರು ವರ್ಷಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಅಮೆರಿಕಾದ ಅಧ್ಯಕ್ಷರು ಮೊದಲ ಸ್ಥಾನದಿಂದ ವಂಚಿತರಾಗಿದ್ದಾರೆ.
- ಮೊದಲೆರಡು ಸ್ಥಾನಗಳು ರಷ್ಯಾ ಮತ್ತು ಅಮೆರಿಕಾದ ಪಾಲಾದರೆ, ವಿಶ್ವದ ಮೂರನೇ ಅತ್ಯಂತ ಪ್ರಭಾವಿ ವ್ಯಕ್ತಿಚೀನಾದ ಅಧ್ಯಕ್ಷ "ಕ್ಸಿ ಜಿನ್ ಪಿಂಗ್".
- ಕ್ರೈಸ್ತ ಧರ್ಮದ ಗುರು "ಪೋಪ್ ಫ್ರಾನ್ಸಿಸ್" ಅವರು ನಾಲ್ಕನೇ ಸ್ಥಾನವನ್ನು ಅಲಂಕರಿಸಿದರೆ, ಜರ್ಮನಿಯ ಏಂಜೆಲಾ ಮಾರ್ಕೆಲ್ ಐದನೇ ಸ್ಥಾನದಲ್ಲಿದ್ದಾರೆ.

**ಸೋನಿಯಾಗೆ ಮೂರನೇ ಸ್ಥಾನ**

- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ವಿಶ್ವದ ಮೂರನೇ ಅತ್ಯಂತ ಪ್ರಭಾವಿ ಮಹಿಳೆ. ಜರ್ಮನಿಯ ಏಂಜೆಲಾ ಮಾರ್ಕೆಲ್ ಹಾಗೂ ಬ್ರೆಜಿಲ್ ನ ದಿಲ್ಮಾ ರೂಸೆಫ್ ನಂತರ ಪ್ರಭಾವಿ ಮಹಿಳೆಯೆಂದರೆ ಸೋನಿಯಾ.
- ವಿಶ್ವ ಪ್ರಭಾವಿ ನಾಯಕರ ಪಟ್ಟಿಯಲ್ಲಿ ಸೋನಿಯಾ 21 ನೇ ಸ್ಥಾನ ಪಡೆದಿದ್ದಾರೆ. ಆದರೆ ಮಹಿಳೆಯರನ್ನು ಗಣನೆಗೆ ತೆಗೆದುಕೊಂಡರೆ ಗಾಂಧಿ ಕುಟುಂಬದ ಸದಸ್ಯೆ ಮೂರನೇ ಸ್ಥಾನದಲ್ಲಿದ್ದಾರೆ.

**ವಿಶ್ವ ಸಮೃದ್ಧಿ ಸೂಚ್ಯಂಕ: ಭಾರತಕ್ಕೆ 106 ನೇ ಸ್ಥಾನ**

ಲಂಡನ್ ಮೂಲದ "ಲೆಗಟಮ್ ಇನ್ ಸ್ಟಿಟ್ಯೂಟ್" ಬಿಡುಗಡೆಗೊಳಿಸಿರುವ "ವಿಶ್ವ ಸಮೃದ್ಧಿ ಸೂಚ್ಯಂಕ (World Prosperity Index)" ನಲ್ಲಿ ಭಾರತ 106 ನೇ ಸ್ಥಾನವನ್ನು ಪಡೆದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಐದು ಸ್ಥಾನ ಕುಸಿತ ಕಂಡಿದೆ. ಭಾರತದ ಕಳಪೆ ಸಾಧನೆಗೆ ಸುರಕ್ಷತೆ ಮತ್ತು ಭದ್ರತೆ ವಾತಾವರಣದಲ್ಲಿ ಇರುವ ಲೋಪವೇ ಕಾರಣ ಎನ್ನಲಾಗಿದೆ.

- ವಿಶ್ವದ ಒಟ್ಟು 142 ದೇಶಗಳನ್ನು ಸಮೀಕ್ಷೆಗೆ ಒಳಪಡಿಸಿ ಈ ಸೂಚ್ಯಂಕವನ್ನು ಸಿದ್ದಪಡಿಸಲಾಗಿದೆ.
- ಎಂದಿನಂತೆ ನಾರ್ವೆ ಸೂಚ್ಯಂಕದಲ್ಲಿ ಪ್ರಥಮ ಸ್ಥಾನವನ್ನು ಕಾಯ್ದುಕೊಂಡು ತನ್ನ ಸಾಮರ್ಥ್ಯವನ್ನು ಮೆರೆದಿದೆ. ಸತತ ಐದನೇ ವರ್ಷ ನಾರ್ವೆ ಈ ಪ್ರಶಂಸೆಗೆ ಪಾತ್ರವಾಗಿದೆ. ನಾರ್ವೆ ನಂತರ ಸ್ವಿಟ್ಜರ್ಲ್ಯಾಂಡ್, ಕೆನಡಾ, ಸ್ವೀಡನ್ ಹಾಗೂ ನ್ಯೂಜಿಲ್ಯಾಂಡ್ ಪಟ್ಟಿಯಲ್ಲಿರುವ ಟಾಪ್ ಐದು ದೇಶಗಳು.
- ಭಾರತದ ನೆರೆಯ ದೇಶಗಳಾದ ಚೀನಾ (51), ಶ್ರೀಲಂಕಾ (60), ನೇಪಾಳ (102) ಮತ್ತು ಬಾಂಗ್ಲದೇಶ (103) ಸ್ಥಾನವನ್ನು ಪಡೆಯುವ ಮೂಲಕ ಭಾರತಕ್ಕಿಂತ ಉತ್ತಮ ಸಾಧನೆ ಮಾಡಿವೆ.
- ಚಡ್ ದೇಶ 142ನೇ ಸ್ಥಾನವನ್ನುಗಳಿಸಿ ಕೊನೆಯ ಸ್ಥಾನದಲ್ಲಿದೆ. ಕಾಂಗೋ, ಆಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಇರಾಕ್ ಪಟ್ಟಿಯಲ್ಲಿ ಕೊನೆಯಲ್ಲಿರುವ ದೇಶಗಳು.

**ಸಮೀಕ್ಷೆ ಹೇಗೆ?**

- ಒಟ್ಟು ಎಂಟು ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಸಮೀಕ್ಷೆಯನ್ನು ನಡೆಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಶಿಕ್ಷಣ, ಆರೋಗ್ಯ, ಆರ್ಥಿಕತೆ, ಸುರಕ್ಷತೆ ಮತ್ತು ಭದ್ರತೆ.

# ಕ್ರೀಡೆ

**ಚೀನಾ ಓಪನ್ ಪ್ರಶಸ್ತಿ ಮುಡಿಗೇರಿಸಿಕೊಂಡ ಜೋಕೊವಿಚ್ ಮತ್ತು ಸೆರೆನಾಗೆ**

ಯಶಸ್ಸಿನ ಅಲೆಯಲ್ಲಿ ತೇಲುತ್ತಿದ್ದ ರಫೆಲ್ ನಡಾಲ್ ವಿರುದ್ಧ ಉತ್ತಮ ಪ್ರದರ್ಶನ ನೀಡಿದ ನೊವಾಕ್ ಜೋಕೊವಿಚ್, ಭಾನುವಾರ ನಡೆದ ಚೀನಾ ಓಪನ್ ಟೆನಿಸ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ನೇರ ಸೆಟ್‌ಗಳ ಜಯ ಸಾಧಿಸಿ ಚಾಂಪಿಯನ್ ಪಟ್ಟಕ್ಕೇರಿದರು.ಫೈನಲ್‌ಗೆ ಪ್ರವೇಶಿಸುವ ಮೂಲಕ ನಡಾಲ್ ಅಗ್ರ ಸ್ಥಾನಕ್ಕೇರಿದ ನಂತರ ಜಯ ಕಂಡಿರುವ ಜೋಕೊವಿಚ್, ಈ ಗೆಲವಿನಿಂದ ತೃಪ್ತಿಪಟ್ಟುಕೊಳ್ಳುವಂತಾಗಿದೆ.

**ಕಠಿಣ ಸವಾಲು:**

ಪಂದ್ಯದ ಆರಂಭದಿಂದಲೂ ಮೇಲುಗೈ ಸಾಧಿಸಿದ ಜೋಕೊವಿಚ್, ನಡಾಲ್‌ಗೆ ಕಠಿಣ ಸವಾಲು ನೀಡಿದರು. ಮೊದಲ ಸೆಟ್‌ನಲ್ಲಿ 6-3 ಅಂತರದ ಮುನ್ನಡೆ ಪಡೆದ ಜೋಕೊ, ದ್ವಿತೀಯ ಸೆಟ್‌ನಲ್ಲೂ ತಮ್ಮ ನಿಯಂತ್ರಣ ಮುಂದುವರಿಸಿದರು. ನಂತರ 2 ನೇ ಸೆಟ್ ಅನ್ನು 6-4 ಅಂತರದಲ್ಲಿ ತಮ್ಮದಾಗಿಸಿಕೊಳ್ಳುವ ಮೂಲಕ ಸುಲಭದ ಜಯ ಸಾಧಿಸಿದರು. ಗಾಯದ ಸಮಸ್ಯೆಯಿಂದ ಗುಣಮುಖರಾಗಿ ಮತ್ತೆ ಕಣಕ್ಕಿಳಿದಿದ್ದ ನಡಾಲ್ 12 ಪಂದ್ಯಾವಳಿಯಲ್ಲಿ ಫೈನಲ್ ಪ್ರವೇಶಿಸಿದ್ದು, ಅದರಲ್ಲಿ 10 ಪ್ರಶಸ್ತಿ ಗೆದ್ದುಕೊಂಡಿದ್ದರು. ಈ ಮೂಲಕ ನಡಾಲ್ ಗೆಲವಿನ ಓಟಕ್ಕೆ ಜೋಕೊವಿಚ್ ಬ್ರೇಕ್ ಹಾಕಿದರು. ಈ ಮೂಲಕ ಜೋಕೊ ಕಳೆದ 5 ವರ್ಷಗಳಲ್ಲಿ 4 ಬಾರಿ ಚೀನಾ ಓಪನ್ ಪ್ರಶಸ್ತಿ ಮುಡಿಗೇರಿಸಕೊಂಡಿದ್ದಾರೆ.

**ಸೆರೆನಾ ಚಾಂಪಿಯನ್:**

ಮಹಿಳಾ ಟೆನಿಸ್‌ನಲ್ಲಿ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಪ್ರದರ್ಶಿಸಿರುವ ಅಮೆರಿಕಾದ ಸೆರೆನಾ ವಿಲಿಯಮ್ಸ್, ಭಾನುವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ 6-2, 6-2 ಅಂತರದ ನೇರ ಸೆಟ್‌ಗಳ ಜಯ ಸಾಧಿಸಿ ಚಾಂಪಿಯನ್‌ಪಟ್ಟ ಅಲಂಕರಿಸಿದರು.

**ಚಾಂಪಿಯನ್ಸ್ ಲೀಗ್ ಟಿ-20 6 ನೇ ಆವೃತಿಯ ಚಾಂಪಿಯನ್ಸ್ ಆಗಿ ಮುಂಬೈ ಇಂಡಿಯನ್ಸ್**

ಮಾಸ್ಟರ್ ಬ್ಲಾಸ್ಟರ್‌ಗೆ ಮುಂಬೈ ಇಂಡಿಯನ್ಸ್ ಆಟಗಾರರು 6ನೇ ಆವೃತ್ತಿಯ ಚಾಂಪಿಯನ್ಸ್ ಲೀಗ್ ಟಿ-20 ಕ್ರಿಕೆಟ್ ಪಂದ್ಯಾವಳಿಯ ಪ್ರಶಸ್ತಿ ಗೆದ್ದು ಚಾಂಪಿಯನ್ ರೀತಿ ಬೀಳ್ಕೊಡುಗೆ ನೀಡಿದರು. ಸ್ಟಾರ್ ಆಟಗಾರರಿಲ್ಲದ ತಂಡವೊಂದನ್ನು ಪ್ರಶಸ್ತಿ ಹೊಸ್ತಿಲಿಗೆ ತಂದು ನಿಲ್ಲಿಸಿದ್ದ ರಾಹುಲ್ ದ್ರಾವಿಡ್ ರನ್ನರ್ ಅಪ್ ಸ್ಥಾನದೊಂದಿಗೆ ಕ್ರಿಕೆಟ್‌ಗೆ ವಿದಾಯ ಹೇಳಿದರು.

**ವಿದಾಯದ ಪದ್ಯ:**

ಭಾನುವಾರ ನಡೆದ ಫೈನಲ್ ಪಂದ್ಯ ಭಾರತದ ಬ್ಯಾಟಿಂಗ್ ದಿಗ್ಗಜ ರಾದ ಸಚಿನ್ ಮತ್ತು ದ್ರಾವಿಡ್‌ಗೆ ವಿದಾಯದ ಪಂದ್ಯವಾಗಿತ್ತು. ಇಬ್ಬರು ಟಿ-20 ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರಿಂದ ಯಾರು ಪ್ರಶಸ್ತಿ ಯೊಂದಿಗೆ ವಿದಾಯ ಹೇಳುತ್ತಾರೆ ಎಂದು ಕುತೂಹಲ ಮೂಡಿಸಿತ್ತು. ಐಪಿಎಲ್ ಮತ್ತು ಚಾಂಪಿಯನ್ಸ್ ಲೀಗ್ ಒಂದೇ ವರ್ಷ ಗೆದ್ದ ಚೆನ್ನೈ ತಂಡದ ಸಾಧನೆಯನ್ನು ಮುಂಬೈ ಸರಿಗಟ್ಟಿತು. ಚೆನ್ನೈ 2010ರಲ್ಲಿ ಈ ಸಾಧನೆ ಮಾಡಿತ್ತು. ಟಾಸ್ ಗೆದ್ದ ದ್ರಾವಿಡ್ ಮುಂಬೈ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ಮುಂಬೈ ಇಂಡಿಯನ್ಸ್ ಬ್ಯಾಟ್ಸ್‌ಮನ್‌ಗಳು ಆರಂಭದಿಂದಲೇ ಸ್ಫೋಟಕ ಆಟಕ್ಕೆ ಇಳಿದಿದ್ದರಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 202 ರನ್ ಸಂಪಾದಿಸಿತು. ರಾಜಸ್ಥಾನ್ ತಂಡ 18.5 ಓವರ್‌ಗಳಲ್ಲಿ 169 ರನ್‌ಗಳಿಗೆ ಆಲೌಟಾಗಿ 33 ರನ್‌ಗಳಿಂದ ಸೋಲುಂಡಿತು.

**ಸರಣಿ ವಿಶೇಷಗಳು:**

- ಚಾಂಪಿಯನ್ ಮುಂಬೈ ಇಂಡಿಯನ್ಸ್‌ಗೆ 25 ಲಕ್ಷ ಡಾಲರ್ ಮೊತ್ತ (16 ಕೋಟಿ ರೂ.)
- ರನ್ನರ್‌ಅಪ್ ರಾಜಸ್ಥಾನ್ ರಾಯಲ್ಸ್‌ಗೆ 13 ಲಕ್ಷ ಡಾಲರ್ ಮೊತ್ತ (8 ಕೋಟಿ ರೂ.)
- ಪಂದ್ಯ ಶ್ರೇಷ್ಠ: ಹರ್ಭಜನ್ ಸಿಂಗ್
- ಸರಣಿ ಶ್ರೇಷ್ಠ: ಡ್ವೇನ್ ಸ್ಮಿತ್
- ಗೋಲ್ಡನ್ ಬ್ಯಾಟ್: ಅಜಿಂಕ್ಯ ರಹಾನೆ
- ಗೋಲ್ಡನ್ ಬಾಲ್: ಪ್ರವೀಣ್ ತಾಂಬೆ

**2015 ರ ಐಸಿಸಿ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್ ಶಿಪ್ ಗೆ ಅರ್ಹತೆ ಪಡೆದ ಅಫ್ಘಾನಿಸ್ತಾನ**

ಅಫ್ಘಾನಿಸ್ತಾನ ಏಷ್ಯಾ ಖಂಡದಿಂದ ಮತ್ತೊಂದು ತಂಡ 2015 ರ ಏಕದಿನ ವಿಶ್ವಕಪ್‌ಗೆ ಕಾಲಿಟ್ಟಿದೆ. ಐಸಿಸಿ ವಿಶ್ವ ಕ್ರಿಕೆಟ್ ಲೀಗ್ ಚಾಂಪಿಯನ್‌ಶಿಪ್‌ನ ಪಂದ್ಯದಲ್ಲಿ ಕೀನ್ಯಾ ವಿರುದ್ಧ ಸೆಣೆಸಿದ ಆಫ್ಘಾನಿಸ್ತಾನ, ತಂಡ ಆ ಪಂದ್ಯದಲ್ಲಿ 7 ವಿಕೆಟ್‌ಗಳ ಜಯ ಸಾಧಿಸುವ ಮೂಲಕ, ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿತು. ಇಲ್ಲಿನ ಶಾರ್ಜಾ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ, ಮೊದಲು ಬ್ಯಾಟ್ ಮಾಡಿದ್ದ ಕೀನ್ಯಾ, 43.3 ಓವರ್‌ಗಳಲ್ಲಿ ಕೇವಲ 93 ರನ್‌ಗಳಿಗೆ ಆಲೌಟ್ ಆಗಿತ್ತು. ಈ ಸುಲಭ ಮೊತ್ತ ಬೆನ್ನಟ್ಟಿದ ಆಫ್ಘಾನಿಸ್ತಾನ, 20.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 96 ರನ್ ಗಳಿಸಿ, ಜಯ ಸಾಧಿಸಿತು.

**ವಿಶ್ವಕಪ್ ಪ್ರವೇಶ ಹೇಗೆ?**

ಐಸಿಸಿ ವತಿಯಿಂದ ಆಯೋಜಿಸಲಾಗಿದ್ದ ವಿಶ್ವ ಕ್ರಿಕೆಟ್ ಲೀಗ್ ಪಂದ್ಯಾವಳಿ ಜೂ. 28ರಿಂದ ಆರಂಭವಾಗಿತ್ತು. ಈ ಪಂದ್ಯಾವಳಿಯಲ್ಲಿ, ಐರ್ಲೆಂಡ್, ಆಫ್ಘಾನಿಸ್ತಾನ, ಯುನೈಟೆಡ್ ಅರಬ್ ಎಮಿರೇಟ್ಸ್, ಹಾಲೆಂಡ್, ಸ್ಕಾಟ್ಲೆಂಡ್, ಕೀನ್ಯಾ, ನಮೀಬಿಯಾ ಹಾಗೂ ಕೆನಡಾ ತಂಡಗಳು ಭಾಗವಹಿಸಿದ್ದವು. ನಿಯಮಗಳ ಪ್ರಕಾರ, ಎಲ್ಲಾ ತಂಡಗಳೂ ತಲಾ 14 ಪಂದ್ಯಗಳನ್ನಾಡಿದ್ದು, ಈ ಪಂದ್ಯಾವಳಿಯಲ್ಲಿ ಗರಿಷ್ಠ ಅಂಕ ಗಳಿಸುವ ಮೊದಲ ಎರಡು ತಂಡಗಳು ವಿಶ್ವಕಪ್‌ಗೆ ಆಯ್ಕೆಯಾಗಬೇಕಿತ್ತು.

**ತಂಡಗಳ ಅಂಕಗಳೆಷ್ಟು?**

ಇಲ್ಲಿ ಮುಕ್ತಾಯವಾದ ಪಂದ್ಯಾವಳಿಯಲ್ಲಿ ಐರ್ಲೆಂಡ್ ತಂಡ ಮೊದಲ ಸ್ಥಾನ ಗಳಿಸಿದರೆ, ಆಫ್ಘಾನಿಸ್ತಾನ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಐರ್ಲೆಂಡ್ ತಂಡ, ಪಂದ್ಯಾವಳಿಯಲ್ಲಿ 14 ಪಂದ್ಯಗಳನ್ನಾಡಿ, 11ರಲ್ಲಿ ಜಯ ದಾಖಲಿಸಿ, ಒಟ್ಟು 24 ಅಂಕ ಗಳಿಸಿದ್ದರೆ, ಇತ್ತ, ಆಫ್ಘಾನಿಸ್ತಾನ ತಂಡ, 14 ಪಂದ್ಯಗಳಲ್ಲಿ 9ರಲ್ಲಿ ಜಯ ಸಾಧಿಸಿ, ಒಟ್ಟು 19 ಅಂಕಗಳನ್ನು ಕಲೆಹಾಕಿದೆ. ಅಂಕಪಟ್ಟಿಯ ಎರಡನೇ ಸ್ಥಾನಕ್ಕೆ ಆಫ್ಘಾನಿಸ್ತಾನ ಹಾಗೂ ಯುನೈಟೆಡ್ ಅರಬ್ ತಂಡಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಹಾಗಾಗಿ, ಶುಕ್ರವಾರ ನಡೆದ ಕೀನ್ಯಾ ವಿರುದ್ಧದ ಪಂದ್ಯದಲ್ಲಿ, ಆಫ್ಘಾನಿಸ್ತಾನ ತಂಡ ಗೆಲ್ಲಲೇಬೇಕಿತ್ತು. ಈ ಪಂದ್ಯಾವಳಿಯಿಂದ, 2015ರ ವಿಶ್ವಕಪ್‌ಗೆ ಎರಡು ತಂಡಗಳು ಆಯ್ಕೆಯಾಗಿದ್ದು, ಇನ್ನೂ ಎರಡು ತಂಡಗಳು ವಿಶ್ವಕಪ್‌ಗೆ ಅರ್ಹತೆ ಪಡೆಯಬೇಕಿವೆ. 2014ರಲ್ಲಿ ನ್ಯೂಜಿಲೆಂಡ್‌ನಲ್ಲಿ ಮತ್ತೊಂದು ಅರ್ಹತಾ ಸುತ್ತಿನ ಪಂದ್ಯಾವಳಿ ನಡೆಯಲಿದ್ದು, ಅಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಎರಡು ತಂಡಗಳು ವಿಶ್ವಕಪ್‌ಗೆ ಅರ್ಹತೆ ಪಡೆಯಲಿವೆ.

**ಟ್ರ್ಯಾಕ್ ಏಷ್ಯಾ ಕಪ್ ಸೈಕ್ಲಿಂಗ್ ಚಾಂಪಿಯನ್ ಷಿಪ್ ನಲ್ಲಿ ದೆಬೊರಾಗೆ ಚಿನ್ನ**

ಥಾಯ್ಲೆಂಡ್ನಲ್ಲಿ ನಡೆದ ಟ್ರ್ಯಾಕ್ ಏಷ್ಯಾ ಕಪ್ ಸೈಕ್ಲಿಂಗ್ ಚಾಂಪಿಯನ್ ಷಿಪ್ ನಲ್ಲಿ ಕೊನೆಯ ದಿನ ಭಾರತಕ್ಕೆ ಮೂರು ಪದಕಗಳು ಲಭ್ಯವಾಗಿದೆ. ಭಾರತದ ಯುವ ಸೈಕ್ಲಿಸ್ಟ್ ದೆಬೊರಾ ಅವರು ಚಿನ್ನದ ಪದಕ ಗೆದ್ದುಕೊಂಡರೆ, ಹಿರಿಯ ಮಹಿಳೆಯರ ವಿಭಾಗದಲ್ಲಿ ಪಾಲ್ಗೊಂಡಿದ್ದ ಭಾರತದ ಕ್ರೀಡಾಳುಗಳಾದ ವಿ.ಜಿ. ಪಾರ್ವತಿ ಹಾಗೂ ರುತುಜಾ ಅವರು ಕಂಚಿನ ಪದಕ ಗೆದ್ದುಕೊಂಡರು.

**ದೆಬೊರಾ ಸಾಧನೆ:**

- ಈ ಮುನ್ನ, 500 ಮೀ. ಟೈಮ್ ಟ್ರಯಲ್ ವಿಭಾಗದಲ್ಲಿ ಸ್ಪರ್ಧಿಸಿದ್ದ ದೆಬೊರಾ, ಅಲ್ಲೂ ಚಿನ್ನದ ಪದಕ ಗೆದ್ದಿದ್ದರು.
- ಸೋಮವಾರ ನಡೆದ ವೈಯಕ್ತಿಕ ಸುತ್ತಿನಲ್ಲೂ ಮತ್ತೊಂದು ಚಿನ್ನ ಗೆಲ್ಲುವ ಮೂಲಕ ಅವರು ಎಲ್ಲರ ಗಮನ ಸೆಳೆದರು.
- ಏತನ್ಮಧ್ಯೆ, ದೆಬೊರಾ ಹಾಗೂ ಭಾರತದ ಮತ್ತೊಬ್ಬ ಕ್ರೀಡಾಳು ಮನೋರಮಾ ದೇವಿ ಅವರು, ಸ್ಕ್ರ್ಯಾಚ್ ಹಾಗೂ ಪಾಯಿಂಟ್ ರೇಸ್ಗಳಲ್ಲಿ ಎರಡು ಚಿನ್ನದ ಪದಕ ಗೆದ್ದುಕೊಂಡರು.

**ಉತ್ತಮ ಪ್ರದರ್ಶನ:**

ಇವರ ಸಾಧನೆಯೊಂದಿಗೆ, ತಂಡಗಳ ಹಿರಿಯ ಮಹಿಳೆಯರ ತಂಡಗಳ ವಿಭಾಗದಲ್ಲಿ ಪಾರ್ವತಿ ಹಾಗೂ ರುತುಜಾ ಅವರು ಗಳಿಸಿದ ಕಂಚಿನ ಪದಕದಿಂದ ಭಾರತ ತಂಡ ಒಟ್ಟಾರೆಯಾಗಿ ಈ ಪಂದ್ಯಾವಳಿಯಲ್ಲಿ ಗಳಿಸಿದ ಪದಕಗಳ ಸಂಖ್ಯೆ ಆರಕ್ಕೇರಿದೆ.

**ಬಾಂಗ್ಲಾದೇಶದಲ್ಲಿ ನಡೆಯುವ ಟಿ20 ವಿಶ್ವಕಪ್-2014 ಕ್ರಿಕೆಟ್ ಪಂದ್ಯಾವಳಿಗಳ ವೇಳಾಪಟ್ಟಿ ಬಿಡುಗಡೆ**

ಟ್ವೆಂಟಿ 20 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಗಳು 2014ರ ಮಾರ್ಚ್ 16 ರಿಂದ ಏಪ್ರಿಲ್ 6 ರವರೆಗೆ ಬಾಂಗ್ಲಾದೇಶದಲ್ಲಿ ನಡೆಯಲಿದೆ. ಪಂದ್ಯಾವಳಿಯ ವೇಳಾಪಟ್ಟಿಯನ್ನು ಐಸಿಸಿ ಬಿಡುಗಡೆ ಮಾಡಿದೆ. ಮಾರ್ಚ್ 21 ರಂದು ಸೂಪರ್-10 ಹಣಾಹಣಿ ಆರಂಭವಾಗಲಿದೆ. 22 ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಯಲ್ಲಿ ಗೆದ್ದ ತಂಡಕ್ಕೆ 18 ಕೋಟಿ ರೂ. ಬಹುಮಾನ ಸಿಗಲಿದೆ.

**ಪುರುಷ ಮತ್ತು ಮಹಿಳಾ ವಿಭಾಗಗಳು:**

ಪುರುಷ ಹಾಗೂ ವನಿತೆಯರ ಟೂರ್ನಿಗಳು ಏಕಕಾಲದಲ್ಲಿ ಜರಗಲಿದ್ದು, ಎರಡೂ ವಿಭಾಗಗಳಿಂದ ಒಟ್ಟು 60 ಪಂದ್ಯಗಳನ್ನು ಆಡಲಾಗುವುದು. ಪುರುಷರ ವಿಭಾಗದಲ್ಲಿ 35, ವನಿತಾ ವಿಭಾಗದಲ್ಲಿ 25 ಪಂದ್ಯಗಳು ನಡೆಯಲಿವೆ. 22 ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಯ ಆತಿಥ್ಯ ಢಾಕಾ, ಚಿತ್ತಗಾಂಗ್ ಮತ್ತು ಶಿಲೆಟ್ ಪಾಲಾಗಿದೆ. ಈ ಮೊದಲಿನ ವಿಶ್ವಕಪ್ ಪಂದ್ಯಾವಳಿಯಂತೆ ಪುರುಷರ ಹಾಗೂ ವನಿತಾ ವಿಭಾಗದ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು ಒಂದೇ ದಿನ ನಡೆಯಲಿವೆ.

**16 ಕ್ಕೆ ಏರಿದ ತಂಡಗಳು:**

- ಈ ಬಾರಿಯ ಪಂದ್ಯಾವಳಿಯ ಪ್ರಮುಖ ಬದಲಾವಣೆಯೆಂದರೆ ಪುರುಷರ ವಿಭಾಗದ ತಂಡಗಳ ಸಂಖ್ಯೆಯನ್ನು 12 ರಿಂದ 16 ಕ್ಕೆ ಹೆಚ್ಚಿಸಲಾಗಿದೆ. 2012ರ ಅಕ್ಟೋಬರ್ 8 ಕ್ಕೆ ಅನ್ವಯಿಸುವ ಟಿ-20 ಶ್ರೇಣಿಯ ಅಗ್ರ 8 ತಂಡಗಳು ನೇರವಾಗಿ ಸೂಪರ್-10 ಹಂತದಲ್ಲಿ ಆಡಲಿವೆ. ಆತಿಥೇಯ ಬಾಂಗ್ಲಾದೇಶ ಮತ್ತು ಜಿಂಬಾಬ್ವೆ ಟಾಪ್-8 ರಿಂದ ಹೊರಗುಳಿದಿದ್ದು, ಇವು ಮೊದಲ ಸುತ್ತಿನ ಸ್ಪರ್ಧೆಯಲ್ಲಿ ಸೆಣಸಲಿವೆ.
- ಇಲ್ಲಿ ಒಟ್ಟು 8 ತಂಡಗಳು ಪಾಲ್ಗೊಳ್ಳಲಿದ್ದು, 4 ತಂಡಗಳ 2 ವಿಭಾಗಗಳಾಗಿ ಇವನ್ನು ವಿಂಗಡಿಸಲಾಗಿದೆ. ಪ್ರತೀ ವಿಭಾಗದಲ್ಲಿ ಅಗ್ರಸ್ಥಾನ ಪಡೆದ ತಂಡ ಸೂಪರ್-10 ಸ್ಟೇಜ್‌ಗೆ ಅರ್ಹತೆ ಪಡೆಯುತ್ತದೆ.

**ಬಹುಮಾನ ಮೊತ್ತ ರೂ.18 ಕೋಟಿ:**

- ಈ ಬಾರಿಯ ಪುರುಷರ ವಿಭಾಗ ಸ್ಪರ್ಧೆಗಳಿಗೆ ಒಟ್ಟು 3 ದಶಲಕ್ಷ ಡಾಲರ್ (ಸುಮಾರು 18 ಕೋಟಿ ರೂ.) ಬಹುಮಾನ ನಿಗದಿಪಡಿಸಲಾಗಿದ್ದು, ಚಾಂಪಿಯನ್ ತಂಡಕ್ಕೆ 1.1 ದಶಲಕ್ಷ ಡಾಲರ್ (ಸುಮಾರು 6.6 ಕೋಟಿ ರೂ.) ಲಭಿಸಲಿದೆ. ರನ್ನರ್ ಅಪ್ ತಂಡ 5.5 ಲಕ್ಷ ಡಾಲರ್ (ಸುಮಾರು 4 ಕೋಟಿ ರೂ.)ಪಡೆಯುತ್ತದೆ.
- ವನಿತಾ ವಿಭಾಗದ ಸ್ಪರ್ಧೆಗಳಿಗೆ 1.8 ದಶಲಕ್ಷ ಡಾಲರ್ ಬಹುಮಾನವಿದ್ದು, ವಿಜೇತ ತಂಡ 65 ಸಾವಿರ ಡಾಲರ್, ರನ್ನರ್ ಅಪ್ ತಂಡ 25 ಸಾವಿರ ಡಾಲರ್ ಮೊತ್ತ ಗಳಿಸಲಿದೆ.
- ಈ ಬಾರಿ ವನಿತೆಯರ ತಂಡಗಳ ಸಂಖ್ಯೆಯನ್ನು 8 ರಿಂದ 10ಕ್ಕೇರಿಸಲಾಗಿದೆ. ತಲಾ 5 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.

**<u>ಫಾರ್ಮುಲಾ-1 ರೇಸ್ ನ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿದ ಸೆಬಾಸ್ಟಿಯನ್ ವೆಟಲ್</u>**

ವೇಗದ ಯುಗದಲ್ಲಿ ದೈತ್ಯ ಹೆಜ್ಜೆಗಳನ್ನು ಇಟ್ಟಿರುವ ಸೆಬಾಸ್ಟಿಯನ್ ವೆಟಲ್ ಮತ್ತೂಂದು ಪರಾಕ್ರಮದೊಂದಿಗೆ ಐತಿಹಾಸಿಕ ಸಾಧನೆ ಮೆರೆದಿದ್ದಾರೆ. ಇಂಡಿಯನ್ ಗ್ರ್ಯಾನ್ ಪ್ರೀಯಲ್ಲಿ ಹ್ಯಾಟ್ರಿಕ್ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ಸತತ ನಾಲ್ಕನೇ ಬಾರಿ ಫಾರ್ಮುಲಾ-1 ರೇಸ್‌ನ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ. ಬುದ್ಧ ಅಂತಾರಾಷ್ಟ್ರೀಯ ಸರ್ಕ್ಯೂಟ್‌ನಲ್ಲಿ ನಡೆದ 191 ದೂರದ 60 ಲ್ಯಾಪ್‌ಗಳ ರೇಸ್‌ನಲ್ಲಿ ಸೆಬಾಸ್ಟಿಯನ್ ವೆಟಲ್ ತಮ್ಮ ಟಯರ್ ತಂತ್ರಗಳನ್ನು ಯಶಸ್ವಿಯಾಗಿ ಜಾರಿ ಮಾಡಿ ಪ್ರಶಸ್ತಿಯನ್ನು ಬುಟ್ಟಿಗೆ ಹಾಕಿಕೊಂಡರು.

**ವೆಟಲ್ ದಾಖಲೆ:**

ವೆಟಲ್ ವಿಶ್ವ ಚಾಂಪಿಯನ್ ಪಟ್ಟವನ್ನು ಖಚಿತಪಡಿಸಿಕೊಳ್ಳಬೇಕಾದರೆ ಈ ಬಾರಿ ಕನಿಷ್ಠ 5ನೇ ಸ್ಥಾನ ಪಡೆಯಬೇಕಿತ್ತು. ಆದರೆ ವೆಟಲ್ ಯಾವುದೇ ಅವಕಾಶ ನೀಡದೇ ಪೂರ್ಣ 25 ಅಂಕ ಗಿಟ್ಟಿಸಿ ಪ್ರಸಕ್ತ ಸಾಲಿನ ರೇಸ್‌ನಲ್ಲಿ 322 ಅಂಕದೊಂದಿಗೆ ಸತತ ನಾಲ್ಕು ಬಾರಿ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿದ ಅತಿ ಕಿರಿಯ ಚಾಲಕ ಎಂಬ ಸಾಧನೆಗೆ ಪಾತ್ರರಾದರು. ಇತಿಹಾಸದಲ್ಲಿ ಇದುವರೆಗೆ ಅರ್ಜೆಂಟೀನಾದ ಜುವಾನ್ ಮ್ಯಾನುಯೆಲ್ ಫಾಂಗಿಯೊ, ಜರ್ಮನಿಯ ಮೈಕಲ್ ಶುಮಾಕರ್ ಸತತ ನಾಲ್ಕು ಬಾರಿ ವಿಶ್ವ ಚಾಂಪಿಯನ್ ಪಟ್ಟ ಅಂಕರಿಸಿದವರ ಸಾಲಿಗೆ ವೆಟಲ್ ಸೇರ್ಪಡೆಗೊಂಡಿದ್ದಾರೆ. ಫ್ರಾನ್ಸ್‌ನ ಅಲೈನ್ ಪ್ರಾಸ್ಟ್ ನಾಲ್ಕು ಬಾರಿ ಪ್ರಶಸ್ತಿ ಗಳಿಸಿದ್ದಾರೆ. ಆದರೆ ವೆಟಲ್ 26ನೇ ವಯಸ್ಸಿನಲ್ಲೇ ಈ ಸಾಧನೆ ಮಾಡಿ ಅತಿ ಕಿರಿಯ ಚಾಲಕ ಎನಿಸಿಕೊಂಡಿದ್ದಾರೆ.

**ಮಿಂಚಿದ ಫೋರ್ಸ್ ಇಂಡಿಯಾ:**

ಅಭ್ಯಾಸ ರೇಸ್‌ಗಳಲ್ಲಿ ಉತ್ತಮ ಪ್ರದರ್ಶನ ನೀಡದೇ ಇದ್ದರೂ ಅಂತಿಮ ರೇಸ್‌ನಲ್ಲಿ ಎಲ್ಲರ ನಿರೀಕ್ಷೆಗೂ ಮೀರಿದ ಪ್ರದರ್ಶನ ನೀಡಿದ ಭಾರತೀಯ ಮೂಲದ ಸಹಾರಾ- ಫೋರ್ಸ್ ಇಂಡಿಯಾ ಡಬಲ್ ಫಿನಿಷ್‌ನೊಂದಿಗೆ 6 ಅಂಕ ಗಿಟ್ಟಿಸಿದೆ. ಇದರೊಂದಿಗೆ ಟೂರ್ನಿಯಲ್ಲಿ 68 ಅಂಕದೊಂದಿಗೆ 6ನೇ ಸ್ಥಾನ ಪಡೆದರೆ ಈ ಬಾರಿ ಅಂಕ ಗಳಿಸಲು ವಿಫಲರಾದ ಸೌಭರ್ ತಂಡ 28 ಅಂಕದಿಂದ ಹಿಂದೆ ಉಳಿದು 7ನೇ ಸ್ಥಾನದಲ್ಲಿ ಉಳಿಯಿತು. ಪಾಲ್ ಡಿ ರೆಸ್ಟಾ ಮತ್ತು ಆಯಡ್ರಿಯನ್ ಸುಟೀಲ್ ಅವರ ಭರ್ಜರಿ ಪ್ರದರ್ಶನದೊಂದಿಗೆ ಗಮನ ಸೆಳೆದರು. ಕಳೆದ ವರ್ಷ ಅಂಕ ಗಳಿಸಲು ವಿಫಲರಾಗಿದ್ದ ಫೋರ್ಸ್ ಇಂಡಿಯಾದ ಇಬ್ಬರು ಚಾಲಕರೂ ಅಂಕ ಗಳಿಸುವಲ್ಲಿ ಯಶಸ್ವಿಯಾದರು. ಬ್ರಿಟಿಷ್ ಗ್ರ್ಯಾನ್ ಪ್ರೀಯಲ್ಲಿ ಡಬಲ್ ಸಾಧನೆ ಮಾಡಿದ ನಂತರ ಫೋರ್ಸ್ ಇಂಡಿಯಾ ಇದೇ ಮೊದಲ ಬಾರಿ ಈ ಸಾಧನೆ ಪುನರಾವರ್ತಿಸಿತು.

**ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಮೂರು ಕ್ರಿಕೆಟ್ ಅಂಗಣಗಳ ಲೋಕಾರ್ಪಣೆ**

ಒಂದೇ ಸ್ಥಳದಲ್ಲಿ ಅಂತಾರಾಷ್ಟ್ರೀಯ ದರ್ಜೆಯ ಮೂರು ಕ್ರಿಕೆಟ್ ಅಂಗಣಗಳು, ಅಭ್ಯಾಸಕ್ಕೆ 22 ಪಿಚ್‌ಗಳನ್ನು ಹೊಂದಿರುವ ಬೆಂಗಳೂರಿನ ಹೊರ ವಲಯದಲ್ಲಿರುವ ತ್ರಿ ಓವಲ್ಸ್ ಕ್ರೀಡಾಂಗಣವನ್ನು ಕೆಎಸ್‌ಸಿಯ ಮಾಜಿ ಅಧ್ಯಕ್ಷ ಕೆ.ಎಂ ರಾಮ್‌ಪ್ರಸಾದ್ ಅವರು ಉದ್ಘಾಟಿಸಿದರು. ವಿಶ್ವ ದರ್ಜೆಯ ಸೌಲಭ್ಯಗಳನ್ನೊಳಗೊಂಡ ಮೂರು ಅಂಗಣಗಳನ್ನು ಹೊಂದಿರುವ ಜಗತ್ತಿನ ಒಂದೇ ಒಂದು ಸ್ಥಳ ಎಂಬ ಖ್ಯಾತಿ, ಈಗ ಆಲೂರಿನದ್ದಾಗಿದೆ.

**'ತ್ರೀ ಓವಲ್ಸ್' ವಿಶೇಷತೆಗಳು:**

- 30 ಎಕರೆಯಲ್ಲಿ ಹರಡಿಕೊಂಡಿರುವ ಮೂರೂ ಅಂಗಣಗಳಲ್ಲಿ ಏಕಕಾಲಕ್ಕೆ ಮೂರು ಪ್ರಥಮ ದರ್ಜೆಯ ಪಂದ್ಯಗಳನ್ನು ನಡೆಸಬಹುದಾಗಿದೆ.
- ಪ್ಲಾಟಿನಂ ಓವಲ್, ಗೋಲ್ಡನ್ ಓವಲ್ ಹಾಗೂ ಸಿಲ್ವರ್ ಓವಲ್ ಎಂದು ಈ ಮೂರೂ ಅಂಗಣಗಳಿಗೆ ಹೆಸರಿಡಲಾಗಿದೆ.
- ಇದರಲ್ಲಿ ಪ್ಲಾಟಿನಂ ಓವಲ್ ಅತಿ ದೊಡ್ಡ ಅಂಗಣವೆನಿಸಿದೆ. ಸಿಲ್ವರ್ ಮತ್ತು ಗೋಲ್ಡನ್ ಓವಲ್‌ಗೆ ಹೊಂದಿಕೊಂಡಂತೆ ಒಂದು ಪೆವಿಲಿಯನ್ ಸಹ ಸಿದ್ಧವಾಗಿದೆ.
- ಇಲ್ಲಿ ಆಟಗಾರರ ಡ್ರೆಸ್ಸಿಂಗ್ ರೂಂನೊಂದಿಗೆ ಊಟ, ವಿಶ್ರಾಂತಿಗೂ ಅನುಕೂಲ ಮಾಡಿಕೊಡಲಾಗಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಭೂಮಿಯನ್ನು ಖರೀದಿಸಿಟ್ಟಿತ್ತು. ನಾವು ಅದನ್ನು ಭವಿಷ್ಯದ ಆಟಗಾರರಿಗೆ ಸಿದ್ಧಪಡಿಸಿಕೊಟ್ಟಿದ್ದೇವೆ. ಸ್ಥಳೀಯ ಆಟಗಾರರಿಗೆ ಅಂತಾರಾಷ್ಟ್ರೀಯ ಅನುಭವ ನೀಡಬೇಕು ಎಂಬ ನಿಟ್ಟಿನಲ್ಲೇ ನಾವು ರಾಜ್ಯಾದ್ಯಂತ ವಿಶ್ವದರ್ಜೆಯ ಕ್ರಿಕೆಟ್ ಅಂಗಣಗಳನ್ನು ರಚಿಸಿದ್ದೇವೆ. ಹುಬ್ಬಳ್ಳಿ, ಚಿಕ್ಕಮಂಗಳೂರು, ಶಿವಮೊಗ್ಗದಲ್ಲಿ ಸಹ ಇದೇ ರೀತಿಯ ವಿಶ್ವದರ್ಜೆಯ ಕ್ರೀಡಾಂಗಣಗಳನ್ನು ನಿರ್ಮಿಸಿದ್ದೇವೆ. ಇದರೊಂದಿಗೆ ರಾಜ್ಯ ಕ್ರಿಕೆಟ್ ಸಂಸ್ಥೆಯ ಕ್ರಿಕೆಟ್ ಅಭಿವೃದ್ಧಿಯೇ ಮುಖ್ಯ ಗುರಿ ಎಂಬ ನಿಯಮವನ್ನು ನಾವು ನಿಜವಾಗಿಸಿದ್ದೇವೆ. ಮೂರು ವರ್ಷದ ಆಡಳಿತದಲ್ಲಿ ಸಾಧ್ಯವಾದಷ್ಟು ಅಭಿವೃದ್ಧಿಯತ್ತ ಗಮನಹರಿಸಿದ್ದೇವೆ' ಎಂದು ಕೆಎಸ್‌ಸಿಎ ಅಧ್ಯಕ್ಷ ಅನಿಲ್ ಕುಂಬ್ಳೆ ತಿಳಿಸಿದರು

**ಗೆಲುವಿನ ಓಟವನ್ನು ಮುಂದುವರಿಸಿದ ಎಫ್-1 ಚಾಲಕ ಸೆಬಾಸ್ಟಿಯನ್ ವೆಟಲ್**

ಪ್ರಸಕ್ತ ಸಾಲಿನ ಫಾರ್ಮುಲಾ ಒನ್ ಗ್ರ್ಯಾನ್ ಪ್ರೀ ಚಾಂಪಿಯನ್‌ಶಿಪ್ ಅನ್ನು ವಶಪಡಿಸಿಕೊಂಡಿರುವ ರೆಡ್‌ಬುಲ್ ಚಾಲಕ ಸೆಬಾಸ್ಟಿಯನ್ ವೆಟಲ್ ತಮ್ಮ ಗೆಲುವಿನ ಓಟವನ್ನು ಮುಂದುವರಿಸಿದ್ದಾರೆ. ಅಬುದಾಬಿಯಲ್ಲಿ ನಡೆದ ರೇಸ್‌ನಲ್ಲಿ ವೆಟಲ್ ಅಗ್ರಸ್ಥಾನ ಪಡೆದಿದ್ದಾರೆ. ಈ ಮೂಲಕ ವೆಟಲ್ ಪ್ರಸಕ್ತ ಸಾಲಿನಲ್ಲಿ 11ನೇ ರೇಸ್ ತಮ್ಮದಾಗಿಸಿಕೊಂಡಿದ್ದು, ಸತತ ಏಳನೇ ಬಾರಿಗೆ ರೇಸ್ ಗೆದ್ದುಕೊಂಡಿದ್ದಾರೆ.

**ಇತರೆ ಸ್ಥಾನಗಳು:**

- ಈ ರೇಸ್‌ನಲ್ಲೂ 25 ಅಂಕಗಳನ್ನು ಪಡೆದುಕೊಂಡಿರುವ ವೆಟಲ್, ಪ್ರಸಕ್ತ ಸಾಲಿನಲ್ಲಿ 347 ಅಂಕಗಳನ್ನು ಪಡೆದುಕೊಂಡಿದ್ದಾರೆ.
- ನಂತರದ ಸ್ಥಾನದಲ್ಲಿ ಫೆರಾರಿಯ ಫರ್ನಾಂಡೊ ಆಲೊನ್ಸೊ 217 ಅಂಕಗಳನ್ನು ಪಡೆದುಕೊಂಡಿದ್ದಾರೆ.
- ಇನ್ನು ತಂಡಗಳ ಪಟ್ಟಿಯಲ್ಲಿ ರೆಡ್‌ಬುಲ್ ತಂಡ 513 ಅಂಕಗಳನ್ನು ಪಡೆದುಕೊಂಡಿದ್ದು, ಮರ್ಸಿಡೀಸ್ 334 ಅಂಕಗಳನ್ನು ಪಡೆದುಕೊಂಡಿದೆ.

**ರೆಸ್ಟಾ 6ನೇ ಸ್ಥಾನ:**

ಕಳೆದ ಕೆಲವು ರೇಸ್‌ಗಳಲ್ಲಿ ನೀರಸ ಪ್ರದರ್ಶನ ತೋರುತ್ತಿದ್ದ ಫೋರ್ಸ್ ಇಂಡಿಯಾ ಅಬುದಾಭಿ ರೇಸ್‌ನಲ್ಲಿ ಸಮಾಧಾನಕರ ಪ್ರದರ್ಶನ ನೀಡಿದೆ. ಫೋರ್ಸ್ ಇಂಡಿಯಾದ ಚಾಲಕ ಪೌಲ್ ಡಿ ರೆಸ್ಟಾ 6ನೇ ಸ್ಥಾನ ಪಡೆದಿದ್ದಾರೆ. ಇದು ಪ್ರಸಕ್ತ ಸಾಲಿನಲ್ಲಿ ರೆಸ್ಟಾ ಅವರ ಎರಡನೇ ಉತ್ತಮ ಪ್ರದರ್ಶನವಾಗಿದೆ. ರೆಸ್ಟಾ ಈ ರೇಸ್‌ನಲ್ಲಿ ಮರ್ಸಿಡೀಸ್‌ನ ಲೂಯಿಸ್ ಹ್ಯಾಮಿಲ್ಟನ್ ಅವರನ್ನು ಹಿಂದಿಕ್ಕಿದ್ದಾರೆ. ಇನ್ನು ಆಯಡ್ರಿಯಾನ್ ಸುಟಿಲ್ 10ನೇ ಸ್ಥಾನ ಪಡೆದಿದ್ದಾರೆ. ಈ ಮೂಲಕ ರೆಸ್ಟಾ 8 ಹಾಗೂ ಸುಟಿಲ್ 1 ಅಂಕಗಳನ್ನು ಪಡೆದುಕೊಂಡಿದ್ದಾರೆ. ರೆಸ್ಟಾ ಪ್ರಸಕ್ತ ಸಾಲಿನಲ್ಲಿ 48 ಅಂಕಗಳನ್ನು ಪಡೆದಿದ್ದು, ಸುಟಿಲ್ 29 ಅಂಕಗಳನ್ನು ಗಳಿಸಿದ್ದಾರೆ

# ಪ್ರಶಸ್ತಿಗಳು

**ಅಣ್ಣಾ ಹಜಾರೆಗೆ "ಅಲ್ಲರ್ಡ್ ಅಂತರರಾಷ್ಟ್ರೀಯ ಸಮಗ್ರತೆ ಉದ್ಘಾಟನಾ ಪ್ರಶಸ್ತಿ"**

ಭ್ರಷ್ಟಾಚಾರ ವಿರುದ್ಧ ಇಳಿವಯಸ್ಸಿನಲ್ಲೂ ಕೆಚ್ಚೆದೆಯಿಂದ ಹೋರಾಟ ಮಾಡುತ್ತಿರುವ ಭಾರತದ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಅವರಿಗೆ "ಯೂನಿವರ್ಸಿಟಿ ಆಫ್ ಬ್ರಿಟಿಷ್ ಕೊಲೊಂಬಿಯಾಸ್ ಫಾಕಲ್ಟಿ ಆಫ್ ಲಾ" ವತಿಯಿಂದ ನೀಡಲಾದ ಮೊದಲ ಅಲ್ಲರ್ಡ್ ಅಂತರರಾಷ್ಟ್ರೀಯ ಸಮಗ್ರತೆ ಪ್ರಶಸ್ತಿ (Allard International Integrity Award) ಅನ್ನು ನೀಡಿ ಗೌರವಿಸಲಾಗಿದೆ. ಭ್ರಷ್ಟಾಚಾರವನ್ನು ತೊಳೆದು ಹಾಕಿ ಆಡಳಿತದಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸುವುದಕ್ಕೆ ಹಜಾರೆ ವಹಿಸಿರುವ ಶ್ರಮವನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**ಪ್ರಶಸ್ತಿಯ ಬಗ್ಗೆ:**

- ಅಲ್ಲರ್ಡ್ ಪ್ರಶಸ್ತಿಯನ್ನು ಅಕ್ಟೋಬರ್ 2012 ರಲ್ಲಿ ಸ್ಥಾಪಿಸಲಾಗಿದೆ. "ಯೂನಿವರ್ಸಿಟಿ ಆಫ್ ಬ್ರಿಟಿಷ್ ಕೊಲೊಂಬಿಯಾಸ್ ವಿದ್ಯಾರ್ಥಿಯಾದ ಪೀಟರ್ ಎ. ಅಲ್ಲರ್ಡ್ ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ.
- ಪ್ರಶಸ್ತಿಯನ್ನು ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಶ್ರಮಿಸುವ ವ್ಯಕ್ತಿ ಅಥವಾ ಸಂಸ್ಥೆಗೆ ನೀಡಲಾಗುವುದು. ಭ್ರಷ್ಟಾಚಾರ ನಿರ್ಮೂಲನೆಗೆ ನೀಡಲಾಗುವ ಅತ್ಯುನ್ನತ ಪ್ರಶಸ್ತಿಯೆಂದೇ ಇದನ್ನು ಪರಿಗಣಿಸಲಾಗಿದೆ.

ಅಮೆರಿಕ ಹಾಗೂ ಜರ್ಮನ್ ಸಂಜಾತ ವಿಜ್ಞಾನಿಗಳಿಗೆ ವೈದ್ಯಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿ

ದೇಹದ ನಿರ್ದಿಷ್ಟ ಸ್ಥಳಕ್ಕೆ, ನಿರ್ದಿಷ್ಟ ಸಮಯಕ್ಕೆ ಜೀವ ರಕ್ಷಕ ಪ್ರೋಟಿನ್ ಹಾಗೂ ಕಣಗಳನ್ನು ತಲುಪಿಸುವ ಜೀವಕೋಶ ಗಳ ಸಂಕೀರ್ಣ ಸಾಗಣೆ ವ್ಯವಸ್ಥೆ ಸಂಶೋಧಿಸಿದ ಅಮೆರಿಕದ ಮೂಲದ ಇಬ್ಬರು ಹಾಗೂ ಜರ್ಮನ್ ಸಂಜಾತ ಒಬ್ಬ ವಿಜ್ಞಾನಿಗೆ ಜಗತ್ತಿನ ಅತ್ಯುನ್ನತ ಗೌರವವಾದ ವೈದ್ಯಶಾಸ್ತ್ರ ನೊಬೆಲ್ ಲಭಿಸಿದೆ.

**ಯಾರಿಗೆ ಪ್ರಶಸ್ತಿ?**

ಅಮೆರಿಕದ ಜೇಮ್ಸ್ ರೋಥ್ ಮನ್, ರ್‍ಯಾಂಡಿ ಸ್ಕೀಕ್‌ಮ್ಯಾನ್ ಹಾಗೂ ಜರ್ಮನಿ ಮೂಲದ ಥಾಮಸ್ ಸುಧೋಫ್ ಈ ಬಾರಿಯ ವೈದ್ಯಕೀಯ ನೊಬೆಲ್ ಪ್ರಶಸ್ತಿ ವಿಜೇತರು. ಪ್ರಶಸ್ತಿ 7.4 ಕೋಟಿ ರೂ. ನಗದು ಬಹುಮಾನ ಹೊಂದಿದೆ. ಪ್ರತಿ ವರ್ಷದಂತೆ ಈ ಸಲವೂ ನೊಬೆಲ್ ಪ್ರಶಸ್ತಿಗಳ ಘೋಷಣೆ ಆರಂಭವಾಗಿದ್ದು ಸೋಮವಾರ ವೈದ್ಯಶಾಸ್ತ್ರ ನೊಬೆಲ್ ಪ್ರಕಟವಾಗಿದೆ.

**ಮೂವರು ವಿಜ್ಞಾನಿಗಳ ಸಾಧನೆ ಏನು?**

ಜೀವಕೋಶಗಳು ಸರಿಯಾದ ಸಮಯಕ್ಕೆ, ಸರಿಯಾದ ಸ್ಥಳಕ್ಕೆ ಜೀವರಕ್ಷಕ ಪ್ರೋಟಿನ್ ಹಾಗೂ ಕಣಗಳನ್ನು ಕಳಿಸುತ್ತವೆ. ಇದಕ್ಕಾಗಿ ಪ್ರತ್ಯೇಕ ಸಾಗಣೆ ವ್ಯವಸ್ಥೆಯನ್ನೇ ಹೊಂದಿವೆ. ಈ ಸಾಗಣೆ ಮಾರ್ಗವನ್ನು ಮೂವರು ವಿಜ್ಞಾನಿಗಳು ಶೋಧಿಸಿದ್ದಾರೆ. ಒಂದು ವೇಳೆ ಈ ಸಾಗಣೆ ಮಾರ್ಗದಲ್ಲಿ ಏರುಪೇರುಗಳಾದರೆ ನರರೋಗಗಳು, ಮಧುಮೇಹದಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

**ಉಪಯೋಗವೇನು?**

ಜೀವಕೋಶಗಳ ಸಾಗಣೆ ಮಾರ್ಗವನ್ನು ಮೂವರೂ ವಿಜ್ಞಾನಿಗಳು ಶೋಧಿಸಿರುವುದರಿಂದ ದೇಹದಲ್ಲಿನ ಸಕ್ಕರೆ ಅಂಶ ನಿಯಂತ್ರಿಸುವ ಇನ್ಸುಲಿನ್ ರಕ್ತಕ್ಕೆ ಹೇಗೆ ಬಿಡುಗಡೆಯಾಗುತ್ತೆ, ನರ ಹಾಗೂ ಜೀವಕೋಶಗಳ ಮಧ್ಯೆ ಹೇಗೆ ಸಂಪರ್ಕ ಏರ್ಪಡುತ್ತದೆ, ಟೆಟಾನಸ್‌ನಂತಹ ವೈರಾಣು ಹೇಗೆ ಜೀವಕೋಶಗಳಿಗೆ ಸೋಂಕು ತಗುಲಿಸಿ, ಪ್ರತಿ ವರ್ಷ ಸಾವಿರಾರು ಮಕ್ಕಳನ್ನು ಕೊಲ್ಲುತ್ತದೆ ಎಂಬ ಪ್ರಶ್ನೆಗಳಿಗೆ ವಿವರಣೆ ಪಡೆಯಲು ಸಹಾಯಕವಾಗುತ್ತದೆ.

**'ದೇವಕಣ'ಗಳ ಅಸ್ತಿತ್ವ ಸಾಬೀತು ಪಡಿಸದ ವಿಜ್ಞಾನಿಗಳಿಗೆ ಭೌತಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿ**

ವಿಶ್ವದ ಸೃಷ್ಟಿಗೆ ಮೂಲ ಕಾರಣ ಎಂದು ನಂಬಲಾದ 'ದೇವ ಕಣ'ಗಳ (ಗಾಡ್ ಪಾರ್ಟಿಕಲ್)ಅಸ್ತಿತ್ವ ಸಾಬೀತು ಪಡಿಸಿದ್ದಕ್ಕಾಗಿ ಬ್ರಿಟನ್ನಿನ ಪೀಟರ್ ಹಿಗ್ಸ್ ಮತ್ತು ಬೆಲ್ಜಿಯಂನ ಫ್ರಾಂಕಾಯ್ಸ್ ಎಂಗ್ಲರ್ಟ್ ಅವರಿಗೆ ಈ ಬಾರಿಯ ಭೌತಶಾಸ್ತ್ರ ನೊಬೆಲ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

**'ದೇವಕಣ' ಪ್ರಯೋಗ:**

ದೇವ ಕಣಗಳ ಪತ್ತೆ ಕಾರ್ಯದ ಇತಿಹಾಸ 1964ರಿಂದ ಆರಂಭವಾಗುತ್ತದೆ. ಅಂದು 6 ಜನ ಭೌತ ಶಾಸ್ತ್ರಜ್ಞರು ಮೂರು ತಂಡಗಳಲ್ಲಿ ಈ ನಿಟ್ಟಿನಲ್ಲಿ ಸ್ವತಂತ್ರ ಸಂಶೋಧನೆ ಕೈಗೊಂಡಿದ್ದರು. 'ಅಗೋಚರವಾದ ಸ್ಥಳದಿಂದ ಜನ್ಮ ತಾಳುವ ಕಣ ವಿಶ್ವದ ಸೃಷ್ಟಿಗೆ ಕಾರಣವಾಗಿದೆ. ಇಡೀ ಬ್ರಹ್ಮಾಂಡ ಶೂನ್ಯವಾಗಿ ಕಂಡರೂ ಅದರೊಳಗೆ ಕಣ ಇದ್ದೇ ಇರುತ್ತದೆ. ಕಣಗಳಿಲ್ಲದೇ ನಮ್ಮ ಅಸ್ತಿತ್ವವೇ ಇಲ್ಲ' ಎಂದು ನೊಬೆಲ್ ತೀರ್ಪುಗಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ವಿಟ್ಜರ್ಲೆಂಡ್ ನ ಯುರೋಪ್ ಪರಮಾಣು ಸಂಶೋಧನಾ ಕೇಂದ್ರ (ಸಿಇಆರ್‌ಎನ್) 'ದೇವ ಕಣ'ವನ್ನು ಪತ್ತೆ ಹಚ್ಚಿರುವುದಾಗಿ ಹೇಳಿಕೊಂಡಿತ್ತು. ಹಿಗ್ಸ್ ಮತ್ತು ಎಂಗ್ಲರ್ಟ್ ನೇತೃತ್ವದ ತಂಡವು ಕಳೆದ ವರ್ಷ 'ದೇವ ಕಣ'ದ ಅಸ್ತಿತ್ವ ಸಾಬೀತು ಮಾಡಿ ಇಡೀ ವಿಶ್ವದಲ್ಲಿ ಸಂಚಲನ ಮೂಡಿಸಿತ್ತು. ಐದು ದಶಕಗಳ ಪರಿಶ್ರಮದ ಬಳಿಕ ಹಿಗ್ಸ್ ಮತ್ತು ಎಂಗ್ಲರ್ಟ್ ಅವರು ಸಹ ದ್ಯೋಗಿಗಳ ಜೊತೆ ಸೇರಿ ಕಣ ಸಿದ್ಧಾಂತಕ್ಕೆ ಸಂಬಂಧಿಸಿದ ಮಹತ್ವದ ಸಂಶೋಧನೆ ಮಾಡಿದ್ದರು. ಈ ಸಾಧನೆಗಾಗಿಯೇ ಅವರನ್ನು ಈ ಪ್ರಶಸ್ತಿ ಅರಸಿ ಬಂದಿದೆ.

**ನೊಬೆಲ್ ಪ್ರಶಸ್ತಿ:**

ಈ ಇಬ್ಬರು ಭೌತ ವಿಜ್ಞಾನಿಗಳು ರೂ. 7.2 ಕೋಟಿ (12.5 ಲಕ್ಷ ಡಾಲರ್) ಮೊತ್ತದ ಪ್ರಶಸ್ತಿಯನ್ನು ಹಂಚಿಕೊಳ್ಳಲಿದ್ದಾರೆ. ಡಿ.10ರಂದು ಸ್ಟಾಕ್ ಹೋಮ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಖ್ಯಾತ ವಿಜ್ಞಾನಿ ಆಲ್‌ಫ್ರೆಡ್ ನೊಬೆಲ್ ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತದೆ.

**ಕೃಷಿ ವಿಜ್ಞಾನಿ ಎಂ.ಎಸ್.ಸ್ವಾಮಿನಾಥನ್ ರವರಿಗೆ 'ಇಂದಿರಾಗಾಂಧಿ ರಾಷ್ಟ್ರೀಯ ಭಾವೈಕ್ಯ' ಪ್ರಶಸ್ತಿ**

ಹಸಿರು ಕ್ರಾಂತಿಯ ಹರಿಕಾರರೆಂದೇ ಪ್ರಸಿದ್ಧರಾಗಿರುವ ಖ್ಯಾತ ಕೃಷಿ ವಿಜ್ಞಾನಿ ಎಂ.ಎಸ್.ಸ್ವಾಮಿನಾಥನ್ ಅವರು ಇಂದಿರಾ ಗಾಂಧಿ ರಾಷ್ಟ್ರೀಯ ಭಾವೈಕ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. 2012ನೇ ಸಾಲಿನ ಪ್ರಶಸ್ತಿ ಒಂದು ಪಾರಿತೋಷಕ, ಮತ್ತು 5 ಲಕ್ಷ ರೂ. ನಗದನ್ನು ಇಳಗೊಂಡಿರಲಿದೆ. ಅ.31 ರಂದು ನಡೆಯಲಿರುವ ಇಂದಿರಾ ಗಾಂಧಿ ಪುಣ್ಯತಿಥಿಯಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು, 88 ವರ್ಷದ ಎಂ.ಎಸ್.ಸ್ವಾಮಿನಾಥನ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

**ಪ್ರಶಸ್ತಿ ಪಡೆದ ಗಣ್ಯರು:**

- ಈ ಹಿಂದೆ ಅರುಣಾ ಅಸಫ್ ಅಲಿ, ಪಿ.ಎನ್.ಹಾಕ್ಸರ್, ಎಂಎಸ್ ಸುಬ್ಬುಲಕ್ಷ್ಮಿ, ಎಪಿಜೆ ಅಬ್ದುಲ್ ಕಲಾಂ ಮತ್ತು ಶಂಕರ್ ದಯಾಳ್ ಶರ್ಮಾ ಹಾಗೂ ರಾಜೀವ್ ಗಾಂಧಿ ಅವರಿಗೆ ಮರಣೋತ್ತರವಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಸ್ವಾಮಿನಾಥನ್ ಈ ಹಿಂದೆ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಮತ್ತು ಭಾರತ ಸರ್ಕಾರದ ಕೃಷಿ ಸಂಶೋಧನೆ ಮತ್ತು ಕಾರ್ಯದರ್ಶಿ ಮಂಡಳಿಯ ಪ್ರಧಾನ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು.
- ಸ್ವಾಮಿನಾಥನ್ ಅವರು ಭಾರತೀಯ ಕೃಷಿ ಕ್ಷೇತ್ರದ ಪುನರುತ್ಥಾನಕ್ಕೆ ನೀಡಿದ ಕೊಡುಗೆ ದೇಶದಲ್ಲಿ ಹಸಿರು ಕ್ರಾಂತಿಗೆ ಕಾರಣವಾಗಿತ್ತು

## ಕೆನಡಾದ ಲೇಖಕಿ ಅಲ್ಸೈಸ್ ಮನ್ರೊರವರಿಗೆ ಈ ಬಾರಿಯ ಸಾಹಿತ್ಯ ನೊಬೆಲ್ ಪ್ರಶಸ್ತಿ

'ಕೆನಡಿಯನ್ ಚೆಕೊವ್' ಎಂದೂ ಪ್ರಸಿದ್ಧರಾಗಿರುವ ಕೆನಡಾದ ಹೆಸರಾಂತ ಲೇಖಕಿ ಅಲ್ಸೈಸ್ ಮನ್ರೊ ಅವರಿಗೆ ಈ ಬಾರಿಯ ಸಾಹಿತ್ಯ ನೊಬೆಲ್ ಲಭಿಸಿದೆ. ತನ್ಮೂಲಕ, 1901 ರಲ್ಲಿ ಸ್ಥಾಪನೆಯಾದ ಈ ಪ್ರಶಸ್ತಿ 13 ನೇ ಬಾರಿಗೆ ಮಹಿಳೆಯ ಪಾಲಾಗಿದೆ. ಕೆನಡಾ ಇದೇ ಮೊದಲ ಬಾರಿಗೆ ಸಾಹಿತ್ಯ ನೊಬೆಲ್ ಪಡೆದ ಸಂಭ್ರಮದಲ್ಲಿದೆ.

**ಅಲ್ಸೈಸ್ ಮನ್ರೊ:**

ಸಮಕಾಲೀನ ಸಣ್ಣಕತೆಗಳ ಗುರುವಾಗಿರುವ 82 ವರ್ಷದ ಮನ್ರೊ ಅವರು ಮಾನವನ ದುರ್ಬಲ ಪರಿಸ್ಥಿತಿಯನ್ನು ಕೇಂದ್ರೀಕರಿಸಿ ಹಲವಾರು ಸಣ್ಣಕತೆಗಳನ್ನು ಬರೆದಿರುವ ಕಾರಣಕ್ಕೆ ಅವರಿಗೆ ಸಾಹಿತ್ಯ ನೊಬೆಲ್ ಸಂದಿದೆ. 'ಮನ್ರೊ ಅವರ ಸಣ್ಣ ಕಥೆಗಳು ನಗರಗಳ ಸಮಕಾಲೀನ ಒಟ್ಟು ಜೀವನ ಶೈಲಿಯನ್ನು ವಿವರಿಸುತ್ತವೆ. ಸಾಮಾಜಿಕ ಮಾನ್ಯತೆಗಾಗಿ ನಡೆಸುವ ಹೋರಾಟ, ತಲೆಮಾರುಗಳ ಅಂತರದಿಂದ ಉಂಟಾಗುವ ನೈತಿಕ ಘರ್ಷಣೆ ಸೇರಿದಂತೆ ವಿವಿಧ ಆಯಾಮಗಳ ಮೇಲೆ ಬೆಳಕು ಹರಿಸುತ್ತವೆ' ಎಂದಿದ್ದಾರೆ. ಮನ್ರೊ ಅವರಿಗೆ 7.6 ಕೋಟಿ ರೂ. ನಗದು ಬಹುಮಾನ ದೊರೆಯಲಿದೆ. ಡಿ.10 ರಂದು ಸ್ಟಾಕ್‌ಹೋಮ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಅವರಿಗೆ ಸಾಹಿತ್ಯ ನೊಬೆಲ್ ಪ್ರದಾನ ಮಾಡಲಾಗುತ್ತದೆ. ಕಳೆದ ವರ್ಷ ಚೀನಾದ ಕಾದಂಬರಿಕಾರ ಮೊ ಯಾನ್ ಅವರಿಗೆ ಸಾಹಿತ್ಯ ನೊಬೆಲ್ ಲಭಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ಕಂಪ್ಯೂಟರ್ ಆಧಾರಿತ ವ್ಯವಸ್ಥೆ ಅಭಿವೃದ್ಧಿಪಡಿಸಿದ ವಿಜ್ಞಾನಿಗಳಿಗೆ ರಸಾಯನಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿ

ಸಂಕೀರ್ಣ ರಾಸಾಯನಿಕ ಕ್ರಿಯೆಗಳನ್ನು ತಿಳಿಸುವ ಕಂಪ್ಯೂಟರ್ ಆಧಾರಿತ ವ್ಯವಸ್ಥೆ ಅಭಿವೃದ್ಧಿಪಡಿಸಿದ ಮೂವರು ವಿಜ್ಞಾನಿಗಳಿಗೆ ಈ ಬಾರಿಯ ರಸಾಯನಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿ ಲಭಿಸಿದೆ. ಅಮೆರಿಕದ ಮಾರ್ಟಿನ್ ಕಾರ್ಪ್ಲಸ್, ಮೈಕೆಲ್ ಲೆವಿಟ್ ಮತ್ತು ಎರಿ ವಾರ್ಶೆಲ್ ಅವರು ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ.

**ವಿಜ್ಞಾನಿಗಳ ಬಗ್ಗೆ:**

83 ವರ್ಷದ ಮಾರ್ಟಿನ್ ಮೂಲತಃ ಆಸ್ಟ್ರಿಯಾದವರು. 66 ವರ್ಷದ ಲೆವಿಟ್ ಮತ್ತು 72 ವರ್ಷದ ವಾರ್ಶೆಲ್ ಕ್ರಮವಾಗಿ ಬ್ರಿಟನ್ ಮತ್ತು ಇಸ್ರೇಲ್ ಮೂಲದವರು. ಇವರು ಅಮೆರಿಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಸಂಶೋಧನೆಗಳಲ್ಲಿ ತೊಡಗಿದ್ದಾರೆ. ಈ ಮೂವರು ಅಭಿವೃದ್ಧಿಪಡಿಸಿದ ಭಾರಿ ಸಾಮರ್ಥ್ಯದ ಕಂಪ್ಯೂಟರ್ ಆಧಾರಿತ ವ್ಯವಸ್ಥೆ, ಸಂಕೀರ್ಣ ರಾಸಾಯನಿಕ ಕ್ರಿಯೆಗಳನ್ನು ಕ್ಷಣ ಮಾತ್ರದಲ್ಲಿ ತಿಳಿಸಬಲ್ಲದು. 'ಔಷಧ ಉತ್ಪಾದನಾ ತಂತ್ರಜ್ಞಾನ ಮತ್ತು ರಾಸಾಯನಿಕ ವಸ್ತುಗಳ ಉತ್ಪಾದನಾ ಕ್ಷೇತ್ರದಲ್ಲಿ ಈ ಹೊಸ ಸಾಧನ ಕ್ರಾಂತಿ ಮಾಡಲಿದೆ' ಎಂದು ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿ ತಿಳಿಸಿದೆ. ಇಲ್ಲಿಯವರೆಗೂ ಜಾರಿಯಲ್ಲಿದ್ದ ಸಾಂಪ್ರದಾಯಿಕ ಪದ್ಧತಿ ಅನೇಕ ಹಂತದ ವ್ಯವಸ್ಥೆ ಹೊಂದಿತ್ತು. ಹೀಗಾಗಿ ಸಂಕೀರ್ಣ ರಾಸಾಯನಿಕ ಕ್ರಿಯೆಗಳನ್ನು ಅರಿಯುವುದು ಸುಲಭದ ಕೆಲಸವಾಗಿರಲಿಲ್ಲ. ಜೊತೆಗೆ ಇದಕ್ಕೆ ದೀರ್ಘ ಸಮಯ ಬೇಕಾಗಿತ್ತು.

ರೂ.7.78 ಕೋಟಿ ಬಹುಮಾನ ಮೊತ್ತವನ್ನು ಮೂವರೂ ಸಮನಾಗಿ ಹಂಚಿಕೊಳ್ಳಲಿದ್ದಾರೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ಈ ಬಾರಿ ಬಹುಮಾನದ ಮೊತ್ತ ಕಡಿತಗೊಳಿಸಲಾಗಿದೆ. ಡಿಸೆಂಬರ್ 10ರಂದು ಸ್ಟಾಕ್‌ಹೋಮ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ಅಮೆರಿಕದ ಮೂವರು ತಜ್ಞರಿಗೆ ಈ ಸಾಲಿನ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ

ಷೇರು, ಡಿಬೆಂಚರ್ಸ್, ಭದ್ರತಾ ಪತ್ರಗಳು, ಸಾಲ ಪತ್ರಗಳು ಮುಂತಾದ ರೂಪದ ಆಸ್ತಿಗಳ ಬೆಲೆಗಳಲ್ಲಿ ಉಂಟಾಗುವ ಏರಿಳಿತಗಳ ಮುನ್ಸೂಚನೆ ಕುರಿತು ಗಹನ ಅಧ್ಯಯನ ನಡೆಸಿದ್ದ ಅಮೆರಿಕದ ಮೂವರು ತಜ್ಞರಾದ ಲಾರ್ಸ್ ಪೀಟರ್ ಹ್ಯಾನ್‌ಸೆನ್, ಯೂಜೀನ್ ಫಮ ಹಾಗೂ ರಾಬರ್ಟ್ ಶಿಲರ್ ಅವರಿಗೆ ಈ ಸಾಲಿನ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ಒಲಿದಿದೆ.

**ಅಧ್ಯಯನದ ವಿವರ:**

- ಈ ಅರ್ಥಶಾಸ್ತ್ರಜ್ಞರು ಷೇರು, ಸಾಲಪತ್ರ, ಡಿಬೆಂಚರ್ಸ್ ಮುಂತಾದ ಆಸ್ತಿ ಬೆಲೆಗಳ ಒಲವು ಯಾವ ಸಮಯದಲ್ಲಿ ಯಾವ ರೀತಿಯಲ್ಲಿರಲಿದೆ, ಯಾವ ಸಂದರ್ಭಗಳಲ್ಲಿ ಬೆಲೆ ಇಳಿಕೆ ಕಾಣಿಸಿಕೊಳ್ಳಲಿದೆ ಮುಂತಾದ ಪ್ರವೃತ್ತಿಗಳನ್ನು ನಿಖರವಾಗಿ ಗುರುತಿಸುವಂಥ ಅಧ್ಯಯನ ನಡೆಸಿದ್ದರು.
- ಹೂಡಿಕೆದಾರರ ಮಾನಸಿಕ ನಿರ್ಧಾರಗಳೂ ಇವರ ಅಧ್ಯಯನದ ಭಾಗವಾಗಿದ್ದು, ಷೇರುದಾರರು ಹಣ ಹಿಂಪಡೆಯುವಂಥ ಪರಿಸ್ಥಿತಿಗಳೇನು, ಹೂಡಿಕೆ ಅಧಿಕಗೊಳಿಸಲು ಕಾರಣಗಳೇನು ಇನ್ನೂ ಮುಂತಾದ ಅಂಶಗಳನ್ನೂ ಅಧ್ಯಯನ ಒಳಗೊಂಡಿತ್ತು.
- ಹೀಗಾಗಿ ಆಸ್ತಿ ಮಾರುಕಟ್ಟೆಯ ಪ್ರವೃತ್ತಿಗಳ ನಿಖರ ಮುನ್ಸೂಚನೆ ಸುಲಭ ಸಾಧ್ಯವಾಗಿತ್ತು. ಈ ಹಿನ್ನೆಲೆಯಲ್ಲಿಯೇ ಷೇರು ಪೇಟೆಯಲ್ಲಿ ಹೂಡಿಕೆ ಮಾಡಲು ಇಚ್ಛಿಸುವವರಿಗೆ ಇವರ ಅಧ್ಯಯನ ದಾರಿದೀಪದಂತಿದೆ ಎಂದು ನೊಬೆಲ್ ಅಕಾಡೆಮಿ ಅಭಿಪ್ರಾಯಪಟ್ಟಿದೆ.
- ಫಮ ಹಾಗೂ ಹ್ಯಾನ್‌ಸನ್ ಅವರು ಶಿಕಾಗೊ ವಿವಿಯಲ್ಲಿ ಪ್ರಾಧ್ಯಾಪಕರು, ಶಿಲರ್ ಅವರು ಕನೆಕ್ಟಿಕಟ್‌ನ ಯೇಲ್ ವಿವಿಯ ಅರ್ಥಶಾಸ್ತ್ರಜ್ಞರು.

**ಅಮೆರಿಕದ ಮೇಲುಗೈ:**

ಕಳೆದ 10 ವರ್ಷಗಳಲ್ಲಿ 20 ಅರ್ಥಜ್ಞರಿಗೆ ನೊಬೆಲ್ ದೊರಕಿದ್ದು, ಇವರಲ್ಲಿ 17 ಮಂದಿ ಅಮೆರಿಕದವರೇ ಆಗಿದ್ದಾರೆ. ಕಳೆದ ವರ್ಷ ಅರ್ಥ ನೊಬೆಲ್‌ಗೆ ಭಾಜನರಾಗಿದ್ದ ಅಲ್ವಿನ್ ರೋತ್, ಲಿಯ್ಡ್ ಶೇಪ್ಲಿ ಅವರೂ ಅಮೆರಿಕದ ತಜ್ಞರು

**ರಾಸಾಯನಿಕ ಅಸ್ತ್ರ ತಡೆ ಸಂಘಟನೆ (ಒಪಿಸಿಡಬ್ಲ್ಯೂ) ಗೆ ನೊಬೆಲ್ ಶಾಂತಿ ಪುರಸ್ಕಾರ**

ರಾಸಾಯನಿಕ ಅಸ್ತ್ರ ಮುಕ್ತ ವಿಶ್ವಕ್ಕಾಗಿ ಪಣ ತೊಟ್ಟು ದುಡಿಯುತ್ತಿರುವ ಅಮೆರಿಕ ಬೆಂಬಲಿತ ರಾಸಾಯನಿಕ ಅಸ್ತ್ರ ತಡೆ ಸಂಘಟನೆ'ಗೆ ( ಒಪಿಸಿಡಬ್ಲ್ಯೂ) ಈ ಸಾಲಿನ ಶಾಂತಿ ವಿಭಾಗದ ನೊಬೆಲ್ ಸಂದಿದೆ. ''ವಿಷಾನಿಲ ಅಸ್ತ್ರಗಳನ್ನು ನಾಶಗೊಳಿಸಲು ಹಾಗೂ ಜಗತ್ತನ್ನು ಅಸ್ತ್ರ ಮುಕ್ತ ಜಾಗವನ್ನಾಗಿಸಲು ಅವಿರತ ಶ್ರಮಿಸುತ್ತಿರುವ ಒಪಿಸಿಡಬ್ಲ್ಯೂ ಕಾರ್ಯವನ್ನು ಶಾಂತಿ ನೊಬೆಲ್ ಮೂಲಕ ಶ್ಲಾಘಿಸಲಾಗುತ್ತಿದೆ,'' ಎಂದು ನೊಬೆಲ್ ಸಮಿತಿ ಮುಖ್ಯಸ್ಥ ಥೋರ್ಬ್‌ಜೋರ್ನ್ ಘೋಷಿಸಿದರು.

**ಒಪಿಸಿಡಬ್ಲ್ಯೂ ಸಂಘಟನೆ:**

- 1997 ರಲ್ಲಿ ಹುಟ್ಟಿಕೊಂಡ ಒಪಿಸಿಡಬ್ಲ್ಯೂ ನ ಪ್ರಧಾನ ಕಚೇರಿ ನೆದರ್ಲ್ಯಾಂಡ್‌ನ ಹೇಗ್‌ನಲ್ಲಿದೆ.
- ಭಾರತ ಸೇರಿದಂತೆ 189 ರಾಷ್ಟ್ರಗಳು (ವಿಶ್ವದ ಶೇ.92ರಷ್ಟು ಜನಸಂಖ್ಯೆ ಒಳಗೊಂಡ) ಇದರ ಸದಸ್ಯತ್ವ ಸ್ವೀಕರಿಸಿದ್ದು, ಹಲವು ದೇಶಗಳ ಬಳಿಯಿರುವ ರಾಸಾಯನಿಕ ಅಸ್ತ್ರಗಳನ್ನು ನಾಶ ಪಡಿಸುವಂತೆ ಇದು ಮನವೊಲಿಸುತ್ತದೆ.
- ಸುಲಭದಲ್ಲಿ ಬಗ್ಗದೆ ಹೋದರೆ ಅಂತಾರಾಷ್ಟ್ರೀಯ ಸಮುದಾಯದಿಂದ ಒತ್ತಡ ಬೀಳುವಂತೆ ನೋಡಿಕೊಳ್ಳುತ್ತದೆ. ಭವಿಷ್ಯದಲ್ಲೂ ವಿಷಾಸ್ತ್ರಗಳನ್ನು ಅಭಿವೃದ್ಧಿಪಡಿಸದಂತೆ ಕಾಯುತ್ತದೆ.

**ಸಿರಿಯಾದಿಂದ ಮುಂಚೂಣಿಗೆ:**

- ಈ ಸಂಘಟನೆ ಇತ್ತೀಚಿನ ಸಿರಿಯಾ ಬಿಕ್ಕಟ್ಟಿನ ವಿಚಾರವಾಗಿ ಬಹು ಚರ್ಚೆಗೆ ಒಳಗಾಗಿತ್ತು.
- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯದ ಪ್ರಕಾರ ಸಿರಿಯಾದ ರಾಸಾಯನಿಕ ಅಸ್ತ್ರಾಗಾರವನ್ನು ನಾಶಪಡಿಸುವ ಉಸ್ತುವಾರಿಯ ಹೊಣೆ ಒಪಿಸಿಡಬ್ಲ್ಯೂ ಹೆಗಲಿಗೆ ಬಿದ್ದಿದೆ.
- ಈ ಕಾರ್ಯ ಈಗಾಗಲೇ ಆರಂಭಗೊಂಡಿದ್ದು, 2014ರ ಮಧ್ಯಭಾಗದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.
- ಸಂಘರ್ಷ ಪೀಡಿತ ಸಿರಿಯಾದಲ್ಲಿ ರಾಸಾಯನಿಕ ಅಸ್ತ್ರ ಬಳಕೆಗೆ ಕಡಿವಾಣ ಹಾಕುವ ದಿಸೆಯಲ್ಲಿ ಮಾಡಿದ ಕೆಲಸದಿಂದಾಗಿ ಒಪಿಸಿಡಬ್ಲು ವಿಶ್ವದ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು.
- ಅಸ್ತಿತ್ವಕ್ಕೆ ಬಂದ 16 ವರ್ಷಗಳಲ್ಲಿ ಸುಮಾರು 57 ಸಾವಿರ ಟನ್ ರಾಸಾಯನಿಕ ಅಸ್ತ್ರಗಳನ್ನು ಈ ಸಂಸ್ಥೆ ನಾಶ ಮಾಡಿದೆ ಎನ್ನುವುದು ವಿಶೇಷ.

**ಹಿನ್ನೆಲೆ:**

ಮೊದಲ ಜಾಗತಿಕ ಯುದ್ಧದ ಸಮಯದಲ್ಲಿ ರಾಸಾಯನಿಕ ಅಸ್ತ್ರಗಳು ಬಳಕೆಯಲ್ಲಿದ್ದವು. ಹಿಟ್ಲರ್ ಕಾಲದ ಜರ್ಮನಿ, ಅಮೆರಿಕ ಮುಂತಾದ ರಾಷ್ಟ್ರಗಳು ವಿಷಾಸ್ತ್ರ ಪ್ರಯೋಗ ನಡೆಸಿದ್ದವು. ಇದರಿಂದ ಭಾರಿ ಪ್ರಮಾಣದ ಸಾವು ನೋವು ಸಂಭವಿಸಿತ್ತು. ಈ ಘಾಸಿ ಬಳಿಕ ವಿಶ್ವದ ಬಹುತೇಕ ರಾಷ್ಟ್ರಗಳು 1925 ರಲ್ಲಿ 'ಜಿನೇವಾ ಒಪ್ಪಂದ' ಮಾಡಿಕೊಂಡವು. ಈ ಪ್ರಕಾರ ರಾಸಾಯನಿಕ ಅಸ್ತ್ರಗಳ

ಬಳಕೆಗೆ ನಿಷೇಧ ಹೇರಲಾಯಿತು; ಆದರೆ ಇವುಗಳ ಉತ್ಪಾದನೆ ಹಾಗೂ ದಾಸ್ತಾನಿನ ಮೇಲೆ ಕಡಿವಾಣ ಇರಲಿಲ್ಲ. ಹೀಗಾಗಿ 1992-93ರಲ್ಲಿ ಮತ್ತೆ ಸಭೆ ಸೇರಿ ಜಿನಿವಾದಲ್ಲಿ ಸಭೆ ಸೇರಿ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಜಿನಿವಾ ಒಪ್ಪಂದದ ಪ್ರಕಾರ ರಾಸಾಯನಿಕ ಅಸ್ತ್ರಗಳನ್ನು ನಾಶಪಡಿಸುವುದು, ಉತ್ಪಾದನೆ ಮತ್ತು ದಾಸ್ತಾನಿನ ಮೇಲೆ ನಿಷೇಧ ಹೇರುವುದು ಜಾರಿಗೆ ಬಂತು. ಇದರ ಹೊಣೆ ಓಪಿಸಿಡಬ್ಲ್ಯೂ ಪಾಲಿಗೆ ಬಂತು.

**ಕರ್ತವ್ಯಗಳು:**

- ಭಯೋತ್ಪಾದಕರು ಹಾಗೂ ಶತ್ರು ದೇಶಗಳು ತನ್ನ ಸದಸ್ಯ ರಾಷ್ಟ್ರಗಳ ವಿರುದ್ಧ ವಿಷಾನಿಲ ಪ್ರಯೋಗ ಮಾಡದಂತೆ ಕಾಯುವುದೂ ಇದರ ಕರ್ತವ್ಯವಾಗಿದೆ.
- ಸುಮಾರು 500 ಮಂದಿಯನ್ನು ಒಳಗೊಂಡಿರುವ ಒಪಿಸಿಡಬ್ಲ್ಯು ಸ್ವಾಯತ್ತ ಸಂಸ್ಥೆಯಾಗಿದ್ದು, ವಿಶ್ವಸಂಸ್ಥೆಯ ಇಶಾರೆಯಲ್ಲಿ ಕೆಲಸ ಮಾಡುತ್ತದೆ.
- ಸಿರಿಯಾ ಸೇರಿದಂತೆ ಪ್ರಸ್ತುತ ಲಿಬಿಯಾ, ಇರಾಕ್, ಅಮೆರಿಕ ಹಾಗೂ ರಷ್ಯಾ ಬಳಿಯಿರುವ ರಾಸಾಯನಿಕ ಅಸ್ತ್ರಗಳನ್ನು ನಾಶ ಪಡಿಸುವ ಕಾರ್ಯ ಕೈಗೊಂಡಿದೆ.
- ಅಸ್ತ್ರಮುಕ್ತ ಸರ್ವಜನಾಂಗದ ಶಾಂತಿಯ ತೋಟದಂಥ ವಿಶ್ವವನ್ನು ಕಾಣುವುದು ನೊಬೆಲ್ ಪ್ರಶಸ್ತಿ ಸಂಸ್ಥಾಪಕ ಆಲ್‌ಫ್ರೆಡ್ ನೊಬೆಲ್ ಕನಸಾಗಿದ್ದು, ಇದೇ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಒಸಿಡಬ್ಲ್ಯು ಪುರಸ್ಕಾರಕ್ಕೆ ಭಾಜನವಾಗಿರುವುದು ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿದೆ.

**ಭಾರತ ಎರಡನೆಯದು:**

- ಈ ಬಾರಿ ಶಾಂತಿ ನೊಬೆಲ್ ವಿಭಾಗದಲ್ಲಿ ಒಟ್ಟು 259 ಹೆಸರುಗಳು ನಾಮಕರಣಗೊಂಡಿದ್ದವು. ಇದರಲ್ಲಿ 209 ವ್ಯಕ್ತಿಗಳು ಹಾಗೂ 50 ಸಂಘಟನೆಗಳು. ಈ ವಿಭಾಗಕ್ಕೆ ಅತಿ ಹೆಚ್ಚಿನ ಹೆಸರುಗಳನ್ನು ಶಿಫಾರಸು ಮಾಡಿದ್ದ ದೇಶಗಳ ಪಟ್ಟಿಯಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿದ್ದರೆ, 12 ಹೆಸರನ್ನು ಅಂಕಿತಗೊಳಿಸಿದ್ದ ಭಾರತ ಎರಡನೇ ಸ್ಥಾನದಲ್ಲಿತ್ತು. ಅಂದಹಾಗೆ ಇದುವರೆಗೂ 100 ವ್ಯಕ್ತಿಗಳಿಗೆ ಹಾಗೂ 21 ಸಂಘ-ಸಂಸ್ಥೆಗಳಿಗೆ ಶಾಂತಿ ನೊಬೆಲ್ ನೀಡಲಾಗಿದೆ. ಶಾಂತಿ ನೊಬೆಲ್ ಪ್ರಶಸ್ತಿಯು ಸಂಸ್ಥೆಯೊಂದರ ಪಾಲಾಗಿರುವುದು ಇದು ಎರಡನೇ ಬಾರಿ. ಕಳೆದ ವರ್ಷ ಐರೋಪ್ಯ ಒಕ್ಕೂಟಕ್ಕೆ ಈ ಪ್ರಶಸ್ತಿ ಒಲಿದಿತ್ತು. ಇದರಲ್ಲಿ 'ರೆಡ್‌ಕ್ರಾಸ್' ಸಂಸ್ಥೆ ಮೂರು ಬಾರಿ ಹಾಗೂ ವಿಶ್ವಸಂಸ್ಥೆಯ ನಿರಾಶ್ರಿತ ವಿಭಾಗ ಎರಡು ಬಾರಿ ಶಾಂತಿ ನೊಬೆಲ್ ಮನ್ನಣೆಗೆ ಪಾತ್ರವಾಗಿವೆ.

**ಸಾಹಿತ್ಯ ಕ್ಷೇತ್ರದ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ನ್ಯೂಜಿಲೆಂಡ್‌ನ ಎಲೆನಾರ್ ಕ್ಯಾಟನ್ ಗೆ**

ಪ್ರಸಕ್ತ ಸಾಲಿನ ಸಾಹಿತ್ಯ ಕ್ಷೇತ್ರದ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ನ್ಯೂಜಿಲೆಂಡ್‌ನ 28 ಹರೆಯದ ಎಲೆನಾರ್ ಕ್ಯಾಟನ್ ಪಾಲಾಗಿದೆ. ಈ ಸಾರಿಯ ಬುಕರ್ ಪ್ರಶಸ್ತಿಯ ಅಂತಿಮ ಸುತ್ತಿನಲ್ಲಿ ಭಾರತ- ಅಮೆರಿಕ ಮೂಲದ ಝುಂಪಾ ಲಾಹಿರಿ ಸೇರಿದಂತೆ ಐವರು ಲೇಖಕರ ಮಧ್ಯೆ ತೀವ್ರ ಪೈಪೋಟಿ ಇತ್ತು. ಆದರೆ, ಅಂತಿಮವಾಗಿ ಈ ಪ್ರಶಸ್ತಿ 28 ವರ್ಷದ ಕಾಟನ್ ಪಾಲಾಯಿತು. ಇಂಥ ಗೌರವಕ್ಕೆ ಪಾತ್ರರಾದ ಅತ್ಯಂತ ಕಿರಿಯ ಮಹಿಳೆ ಎಂಬ ಹೆಗ್ಗಳಿಕೆ ಕ್ಯಾಟನ್ ಅವರದ್ದು. ಕ್ಯಾಟನ್ ಬರೆದ 832 ಪುಟಗಳ 'ದ ಲ್ಯುಮಿನರೀಸ್'ಗೆ ಈ ಬಾರಿಯ ಮ್ಯಾನ್ ಬೂಕರ್ ಪ್ರಶಸ್ತಿ ಲಭಿಸಿದೆ.

**'ದ ಲ್ಯುಮಿನರೀಸ್':**

19ನೇ ಶತಮಾನದಲ್ಲಿ ನಡೆದ ಕೊಲೆಯ ಸುತ್ತ ನಡೆದ ಅವರು ಬರೆದ ಕಾದಂಬರಿ ರಚಿಸಿದ್ದಾರೆ. ಎಲೆನಾರ್ ಕ್ಯಾಟನ್ ಅವರಿಗೆ 48,94,000 ಮೊತ್ತದ ಬಹುಮಾನ (5 ಸಾವಿರ ಪೌಂಡ್) ದೊರೆತಿದೆ. ಲಂಡನ್‌ನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಕ್ಯಾಟನ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. 'ಪ್ರಶಸ್ತಿಯು ನನಗೆ ಮೌಲ್ಯ ಮತ್ತು ಯೋಗ್ಯತೆಯನ್ನು ತಂದುಕೊಟ್ಟಿದೆ' ಎಂದು ತಮ್ಮ 25 ನೇ ವಯಸ್ಸಿನಿಂದಲೇ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಕಾಟನ್ ಪ್ರತಿಕ್ರಿಯಿಸಿದ್ದಾರೆ.

**ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪರವರಿಗೆ "ನೃಪತುಂಗ ಸಾಹಿತ್ಯ ಪ್ರಶಸ್ತಿ"**

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಲಾಗಿರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಗೆ ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿ ತಿಳಿಸಿದ್ದಾರೆ. ಈ ಪ್ರಶಸ್ತಿಗೆ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದವರು ಭಾಜನರಾಗುತ್ತಾರೆ.

**ನೃಪತುಂಗ ಪ್ರಶಸ್ತಿ ಬಗ್ಗೆ:**

ಪ್ರಶಸ್ತಿಯು ಏಳು ಲಕ್ಷದ ಒಂದು ರೂಪಾಯಿ ನಗದು (ಜ್ಞಾನಪೀಠ ಪ್ರಶಸ್ತಿಗಿಂತ ಇದರ ಮೊತ್ತ 1 ರೂ. ಹೆಚ್ಚು) ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಪರಿಷತ್ತಿನ ಅಧ್ಯಕ್ಷ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ವ್ಯವಸ್ಥಾಪಕ ನಿರ್ದೇಶಕ, ಸಂಸ್ಥೆಯ ಕೇಂದ್ರೀಯ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಹಾಗೂ ಸಾಹಿತಿಗಳನ್ನು ಒಳಗೊಂಡ ಆರು ಮಂದಿಯ ಸಮಿತಿಯು 2013ರ ಸಾಲಿನ ಪ್ರಶಸ್ತಿಗೆ ಬರಗೂರು ಅವರ ಹೆಸರನ್ನು ಅಂತಿಮ ಗೊಳಿಸಿತು. ನವೆಂಬರ್ 12ರಂದು ನಗರದ ರವೀಂದ್ರ ಕಲಾ ಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. 2007ರಲ್ಲಿ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಉಪೇಂದ್ರ ತ್ರಿಪಾಠಿ ಅವರ ಆಸಕ್ತಿಯ ಫಲವಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಯಿತು. ಒಂದೂವರೆ ಕೋಟಿ ರೂಪಾಯಿಗಳ ಸ್ಥಾಯಿನಿಧಿಯಿಂದ ಬರುವ ಬಡ್ಡಿ ಹಣ ದಲ್ಲಿ ಪ್ರತಿ ವರ್ಷ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

**ಭಾರತದ "ಶ್ರೀಸ್ತಿ ರಣ"ಗೆ ಮಿಸ್ ಏಷ್ಯಾ ಫೆಸಿಫಿಕ್ 2013 ಪ್ರಶಸ್ತಿ**

ಹರಿಯಾಣ ಮೂಲದ ಸುಂದರಿ "ಶ್ರೀಸ್ತಿ ರಣ" ಅವರು ಮಿಸ್ ಏಷ್ಯಾ ಫೆಸಿಫಿಕ್ 2013 ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಕಳೆದ ವರ್ಷ ಈ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದ "ಹಿಮಂಗಿನಿ ಸಿಂಗ್ ಯದು" ಅವರು ಈ ಪ್ರಶಸ್ತಿಯನ್ನು ಶ್ರೀಸ್ತಿ ರಣ ಅವರ ಮುಡಿಗೆ ಮುಡಿಸಿದರು.

- ಸತತ ಎರಡನೇ ವರ್ಷ ಈ ಪ್ರಶಸ್ತಿಯ ಭಾರತೀಯರ ಪಾಲಾಗಿದೆ.
- ಈ ಪ್ರತಿಷ್ಠಿತ ಸೌಂದರ್ಯ ಸ್ಪರ್ಧೆಯಲ್ಲಿ ವಿವಿಧ ದೇಶಗಳ ಸುಮಾರು 49 ಕ್ಕೂ ಹೆಚ್ಚು ಸುಂದರಿಯರು ಭಾಗವಹಿಸಿದ್ದರು.
- ಈಜಿಪ್ಟ್ ನ "ಮೆರಿಯಮ್ ಜಿಯಾರ್ಜ್" ಪ್ರಥಮ ರನ್ನರ್ ಆಫ್ ಮತ್ತು ಕಜಕಿಸ್ತಾನದ "ಇವ್ಜೆನಿಯಾ ಲಿಶ್ನಿಯಾ" ಎರಡನೇ ರನ್ನರ್ ಆಫ್ ಆಗಿ ಹೊರಹೊಮ್ಮಿದ್ದಾರೆ.
- ಶ್ರೀಸ್ತಿ ರಣ ಅವರು ತೊಟ್ಟಿದ್ದ ಉಡುಪು ಸಹ ಅತ್ಯುತ್ತಮ ವಸ್ತ್ರವಿನ್ಯಾಸ ವಿಭಾಗದಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿತು.

- 1970 ರಲ್ಲಿ ಹಿರಿಯ ನಟಿ "ಝೀನಾತ್ ಅಮನ್" ಅವರು ಈ ಪ್ರಶಸ್ತಿಯನ್ನು ಪಡೆದ ಭಾರತದ ಮೊದಲಿಗರು. ರೂಪದರ್ಶಿ ತಾರಾ ಅನ್ನೆ ಫೊನ್ಸೆಕಾ 1973 ರಲ್ಲಿ ಈ ಪ್ರಶಸ್ತಿಯನ್ನು ಪಡೆದ ಎರಡನೇಯವರು. ಬಾಲಿವುಡ್ ನಟಿ ದಿಯಾ ಮಿರ್ಜಾ 2000 ರಲ್ಲಿ ಈ ಪ್ರಶಸ್ತಿಯನ್ನು ಪಡೆದ ಮತ್ತೊಬ್ಬರು.
- 1993 ರ ಸ್ಪರ್ಧೆಯಲ್ಲಿ ನಮ್ರತಾ ಶಿರೋಡ್ಕರ್ ರನ್ನರ್ ಅಪ್ ಆದ ಮೊದಲಿಗರು.

## ಚೂರು-ಪಾರು ಸುದ್ಧಿಗಳು

- **ನರಿಕುರುವಸ್ ಗೆ ಪರಿಶಿಷ್ಟ ಪಂಗಡ ಸ್ಥಾನಮಾನ**: ತಮಿಳುನಾಡಿನ ಅಲೆಮಾರಿ ಜನಾಂಗ ನರಿಕುರುವಸ್ ಗೆ ಪರಿಶಿಷ್ಠ ಸ್ಥಾನಮಾನವನ್ನು ಕೇಂದ್ರ ಸರ್ಕಾರ ನೀಡಿದೆ. ಕಾಡಿನಲ್ಲಿ ಭೇಟೆ ಆಡುವುದನ್ನೇ ಈ ಜನಾಂಗದ ಪ್ರಮುಖ ಕಸುಬು. ಪರಿಶಿಷ್ಠ ಪಂಗಡದ ಸ್ಥಾನಮಾನ ನೀಡುವಂತೆ ಈ ಜನಾಂಗ ಅನೇಕ ವರ್ಷಗಳಿಂದ ಬೇಡಿಕೆ ಇಟ್ಟಿತ್ತು.

- ಅಮೆರಿಕದ ನ್ಯಾಷನಲ್ ಅಕಾಡಮಿ ಆಫ್ ಇಂಜಿನಿಯರಿಂಗ್ ಸದಸ್ಯರಾಗಿ ರತನ್ ಟಾಟಾ: ಭಾರತದ ಕೈಗಾರಿಕಾ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ ಕಾರಣಕ್ಕಾಗಿ ಉದ್ಯಮಿ ರತನ್ ಟಾಟಾ ಅವರು ಅಮೆರಿಕದ ಪ್ರತಿಷ್ಠಿತ ನ್ಯಾಷನಲ್ ಅಕಾಡಮಿ ಆಫ್ ಇಂಜಿನಿಯರಿಂಗ್ ಸದಸ್ಯರಾಗಿ ಸೇರಿಸಿಕೊಳ್ಳಲು ನಿರ್ಧರಿಸಲಾಗಿದೆ. ಭಾನುವಾರ ರತನ್ ಟಾಟಾ ಈ ಸಂಸ್ಥೆಯನ್ನು ಸೇರಿಕೊಳ್ಳಲಿದ್ದಾರೆ. ನ್ಯಾಷನಲ್ ಅಕಾಡಮಿ ಆಫ್ ಇಂಜಿನಿಯರಿಂಗ್ ಒಂದು ಖಾಸಗಿ ಮತ್ತು ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಸರ್ಕಾರಕ್ಕೆ ಹೊಸ ಸಲಹೆ, ಸಹಕಾರ ನೀಡುವುದು, ಶಿಕ್ಷಣಕ್ಕೆ ಉತ್ತೇಜನ ನೀಡುವ ಕೆಲಸವನ್ನು ಈ ಸಂಸ್ಥೆ ಮಾಡುತ್ತದೆ. 1964ರಲ್ಲಿ ಇದನ್ನು ಸ್ಥಾಪಿಸಲಾಗಿದೆ. ನ್ಯಾಷನಲ್ ಅಕಾಡಮಿ ಆಫ್ ಇಂಜಿನಿಯರಿಂಗ್ ಈ ವರ್ಷ 69 ಹೊಸ ಸದಸ್ಯರು ಮತ್ತು 11 ವಿದೇಶಿ ಸಹವರ್ತಿಗಳನ್ನು ನೇಮಕ ಮಾಡಿಕೊಂಡಿದೆ.

- **ಸ್ಟೇಟ್ ಬ್ಯಾಂಕ್ ಇಂಡಿಯಾದ ಮುಖ್ಯಸ್ಥರಾಗಿ ಅರುಂಧತಿ ಭಟ್ಟಾಚಾರ್ಯ:** ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲೊಂದಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನೂತನ ಮುಖ್ಯಸ್ಥರಾಗಿ ಅರುಂಧತಿ ಭಟ್ಟಾಚಾರ್ಯ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಮೂಲಕ ಬ್ಯಾಂಕಿನ 207 ವರ್ಷಗಳ ಇತಿಹಾಸದಲ್ಲಿ ಮೊಟ್ಟಮೊದಲ ಮಹಿಳಾ ಮುಖ್ಯಸ್ಥೆ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಭಟ್ಟಾಚಾರ್ಯ ಅವರು ಈವರೆಗೆ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕಿ ಹಾಗೂ ಮುಖ್ಯ ಹಣಕಾಸು ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಎಸ್.ಬಿ.ಐ. ಮುಖ್ಯಸ್ಥ ಪ್ರತೀಪ್ ಚೌಧರಿ ಅವರು ನಿವೃತ್ತಿಯಾಗಿದ್ದು, ಅವರ ಸ್ಥಾನವನ್ನು ಭಟ್ಟಾಚಾರ್ಯ ಅವರು ಅಲಂಕರಿಸಿದ್ದಾರೆ. 1977ರಲ್ಲಿ ಪ್ರೊಬೆಷನರಿ ಅಧಿಕಾರಿಯಾಗಿ ಎಸ್.ಬಿ.ಐ.ಗೆ ಸೇರ್ಪಡೆಯಾಗಿದ್ದ ಭಟ್ಟಾಚಾರ್ಯ ಅವರು ತಮ್ಮ 36 ವರ್ಷಗಳ ವೃತ್ತಿಜೀವನದಲ್ಲಿ ರಿಟೇಲ್, ಖಜಾನೆ ಹಾಗೂ ಕಾರ್ಪೊರೇಟ್ ಹಣಕಾಸು ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ.

- ಅಮೆರಿಕದ ಕೇಂದ್ರೀಯ ಬ್ಯಾಂಕ್ ಮೊದಲ ಮಹಿಳಾ ಅಧ್ಯಕ್ಷರಾಗಿ ಜಾನೆಟ್ ಯಲನ್ ನೇಮಕ: ಅಮೆರಿಕದ ಕೇಂದ್ರೀಯ ಬ್ಯಾಂಕ್ 'ಫೆಡರಲ್ ರಿಸರ್ವ್'ನ ಮುಂದಿನ ಅಧ್ಯಕ್ಷರನ್ನಾಗಿ ಹಾಲಿ ಉಪಾಧ್ಯಕ್ಷೆ ಜಾನೆಟ್ ಯಲನ್ ಅವರನ್ನು ಅಧ್ಯಕ್ಷ ಬರಾಕ್ ಒಬಾಮಾ ನೇಮಕ ಮಾಡಿದ್ದಾರೆ. ಈ ಮೂಲಕ ಅಮೆರಿಕ ಫೆಡರಲ್ ಬ್ಯಾಂಕ್‌ನ ಮೊದಲ ಮಹಿಳಾ ಅಧ್ಯಕ್ಷೆ ಎನ್ನುವ ಗೌರವಕ್ಕೆ 67 ವರ್ಷದ ಜಾನೆಟ್ ಯಲನ್ ಪಾತ್ರರಾಗಲಿದ್ದಾರೆ. ಹಾಲಿ ಅಧ್ಯಕ್ಷ ಬೆನ್ ಬರ್ನಾಂಕೆ ಅವರ 8 ವರ್ಷಗಳ ಅಧಿಕಾರಾವಧಿ ಜನವರಿಯಲ್ಲಿ ಮುಕ್ತಾಯವಾಗಲಿದ್ದು, ಆ ಬಳಿಕ ಜಾನೆಟ್ ಯಲನ್ ಅಧ್ಯಕ್ಷರಾಗಲಿದ್ದಾರೆ.

- **ಎನ್.ಆರ್.ನಾರಾಯಣಮೂರ್ತಿ ಮತ್ತು ಮಲಾಲಾಗೆ 'ಬಸವಶ್ರೀ" ಪ್ರಶಸ್ತಿ:** ಮುರುಘಾಮಠ ಪ್ರತಿವರ್ಷ ನೀಡುವ ಬಸವಶ್ರೀ ಪ್ರಶಸ್ತಿಯನ್ನು 2013ನೇ ಸಾಲಿಗೆ ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ, 2014 ನೇ ಸಾಲಿಗೆ ಮಕ್ಕಳ ಹಕ್ಕು ಮತ್ತು ಶಿಕ್ಷಣ ಹೋರಾಟಗಾರ್ತಿ ಮಲಾಲಾ ಯೂಸುಫ್‌ಝಾಯ್ ಅವರಿಗೆ ನೀಡಲು ತೀರ್ಮಾನಿಸಲಾಗಿದೆ. ಎನ್.ಆರ್. ನಾರಾಯಣಮೂರ್ತಿ ಅವರಿಗೆ ಶರಣ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲು ವ್ಯವಸ್ಥೆ ಮಾಡಲಾಗಿತ್ತು. ಉಪಸ್ಥಿತಿ ಲಭ್ಯವಾಗದ ಕಾರಣ ಬರುವ ಜನವರಿಯಲ್ಲಿ ನೀಡಲು ನಿರ್ಧರಿಸಲಾಗಿದೆ. ತಾಲಿಬಾನಿಗಳ ವಿರುದ್ಧ ಧ್ವನಿ ಎತ್ತಿದ 16 ವರ್ಷದ ಪಾಕಿಸ್ತಾನದ ಸ್ವಾಟ್ ಜಿಲ್ಲೆಯ ಬಾಲಕಿ ಮಲಾಲಾಗೂ ನೀಡಲು ಉದ್ದೇಶಿಸಲಾಗಿದೆ. ಪ್ರಶಸ್ತಿ 5 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ.

- **ಕೋ- ಆಪರೇಟಿವ್ ಸೊಸೈಟಿಗಳು ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಯಿಂದ ಹೊರಕ್ಕೆ:** ಕೋ- ಆಪರೇಟಿವ್ ಸೊಸೈಟಿಗಳು ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಯಡಿ ಬರುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ. ಸರ್ಕಾರದ ನಿಯಂತ್ರಣದಲ್ಲಿದ್ದ ಮಾತ್ರಕ್ಕೆ ಯಾವುದೇ ಸಂಸ್ಥೆ ಸಾರ್ವಜನಿಕ ಸಂಸ್ಥೆಯಾಗುವುದಿಲ್ಲ ಎಂದು ಕೋರ್ಟ್ ಹೇಳಿದೆ.ಸೊಸೈಟಿಗಳನ್ನು ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್, ಸರ್ಕಾರ ಮತ್ತಿತರ ಶಾಸನಬದ್ಧ ಸಂಸ್ಥೆಗಳು ನಿಯಂತ್ರಿಸುತ್ತವೆ. ಹಾಗಂದ ಮಾತ್ರಕ್ಕೆ ಸೊಸೈಟಿಯ ವ್ಯವಹಾರಗಳನ್ನು ಸರ್ಕಾರ ನೇರವಾಗಿ ಅಥವಾ ಪರೋಕ್ಷವಾಗಿ ನಿಯಂತ್ರಿಸುತ್ತದೆ ಎಂದರ್ಥವಲ್ಲ. ಸೊಸೈಟಿಗಳ ವ್ಯವಹಾರಗಳು ವಿಸ್ತಾರವಾದ ವ್ಯಾಪ್ತಿ ಹೊಂದಿವೆ ಎಂದು ಅಭಿಪ್ರಾಯಪಟ್ಟಿದೆ. ಅಷ್ಟೇ ಅಲ್ಲದೆ ಸೊಸೈಟಿಗಳನ್ನು ನಿಯಂತ್ರಿಸುವ ಅಥವಾ ಮೇಲುಸ್ತುವಾರಿ ನೋಡಿಕೊಳ್ಳುವ ಅಧಿಕಾರವಷ್ಟೇ ರಿಜಿಸ್ಟ್ರಾರ್‌ಗಳಿಗಿದೆ ಎಂದಿದೆ.

- ದೇಶದ ಅತಿದೊಡ್ಡ ಗಸ್ತು ಹಡಗು 'ಐ.ಎನ್.ಎಸ್. ಸುನಯನ' ನೌಕಾಪಡೆಗೆ ಸೇರ್ಪಡೆ: ದೇಶದ ಅತಿದೊಡ್ಡ ಗಸ್ತುಹಡಗು 'ಐಎನ್‌ಎಸ್ ಸುನಯನ' ನೌಕಾಪಡೆಗೆ ಸೇರ್ಪಡೆಯಾಯಿತು. ಕೇರಳದ ಕೊಚ್ಚಿಯಲ್ಲಿ ವೈಸ್ ಅಡ್ಮಿರಲ್ ಸತೀಶ್ ಸೋನಿ ಅವರು ಹಡಗಿಗೆ ಚಾಲನೆ ನೀಡಿದರು. ಐಎನ್‌ಎಸ್ ಸುನಯನ ಒಟ್ಟು 105 ಮೀಟರ್ ಉದ್ದ ಹೊಂದಿದ್ದು, 76 ಎಂಎಂ ಸೂಪರ್ ರ್ಯಾಪಿಡ್ ಗನ್ ಮೌಂಟ್, ಕ್ಲೋಸ್-ಇನ್ ವೆಪನ್ ಸಿಸ್ಟಂ ಸೇರಿ ಆಧುನಿಕ ಸಂವಹನ, ನೇವಿಗೇಷನ್ ಹಾಗೂ ಎಲೆಕ್ಟ್ರಾನಿಕ್ ಯುದ್ಧ ಸಂಬಂಧಿ ಸಲಕರಣೆಗಳು ಒಳಗೊಂಡಿದೆ. ಕಡಲ್ಗಳ್ಳತನ-ನಿಗ್ರಹ ಗಸ್ತು, ಅತಿಕ್ರಮಣ-ನಿಗ್ರಹ ಸೇರಿದಂತೆ ಸಮುದ್ರ ಸಂಬಂಧಿ ಭದ್ರತಾ ಕಾರ್ಯಾಚರಣೆ ಕೈಗೊಳ್ಳಲಿದೆ. ಇದರಲ್ಲಿ ಒಟ್ಟು 8 ಅಧಿಕಾರಿಗಳು ಹಾಗೂ 105 ನಾವಿಕ ಸಿಬ್ಬಂದಿಯನ್ನು ಹೊಂದಿರಲಿದೆ.

- **ಸ್ವಿಸ್ ಬ್ಯಾಂಕ್ ಠೇವಣಿ ಕುರಿತ ತೆರಿಗೆ ಮಾಹಿತಿ ನೀಡಲು ಸ್ವಿಜರ್ಲೆಂಡ್ ಸರ್ಕಾರ ಒಪ್ಪಿಗೆ:** ಸ್ವಿಸ್ ಬ್ಯಾಂಕ್‌ಗಳಲ್ಲಿ ಕಪ್ಪು ಹಣ ಠೇವಣಿ ಕುರಿತಂತೆ, ಸ್ವಿಜರ್ಲೆಂಡ್ ಸರ್ಕಾರಕ್ಕೆ ವಿಶ್ವದ ವಿವಿಧ ದೇಶಗಳಿಂದ ಒತ್ತಡ ಉಂಟಾಗುತ್ತಿದ್ದಂತೆ, ಭಾರತವೂ ಸೇರಿದಂತೆ ವಿವಿಧ ದೇಶಗಳಿಗೆ ತೆರಿಗೆ ಮಾಹಿತಿಗಳನ್ನು ನೀಡಲು ಸ್ವಿಜರ್ಲೆಂಡ್ ಸಮ್ಮತಿಸಿದೆ. ಇದರಿಂದ ತೆರಿಗೆ ಮಾಹಿತಿಗಳನ್ನು ವಿವಿಧ ದೇಶಗಳ ಆಡಳಿತ ಮತ್ತು ಇಲಾಖೆಗಳೊಂದಿಗೆ ಸ್ವಿಸ್ ಸರ್ಕಾರ ಸ್ವಯಂಚಾಲಿತವಾಗಿ ವಿನಿಮಯ ಮಾಡಿಕೊಳ್ಳಲಿದೆ. ಈ ಸಂಬಂಧ ಸ್ವಿಸ್ ಸರ್ಕಾರ 58 ದೇಶಗಳೊಂದಿಗೆ ಒಪ್ಪಂದಕ್ಕೆ ಸಹಿಯನ್ನೂ ಹಾಕಿದೆ. ಸ್ವಿಸ್ ಬ್ಯಾಂಕ್‌ಗಳಲ್ಲಿ ಅಕ್ರಮ ಠೇವಣಿ ಸಂಗ್ರಹ, ಅಕ್ರಮ ಹಣಕಾಸು ವ್ಯವಹಾರಗಳ ಬಗ್ಗೆ ಭಾರತ ಸೇರಿದಂತೆ ವಿವಿಧ ದೇಶಗಳು ತಕರಾರು ತೆಗೆದಿದ್ದವು. ಈ ಹಿನ್ನೆಲೆಯಲ್ಲಿ ಪಾರದರ್ಶಕತೆ ಕಾಯಲು ಸ್ವಿಸ್ ಸರ್ಕಾರ ತೆರಿಗೆ ವಿನಿಮಯದ

ನಿರ್ಧಾರಕ್ಕೆ ಬಂದಿದೆ. 2012ರ ವೇಳೆಗೆ ಭಾರತೀಯರು ವಿವಿಧ ಸ್ವಿಸ್ ಬ್ಯಾಂಕ್‌ಗಳಲ್ಲಿಟ್ಟಿದ್ದ ಠೇವಣಿ 9 ಸಾವಿರ ಕೋಟಿಗೆ ಕುಸಿದಿದ್ದಾಗಿ ಸ್ವಿಸ್ ರಾಷ್ಟ್ರೀಯ ಬ್ಯಾಂಕ್ ಹೇಳಿತ್ತು. ಅದಕ್ಕೂ ಮುನ್ನ ಠೇವಣಿ 14 ಸಾವಿರ ಕೋಟಿ ರೂ.ಗಳಿತ್ತು.

- **ದೆಹಲಿ ವಿಧಾನಸಭಾ ಚುನಾವಣೆಗೆ ಕೊಹ್ಲಿ ಮತ್ತು ಸೋಹಾ ಅಲಿಖಾನ್ ಪ್ರಚಾರ ರಾಯಬಾರಿಗಳು:** ಡಿಸೆಂಬರ್ 4 ರಂದು ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡುವಂತೆ ಮನವೊಲಿಸುವ ನಿಟ್ಟಿನಲ್ಲಿ ಕ್ರಿಕೆಟಿಗ ವಿರಾಟ್ ಕೊಹ್ಲಿ ಮತ್ತು ನಟಿ ಸೋಹಾ ಅಲಿ ಖಾನ್ ಅವರನ್ನು ಪ್ರಚಾರ ರಾಯಭಾರಿಗಳನ್ನಾಗಿಬಳಸಿಕೊಳ್ಳಲು ಚುನಾವಣಾ ಆಯೋಗ ನಿರ್ಧರಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿ ಎಂದು ಟೀವಿ ಮತ್ತು ರೇಡಿಯೋಗಳಲ್ಲಿ ಪ್ರಸಾರ ಮಾಡುವ ಜಾಹೀರಾತುಗಳಲ್ಲಿ ಇವರಿಬ್ಬರೂ ಕಾಣಿಸಿಕೊಳ್ಳಲಿದ್ದಾರೆ. ದೆಹಲಿಯಲ್ಲಿ ಚುನಾವಣೆಯಲ್ಲಿ ಸರಾಸರಿ ಶೇ. 50-55 ರಷ್ಟು ಮತದಾನವಾಗುತ್ತಿದ್ದು, ಯುವ ಸಮುದಾಯ ಮತದಾನಕ್ಕೆ ಆಗಮಿಸುತ್ತಿಲ್ಲ. ಹೀಗಾಗಿ ಯುವ ಮತ್ತು ಮಹಿಳಾ ಮತದಾರರನ್ನು ಸೆಳೆಯಲು ಆಯೋಗ ಈ ಕ್ರಮ ಕೈಗೊಂಡಿದೆ.

- **ಐಪಿಎಲ್ ನಿಂದ ಸಹರಾ ಪುಣೆ ವಾರಿಯರ್ಸ್ ತಂಡ ವಜಾ:** ಐಪಿಎಲ್‌ನ ಕಳೆದ ಎರಡು ಆವೃತ್ತಿಗಳಲ್ಲಿ ಭಾಗವಹಿಸಿದ್ದ ಸಹರಾ ಪುಣೆ ವಾರಿಯರ್ಸ್ ತಂಡ ಈ ಪಂದ್ಯಾವಳಿಯಿಂದಲೇ ವಜಾಗೊಂಡಿದ್ದು, ಮುಂದಿನ ಐಪಿಎಲ್ ಆವೃತ್ತಿಯಲ್ಲಿ ಕೇವಲ 8 ತಂಡಗಳು ಮಾತ್ರ ಭಾಗವಹಿಸಲಿವೆ. ಸಹರಾ ಪುಣೆ ವಾರಿಯರ್ಸ್ ತಂಡ 170 ಕೋಟಿಯಷ್ಟು ವಾರ್ಷಿಕ ಬ್ಯಾಂಕ್ ಖಾತರಿ ಮೊತ್ತವನ್ನು ಪಾವತಿ ಮಾಡದ ಹಿನ್ನೆಲೆಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ), ಪುಣೆ ಫ್ರಾಂಚೈಸಿಯನ್ನು ಐಪಿಎಲ್‌ನಿಂದ ವಜಾಗೊಳಿಸಿದೆ. ಚೆನ್ನೈನಲ್ಲಿ ನಡೆದ ಕ್ರಿಕೆಟ್ ಮಂಡಳಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಬಿಸಿಸಿಐನ ಅಧಿಕಾರಿಗಳು ತಿಳಿಸಿದ್ದಾರೆ.

- **ಲಿಂಗ ಸಮಾನತೆಯಲ್ಲಿ 101 ನೇ ಸ್ಥಾನ ಪಡೆದ ಭಾರತ:** ಲಿಂಗ ಸಮಾನತೆಯಲ್ಲಿ ಭಾರತವು ಅತ್ಯಂತ ಕಳಪೆ ಎನ್ನಬಹುದಾದ 101ನೇ ಸ್ಥಾನವನ್ನು ಗಳಿಸಿದೆ. ಐಸ್‌ಲ್ಯಾಂಡ್, ಫಿನ್ಲಂಡ್, ನಾರ್ವೆ ಮತ್ತು ಸ್ವೀಡನ್ ಕ್ರಮವಾಗಿ ಮೊದಲ 4 ಸ್ಥಾನ ಪಡೆದಿವೆ. ಜಿನೇವಾ ಮೂಲದ ವಿಶ್ವ ಆರ್ಥಿಕ ವೇದಿಕೆ (ಡಬ್ಲ್ಯೂ ಇಎಫ್) ಸಿದ್ಧಪಡಿಸಿರುವ 136 ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ ಈ ಸ್ಥಾನ ಪ್ರಾಪ್ತಿಯಾಗಿದ್ದು, ದೇಶದಲ್ಲಿ ಗಂಡು-ಹೆಣ್ಣಿನ ಮಧ್ಯೆ ಎಷ್ಟು ಅಂತರವಿದೆ ಎಂಬುದನ್ನು ಸಾಬೀತುಪಡಿಸಿದೆ. ಮಹಿಳೆಯರು-ಪುರುಷರ ಮಧ್ಯೆ ವಿಶ್ವದ ವಿವಿಧ ದೇಶಗಳಲ್ಲಿ ಅರ್ಥವ್ಯವಸ್ಥೆ, ರಾಜಕೀಯ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಯಾವ ರೀತಿ ಸಮಾನತೆ ಇದೆ ಎಂಬುದನ್ನೂ ಡಬ್ಲ್ಯೂ ಇಎಫ್ ಸಮೀಕ್ಷೆ ನಡೆಸಿದೆ. ಸಮಾಧಾನದ ಸಂಗತಿಯೆಂದರೆ ರಾಜಕೀಯ ಕ್ಷೇತ್ರದ ಮಹಿಳಾ-ಪುರುಷ ಸಮಾನತೆಯಲ್ಲಿ ಭಾರತ 9ನೇ ಸ್ಥಾನ ಗಿಟ್ಟಿಸಿದೆ. ಆದರೆ ಆರೋಗ್ಯ ಕ್ಷೇತ್ರದಲ್ಲಿ 135, ಆರ್ಥಿಕ ಕ್ಷೇತ್ರದಲ್ಲಿ 124 ಮತ್ತು ಶಿಕ್ಷಣ ಕ್ಷೇತ್ರದಲ್ಲಿ 120ನೇ ಸ್ಥಾನ ಪಡೆದಿದೆ.

- **ವಿಶ್ವದ ಅತ್ಯಂತ ಆಳದ ಸುರಂಗ ಮಾರ್ಗ ಟರ್ಕಿಯಲ್ಲಿ ಚಾಲನೆ:** ಯುರೋಪ್ ಹಾಗೂ ಏಷ್ಯಾಕ್ಕೆ ಸಂಪರ್ಕ ಕಲ್ಪಿಸುವ, ರೈಲು ಸುರಂಗ ಮಾರ್ಗಕ್ಕೆ ಟರ್ಕಿ ಮಂಗಳವಾರ ಚಾಲನೆ ನೀಡಿತು.13.6 ಕಿ.ಮೀ.ದೂರದ, ಸಮುದ್ರತಳದಲ್ಲಿ 60 ಮೀಟರ್ ಆಳ ಇರುವ ಇದು, ವಿಶ್ವದಲ್ಲೇ ಅತ್ಯಂತ ಆಳದ ಸುರಂಗ ಮಾರ್ಗ ಎನ್ನುವುದು ವಿಶೇಷ. ಆಧುನಿಕ ಟರ್ಕಿ ಸ್ಥಾಪನೆಯಾಗಿ 90ನೇ ವರ್ಷಾಚರಣೆಯ ಸಂದರ್ಭದಲ್ಲೇ ಈ ಸುರಂಗ ಮಾರ್ಗ ಕಾರ್ಯಾರಂಭಕ್ಕೆ ಚಾಲನೆ

ನೀಡಲಾಗಿದೆ. 1860ರಲ್ಲೇ ಈ ಸುರಂಗ ಮಾರ್ಗದ ಪರಿಕಲ್ಪನೆ ಮೂಡಿತ್ತು. ವಿವಿಧ ಹಂತದಲ್ಲಿ ಈ ಬಗ್ಗೆ ಚರ್ಚೆ ನಡೆದರೂ ಅದು ಸಾಕಾರಗೊಳ್ಳಲು ಇಷ್ಟು ವರ್ಷ ಬೇಕಾಯಿತು.

- **ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಕೌಶಿಕ್ ಮುಖರ್ಜಿ:** ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ ಅವರನ್ನು ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ. ಮೂಲತಃ ಪಶ್ಚಿಮ ಬಂಗಾಳಕ್ಕೆ ಸೇರಿದ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಮುಖರ್ಜಿ ಅವರ ಸೇವಾವಧಿ 2015ರ ಸೆಪ್ಟೆಂಬರ್‌ವರೆಗೆ ಇದೆ. ಹಾಲಿ ಮುಖ್ಯ ಕಾರ್ಯದರ್ಶಿ ಯಾಗಿರುವ ಎಸ್.ವಿ. ರಂಗನಾಥ್ ಇದೇ 31ಕ್ಕೆ ಸೇವಾ ನಿವೃತ್ತಿ ಹೊಂದಲಿದ್ದು, ಅದೇ ದಿನ ಮುಖರ್ಜಿ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ದೆಹಲಿಯ ಐಐಟಿಯಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ನಲ್ಲಿ ಎಂ.ಟೆಕ್ ಹಾಗೂ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್‌ನಲ್ಲಿ ಎಂ.ಎಸ್ ಮಾಡಿರುವ ಮುಖರ್ಜಿ 1978ರ ಜುಲೈ 12ರಂದು ಐಎಎಸ್ ಅಧಿಕಾರಿಯಾಗಿ ನೇಮಕಗೊಂಡವರು.

- **ಹರ್ಯಾಣ ರಾಜ್ಯದ ಸಚಿವರಾಗಿ ದೇಶದ ಶ್ರೀಮಂತ ಮಹಿಳೆ:** ದೇಶದ ಶ್ರೀಮಂತ ಮಹಿಳೆ, ಉದ್ಯಮಿ ಸಾವಿತ್ರಿ ಜಿಂದಾಲ್ ಅವರು ಹರ್ಯಾಣ ರಾಜ್ಯದ ಸಚಿವರಾಗಿ ಆಯ್ಕೆಯಾಗಿದ್ದಾರೆ. ಹರ್ಯಾಣ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಸರ್ಕಾರದಲ್ಲಿ ಸಚಿವರಾಗಿರುವುದು ಇದು ಎರಡನೇ ಬಾರಿ. 2005-09 ಅವಧಿಯಲ್ಲಿಯೂ ಸಾವಿತ್ರಿ ಸಂಪುಟ ಸಚಿವರಾಗಿದ್ದರು. ಸಾವಿತ್ರಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಹಿಸ್ಸಾರ್ ಮತಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಖ್ಯಾತ ಉದ್ಯಮಿ ಹಾಗೂ ಸಂಸದ ನವೀನ್ ಜಿಂದಾಲ್ ತಾಯಿಯಾಗಿದ್ದಾರೆ.

- **ವೀಸಾ ವಂಚನೆಗಾಗಿ 207 ಕೋಟಿ ರೂ ದಂಡ ಪಾವತಿಗೆ ಇನ್ಫೋಸಿಸ್ ಸಮ್ಮತಿ:** ಉದ್ಯೋಗಿಗಳಿಗೆ ಅಮೆರಿಕ ವೀಸಾ ವಿಷಯದಲ್ಲಿ 207 ಕೋಟಿ ರೂ. ದಂಡ ಪಾವತಿಸಲು ಐಟಿ ದಿಗ್ಗಜ ಇನ್ಫೋಸಿಸ್ ಸಮ್ಮತಿಸಿದೆ. ಕೆಲಸದ ಮೇಲೆ ಅಮೆರಿಕಕ್ಕೆ ತೆರಳುವ ಉದ್ಯೋಗಿಗಳಿಗೆ ಕಾರ್ಮಿಕ ವೀಸಾ ನೀಡುವ ಬದಲು ಸಂದರ್ಶಕ ವೀಸಾ ನೀಡಿ ವಂಚಿಸಿದ ಆರೋಪ ಇನ್ಫೋಸಿಸ್ ಮೇಲಿದ್ದು, ಈ ಬಗ್ಗೆ ಅಮೆರಿಕದಲ್ಲಿ 2011ರಿಂದ ಪ್ರಕರಣ ತನಿಖೆಯಲ್ಲಿತ್ತು. ಆದರೆ ಕಂಪನಿ ಈ ಬಗ್ಗೆ ಸ್ಪಷ್ಟೀಕರಣ ನೀಡಿದ್ದು, ನಮ್ಮ ವಿರುದ್ಧ ಯಾವುದೇ ಕ್ರಿಮಿನಲ್ ಆಪಾದನೆಗಳು ಮತ್ತು ಕೋರ್ಟ್ ಆದೇಶಗಳಿಲ್ಲ. ಅಲ್ಲದೇ ಅಮೆರಿಕ ಫೆಡರಲ್ ಒಪ್ಪಂದದ ಕುರಿತಂತೆ ಕಂಪನಿ ಅರ್ಹತೆಗಳಿಗೆ ಯಾವುದೇ ಮಿತಿಗಳನ್ನೂ ನಿಗದಿಪಡಿಸಿಲ್ಲ. ಅಮೆರಿಕ ವೀಸಾ ಕಾರ್ಯಕ್ರಮಗಳ ಅನ್ವಯ ಈ ಪಾವತಿ ಮಾಡಲಾಗುತ್ತಿದೆ. ಹೊರತಾಗಿ ಯಾವುದೇ ವಂಚನೆ ಎಸಗಿಲ್ಲ ಎಂದು ಇನ್ಫೋಸಿಸ್ ಸ್ಪಷ್ಟನೆ ನೀಡಿದೆ.

- **ವಿಶ್ವ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ ಇತಿಹಾಸ ನಿರ್ಮಿಸಿದ ಸೌರವ್ ಘೋಶಾಲ್ :** ಭಾರತದ ಸೌರವ್ ಘೋಶಾಲ್ ವಿಶ್ವ ಸ್ಕ್ವಾಷ್ ಚಾಂಪಿಯನ್‌ಶಿಪ್‌ನ ಕ್ವಾರ್ಟರ್‌ಫೈನಲ್ ಪ್ರವೇಶಿಸುವ ಮೂಲಕ ಇತಿಹಾಸ ನಿರ್ಮಿಸಿದರು.ವಿಶ್ವದ ನಂ.17ನೇ ಆಟಗಾರ ಘೋಶಾಲ್ ಅವರು ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಶ್ರೇಯಾಂಕ ಪಡೆಯದ ಹೆನ್ರಿಕ್ ಮುಸ್ಟೋನೆನ್ ಅವರನ್ನು 3-2 ಅಂತರದಿಂದ ಪರಾಭವಗೊಳಿಸಿದರು. ಇದರೊಂದಿಗೆ ಘೋಶಾಲ್ ಅವರು ವಿಶ್ವಚಾಂಪಿಯನ್‌ಶಿಪ್‌ನಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಭಾರತದ ಮೊದಲ ಆಟಗಾರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

- **ಭಾರತದ ಮೂರು ಉದ್ದಿಮೆಗಳಿಗೆ ವಿಶ್ವಸಂಸ್ಥೆಯ ಪರಿಸರ ಪ್ರಶಸ್ತಿ :** ಸಮಗ್ರ ಅಭಿವೃದ್ಧಿ ಪ್ರೋತ್ಸಾಹಿಸಲು ಕೊಡುಗೆ ನೀಡಿದ ಭಾರತದ ಮೂರು ಉದ್ದಿಮೆಗಳಿಗೆ ವಿಶ್ವಸಂಸ್ಥೆಯ ಪರಿಸರ ಪ್ರಶಸ್ತಿ ಲಭಿಸಿದೆ. 'ತಾಂಬೂಲ್ ಲೀಫ್ ಪ್ಲೇಟ್ಸ್' 'ಪಾಲಿನೇಟ್ ಎನರ್ಜಿ' ಹಾಗೂ 'ಸಸ್ಟೇನ್‌ಟೆಕ್ ಇಂಡಿಯಾ' ಕಂಪೆನಿ ಗಳಿಗೆ 2013ರ ಸೀಡ್ ಪ್ರಶಸ್ತಿ ದೊರೆತಿದೆ. ವಿಶ್ವ ಸಂಸ್ಥೆಯ ಪರಿಸರ ವಿಭಾಗ ಈ ಪ್ರಶಸ್ತಿಗಳ ಘೋಷಣೆ ಮಾಡಿದ್ದು, ವಿವಿಧ ದೇಶಗಳ ಒಟ್ಟು 34 ಉದ್ದಿಮೆಗಳು ಪರಿಸರ ಪ್ರಶಸ್ತಿ ಪಡೆದಿವೆ. ದೀಪ ಉರಿಸಲು ಸೀಮೆಎಣ್ಣೆ ಮೇಲೆಯೇ ಅವಲಂಬಿತವಾಗುವ ಭಾರತದ ವಲಸೆ ಸಮುದಾಯಕ್ಕೆ ನೆರವಾಗುವಂತಹ ಯೋಜನೆಗಳನ್ನು ಹಮ್ಮಿಕೊಳ್ಳುವಲ್ಲಿ ಪಾಲಿನೇಟ್ ಎನರ್ಜಿ ತೊಡಗಿಕೊಂಡಿದೆ. 'ಸಸ್ಟೇನ್‌ಟೆಕ್ ಇಂಡಿಯಾ' ಕಂಪೆನಿಯು ಇಂಧನ ಉಳಿಸುವ ವಾಣಿಜ್ಯ ಬಳಕೆಯ ಅಡುಗೆ ಸ್ಟೌವ್‌ಗಳನ್ನು ತಯಾರಿಸುತ್ತಿದೆ. ತಾಂಬೂಲ್ ಲೀಫ್ ಪ್ಲೇಟ್ಸ್ ಈಶಾನ್ಯ ಭಾರತದ ಗ್ರಾಮೀಣ ಸಮುದಾಯದಲ್ಲಿ ಜೀವನೋಪಾಯಕ್ಕೆ ಅಡಿಕೆ ಹಾಳೆಗಳಿಂದ ತಟ್ಟೆಗಳನ್ನು ಮಾಡಲು ನೆರವಾಗಿದೆ.

- **ವೈ.ಚಂದ್ರಚೂಡ್ ಅಲಹಬಾದ್ ಹೈಕೋರ್ಟ್ ಮುಖ್ಯ ನ್ಯಾಯಾಧೀಶ:** ಡಿ.ವೈ.ಚಂದ್ರಚೂಡ್ ಅವರನ್ನು ಅಲಹಬಾದ್ ಹೈಕೋರ್ಟ್ ನ ಮುಖ್ಯ ನ್ಯಾಯಮೂರ್ತಿಗಳಾಗಿ ರಾಷ್ಟ್ರಪತಿ ನೇಮಕಮಾಡಿದ್ದಾರೆ. ಸಂವಿಧಾನದ ಪರಿಚ್ಛೇದ 217 ರ ಅಡಿ ರಾಷ್ಟ್ರಪತಿಗಳು ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿದ್ದಾರೆ. ಚಂದ್ರಚೂಡ ಅವರು ಈ ಹಿಂದೆ ಬಾಂಬೆ ಹೈಕೋರ್ಟ್ ನಲ್ಲಿ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. 1998-2000 ರ ವರೆಗೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಫ್ ಇಂಡಿಯಾ ಆಗಿ ಸಹ ಕಾರ್ಯನಿರ್ವಹಸಿದ್ದಾರೆ.